ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 24 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 247 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಶನಿವಾರ 24 ಡಿಸೆಂಬರ್ 2022

ಮಟ್ಕಾ ದಂಧೆ: 9 ಮಂದಿ ಬಂಧನ

ಕ್ರೈಂ ಬಾಕ್ಸ್

ಮೈಸೂರು, ಡಿ.23(ಆರ್‌ಕೆ)– ಮೈಸೂರಿನ ಮೂರು ಕಡೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಮಟ್ಕಾ ದಂಧೆ ನಡೆಸುತ್ತಿದ್ದ 9 ಮಂದಿಯನ್ನು ಬಂಧಿಸಿ ಅವರಿಂದ 33,330 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ಉದಯಗಿರಿ, ಎನ್.ಆರ್. ಮೊಹಲ್ಲಾ ನಿವಾಸಿಗಳಾದ ಖದೀರ್, ಚಾಂದ್, ಜಮೀರ್ ಸೇರಿದಂತೆ ಒಟ್ಟು 9 ಮಂದಿ ಬಂಧಿತರು. ಉದಯಗಿರಿಯ ಗೌಸಿಯಾನಗರ 'ಸಿ' ಬ್ಲಾಕ್, ಸುಲ್ತಾನ್ ರಸ್ತೆಯಲ್ಲಿರುವ ಖದೀರ್ ಕೇರಂ ಬೋರ್ಡ್ ಕ್ಲಬ್ ಮುಂಭಾಗ ಮಟ್ಕಾ ದಂಧೆ ನಡೆಸುತ್ತಿದ್ದ ನಾಲ್ವರನ್ನು ಬಂಧಿಸಿ ಅವರಿಂದ 18,110 ರೂ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಅದೇ ರೀತಿ ಗೌಸಿಯಾನಗರದ ಇಮ್ರಾನ್ ಟೀ ಸ್ಟಾಲ್ ಮುಂಭಾಗ ಹಾಗೂ ಎನ್.ಆರ್. ಮೊಹಲ್ಲಾದ ಬಿ.ಬಿ.ಕೇರಿ ಮಂಟೇಸ್ವಾಮಿಯ ದೇವಸ್ಥಾನ ರಸ್ತೆ, 1ನೇ ಕ್ರಾಸ್ ಮನೆಯೊಂದರ ಮುಂದೆಯೂ ಮಟ್ಕಾ ದಂಧೆ ನಡೆಸುತ್ತಿದ್ದು, ಐವರನ್ನು ಬಂಧಿಸಿ 15,229 ರೂ. ನಗದನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗಾಂಜಾ, ಛರಸ್ ಹೊಂದಿದ್ದ ಇಬ್ಬರ ಸೆರೆ

ಮೈಸೂರು, ಡಿ.23(ಆರ್‌ಕೆ)– ಅಕ್ರಮವಾಗಿ ಗಾಂಜಾ ಮತ್ತು ಛರಸ್ ಹೊಂದಿದ್ದ ಇಬ್ಬರನ್ನು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸಿಸಿಬಿ ಪೊಲೀಸರು ಡಿ.15 ರಂದು ಬಂಧಿಸಿದ್ದಾರೆ. ಮೈಸೂರಿನ ಉದಯಗಿರಿ ನಿವಾಸಿ ಫೈಜಲ್ ಹಾಗೂ ಆಲನಹಳ್ಳಿಯ ಸುರೇಶ್ ಬಂಧಿತರಾಗಿದ್ದು, ಅವರಿಂದ 1 ಕೆಜಿ 160 ಗ್ರಾಂ ಗಾಂಜಾ ಹಾಗೂ 126 ಗ್ರಾಂ ಛರಸ್ ಅನ್ನು ವಶಪಡಿಸಿಕೊಳ್ಳಲಾಗಿದೆ. ರಾಜೀವ್‌ನಗರ 2ನೇ ಹಂತದ ಸೈಯದ್ ಅಬ್ದುಲ್ ರೆಹಮಾನ್ ರಸ್ತೆಯಲ್ಲಿ ದಾಳಿ ನಡೆಸಿದ ಸಿಸಿಬಿ ಪೊಲೀಸರು, 70,000 ರೂ. ಮೌಲ್ಯದ 1.16 ಕೆಜಿ ಗಾಂಜಾ, ತೂಕದ ಯಂತ್ರ, 1,850 ರೂ. ನಗದನ್ನು ಹಾಗೂ 1 ದ್ವಿಚಕ್ರ ವಾಹನವನ್ನು ಫೈಜಲ್‌ನಿಂದ ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ತಿ.ನರಸೀಪುರ ರಸ್ತೆಯ ಆಲನಹಳ್ಳಿ ಕೆರೆಗೆ ಹೊಂದಿಕೊಂಡಂತೆ ಇರುವ ಅರಳಿಮರದ ಬಳಿ ಛರಸ್ ಮಾರಾಟ ಮಾಡುತ್ತಿದ್ದ ಸುರೇಶ್‌ನನ್ನು ಬಂಧಿಸಿದ ಪೊಲೀಸರು, 3.5 ಲಕ್ಷ ರೂ. ಮೌಲ್ಯದ 126 ಗ್ರಾಂ ಛರಸ್ ಹಾಗೂ ಒಂದು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಈ ದಾಳಿ ಕಾರ್ಯಾಚರಣೆಯಲ್ಲಿ ಸಿಸಿಬಿ ಎಸಿಪಿ ಸಿ.ಕೆ. ಅಶ್ವಥ್ ನಾರಾಯಣ, ಇನ್‌ಸ್ಪೆಕ್ಟರ್ ಜಿ. ಶೇಖರ್, ಸಿಬ್ಬಂದಿಗಳಾದ ಸಲೀಂ ಪಾಷ, ಸುರೇಶ್, ಪಿ.ಪ್ರಕಾಶ್, ಗಣೇಶ್, ಉಮಾ ಮಹೇಶ್, ನಭಿ ಪಟೇಲ್ ಇಂಗನಕಲ್ಲ ಹಾಗೂ ಇತರರು ಪಾಲ್ಗೊಂಡಿದ್ದರು.

ಆನ್‌ಲೈನ್‌ನಲ್ಲಿ ಮುಂದುವರೆದ ದೋಖಾ

ಪಾರ್ಟ್ ಟೈಂ ಜಾಬ್ ಆಮಿಷ
ಗೃಹಿಣಿಗೆ 2.72 ಲಕ್ಷ ರೂ. ವಂಚನೆ

ಮೈಸೂರು, ಡಿ.23–ಫೇಸ್‌ಬುಕ್‌ನಲ್ಲಿ ಪಾರ್ಟ್ ಟೈಂ ಜಾಬ್ ಲಿಂಕ್ ಕ್ಲಿಕ್ ಮಾಡಿದ ಗೃಹಿಣಿಯೋರ್ವರು 2.72 ಲಕ್ಷ ರೂ. ಕಳೆದುಕೊಂಡ ಬಗ್ಗೆ ವರದಿಯಾಗಿದೆ. ಪಿರಿಯಾಪಟ್ಟಣ ತಾಲೂಕು ಚಿಕ್ಕ ಬಯಲಾಳು ಗ್ರಾಮದ ಹೆಚ್.ಕೆ.ಹಂಸ ಹಣ ಕಳೆದುಕೊಂಡವರು. ಎಂ.ಕಾಂ. ಪದವೀಧರೆಯಾಗಿರುವ ಇವರು, ನ.20ರಂದು ತಮ್ಮ ಫೇಸ್‌ಬುಕ್‌ನಲ್ಲಿ ಪಾರ್ಟ್ ಟೈಂ ಜಾಬ್ ಬಗ್ಗೆ ಲಿಂಕ್ ಅನ್ನು ನೋಡಿ, ಅದರ ಮೇಲೆ ಕ್ಲಿಕ್ ಮಾಡಿದಾಗ 8373819228 ಸಂಖ್ಯೆಯ ವಾಟ್ಸಾಪ್ ಆಪ್ ಓಪನ್ ಆಗಿದೆ. ಅದರಲ್ಲಿ ಚಾಟ್ ಮಾಡಿದಾಗ ನಮ್ಮ ಪ್ರಾಡಕ್ಟ್‌ನ ಖರೀದಿ ಮೇಲೆ ಬೋನಸ್ ಹಣ ನಿಮ್ಮ ಖಾತೆಗೆ ಜಮೆ ಆಗುತ್ತದೆ ಎಂದು ತಿಳಿಸಿ ರಿಜಿಸ್ಟರ್ ಮಾಡಿಕೊಳ್ಳುವಂತೆ ಲಿಂಕ್‌ವೊಂದನ್ನು ರವಾನಿಸಲಾಗಿದೆ. ಹಂಸ ಅವರು ಸದರಿ ಲಿಂಕ್ ಮೇಲೆ ರಿಜಿಸ್ಟರ್ ಮಾಡಿಕೊಂಡು ನ.21ರಂದು 100 ರೂ. ವರ್ಗಾವಣೆ ಮಾಡಿದಾಗ ಅವರ ಖಾತೆಗೆ 160 ರೂ. ಜಮೆ ಆಗಿದೆ. ನಂತರ ಅವರು ನ.23ರವರೆಗೆ ಹಂತ ಹಂತವಾಗಿ 2,72,429 ರೂ. ವರ್ಗಾವಣೆ ಮಾಡಿ, ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಅವರು ನ.25ರಂದು ದೂರು ನೀಡಿ ಸ್ವೀಕೃತಿ ಪಡೆದಿದ್ದರಾದರೂ, ಈ ಪ್ರಕರಣ ಡಿ.20ರಂದು ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಎಫ್‌ಐಆರ್ ಆಗಿದೆ.

ಅಕ್ರಮ ಗ್ಯಾಸ್ ರಿ–ಫಿಲ್ಲಿಂಗ್; ಆರೋಪಿ ಬಂಧನ

ಮೈಸೂರು, ಡಿ.23–ಅಕ್ರಮವಾಗಿ ಗ್ಯಾಸ್ ರಿ–ಫಿಲ್ಲಿಂಗ್ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ಲಷ್ಕರ್ ಮೊಹಲ್ಲಾ 23ನೇ ಕ್ರಾಸ್ ನಿವಾಸಿ ಉಸ್ಮಾನ್ ಶರೀಫ್(30) ಬಂಧಿತ ಆರೋಪಿ.

ಈತನ ಮನೆಯಲ್ಲಿ ಅಕ್ರಮವಾಗಿ ಗ್ಯಾಸ್ ರಿ–ಫಿಲ್ಲಿಂಗ್ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಸಬ್ ಇನ್ಸ್‌ಪೆಕ್ಟರ್ ಶ್ರೀಮತಿ ಪ್ರತಿಭಾ ಜಂಗವಾಡ ಅವರು ಆಹಾರ ನಿರೀಕ್ಷಕರಾದ ಬಿ.ಎಸ್.ವೇಣುಗೋಪಾಲ್ ಅವರನ್ನು ಕರೆಸಿಕೊಂಡು ಆತನ ಮನೆ ಮೇಲೆ ದಾಳಿ ನಡೆಸಿ ಗೃಹ ಬಳಕೆಯ ಸಿಲಿಂಡರ್‌ಗಳು, ರಿ–ಫಿಲ್ಲಿಂಗ್ ರಾಡ್, ಎಲೆಕ್ಟ್ರಾನಿಕ್ ತೂಕದ ಯಂತ್ರ ಹಾಗೂ 1100 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಿಯಲ್ ಎಸ್ಟೇಟ್ ಕಂಪನಿಯಿಂದ ಉದ್ಯಮಿಗೆ 5.75 ಕೋಟಿ ವಂಚನೆ

ಮೈಸೂರು, ಡಿ.23–ಉದ್ಯಮಿಯೊಬ್ಬರಿಂದ ರಿಯಲ್ ಎಸ್ಟೇಟ್ ಕಂಪನಿಯಲ್ಲಿ 5.75 ಕೋಟಿ ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ಟಿ.ಸಿ.ಉದಯಕುಮಾರ್(55) ವಂಚನೆಗೊಳಗಾದವರಾಗಿದ್ದು, ಸಂತೋಷ್ ಶೆಲ್ಟರ್ ಪ್ರೈ.ಲಿ.ನ ಕೆ.ಶ್ರೀನಿವಾಸನ್, ಭಾಗ್ಯ ರತ್ನ, ಲಲಿತ, ಶ್ವೇತ ಮತ್ತು ಲೀಗಲ್ ಮಂಕ್ ಅಡ್ವೈಸರಿ ಪ್ರೈ.ಲಿ.ನ ಸಯ್ಯದ್ ಸಹಾಬುದ್ದೀನ್ ಆರೋಪಕ್ಕೆ ಒಳಗಾಗಿರುವವರು.

ಉದಯಕುಮಾರ್ ಅವರಿಗೆ ಶ್ರೀನಿವಾಸನ್ ಅವರು ಪರಿಚಯವಾಗಿ ಹಳ್ಳಿ ಬೋಗಾದಿಯಲ್ಲಿರುವ 4.18 ಎಕರೆ ಜಮೀನಿನಲ್ಲಿ ವಿಲ್ಲಾಗಳನ್ನು ನಿರ್ಮಿಸುವುದಾಗಿ ತಿಳಿಸಿದ್ದಲ್ಲದೇ, ಅವರನ್ನು ಸಂತೋಷ್ ಶೆಲ್ಟರ್ ಪ್ರೈ.ಲಿ.ನ ಎಂಡಿ ಮಾಡುವುದಾಗಿ ನಂಬಿಸಿ, 5.75 ಕೋಟಿ ರೂ. ಹೂಡಿಕೆ ಮಾಡಿಸಿಕೊಂಡಿದ್ದಾರೆ. ನಂತರ ಉದಯಕುಮಾರ್ ಅವರ ಡಿಜಿಟಲ್ ಸಹಿಯನ್ನು ದುರುಪಯೋಗಪಡಿಸಿಕೊಂಡು, ನಕಲಿ ರಾಜೀನಾಮೆ ಪತ್ರ ತಯಾರಿಸಿ ಅವರನ್ನು ಕಂಪನಿಯಿಂದ ಹೊರ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ. 2021ರಂದು ಉದಯಕುಮಾರ್ ಅವರು ಹಳ್ಳಿ ಬೋಗಾದಿಯ ಜಮೀನಿಗೆ ಹೋದಾಗ ಎಲ್ಲಾ ಆರೋಪಿಗಳೂ ಸೇರಿ ಇವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾರೆ ಎಂದು ಉದಯಕುಮಾರ್ 2021ರ ಆ.23ರಂದು ವಿಜಯನಗರ ಠಾಣೆಗೆ ದೂರು ನೀಡಿದ್ದು, ಸದರಿ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ನ್ಯಾಯಾಲಯದ ಅನುಮತಿ ಪಡೆದು ಸರಸ್ವತಿಪುರಂ ಠಾಣೆ ಪೊಲೀಸರು ಡಿ.20ರಂದು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ 506, 504, 120ಬಿ, 406, 420, 486, 471ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ರಾಜ್ಯದಲ್ಲಿ 17 ಮಂದಿಗೆ ಪಾಸಿಟಿವ್

ಬೆಂಗಳೂರು, ಡಿ.23– ರಾಜ್ಯದಲ್ಲಿ ಮತ್ತೆ ಕೊರೋನಾ ಉಲ್ಬಣಗೊಳ್ಳುವ ಆತಂಕ ಎದುರಾಗಿದ್ದು, ರಾಜ್ಯ ಸರ್ಕಾರ ಹಲವು ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದೆ. ಈ ಮಧ್ಯ ರಾಜ್ಯದಲ್ಲಿ ಕಳೆದ 24 ಗಂಟೆಯಲ್ಲಿ 17 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,71,760ಕ್ಕೆ ಏರಿಕೆಯಾಗಿದೆ.

ನಿಧನ



ಶ್ರೀಮತಿ ಸುಭದ್ರ

ಮೈಸೂರು, ಡಿ.23–ಮೈಸೂರು ವಿಜಯನಗರ ಎರಡನೇ ಹಂತದ ನಿವಾಸಿ ಶ್ರೀಮತಿ ಸುಭದ್ರ ಅವರು ಉಸಿರಾಟ ತೊಂದರೆಯಿಂದ ಇಂದು ಮಧ್ಯಾಹ್ನ 2.35ರಲ್ಲಿ ನಿಧನರಾದರು. ಇವರಿಗೆ 85 ವರ್ಷ ವಯಸ್ಸಾಗಿತ್ತು. ಮೃತರು ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ನಾಳೆ(ಶನಿವಾರ) ಬೆಳಗ್ಗೆ 11 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರೆಯಡ ಎಂ.ಮುದ್ದಪ್ಪ



ಮೈಸೂರಿನ ಹೊರ ವಲಯದ ಹೂಟಗಳ್ಳಿ (ಸರಸ್ವತಿ ಕನ್ವೆನ್ಷನ್ ಹಾಲ್ ಬಳಿ) ನಿವಾಸಿ ಅರೆಯಡ ಎಂ.ಮುದ್ದಪ್ಪ(78) ಅವರು ಇಂದು ನಿಧನರಾದರು. ಇವರು ಪುತ್ರ ಎ.ಎಂ. ಮಂದಣ್ಣ, ಪುತ್ರಿ ಕಾವೇರಮ್ಮ ಅಶಿಶ್, ಅಳಿಯ, ಮೊಮ್ಮಕ್ಕಳು ಸೇರಿ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಶನಿವಾರ) ಬೆಳಗ್ಗೆ 11 ಗಂಟೆಗೆ ಹೂಟಗಳ್ಳಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಪರಿಶಿಷ್ಟ ಪಂಗಡಕ್ಕೆ ಕುರುಬ ಸಮುದಾಯ ಸೇರ್ಪಡೆಗೆ ಆಗ್ರಹಿಸಿ
ಡಿ.27ರಂದು ಸುವರ್ಣ ಸೌಧದ ಮುಂದೆ ಪ್ರತಿಭಟನೆ

- ಮೂರು ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ
- ಮೈಸೂರು–ಚಾ.ನಗರದಿಂದ 25 ಸಾವಿರಕ್ಕೂ ಅಧಿಕ ಮಂದಿ ಭಾಗಿ



ಮೈಸೂರು, ಡಿ.23(ಎಂಟಿವೈ)– ಕುರುಬ ಸಮುದಾಯವನ್ನು ಪ್ರವರ್ಗ 2ಎ ಯಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸಿ ಡಿ.27ರಂದು ಬೆಳಗ್ಗೆ 11 ಗಂಟೆಗೆ ಬೆಳಗಾವಿಯ ಸುವರ್ಣ ಸೌಧದ ಮುಂಭಾಗ ನಡೆಸಲು ಉದ್ದೇಶಿಸಿರುವ ಪ್ರತಿಭಟನೆಯಲ್ಲಿ 3 ಲಕ್ಷಕ್ಕೂ ಹೆಚ್ಚು ಮಂದಿ ಸಮುದಾಯದ ಜನರು ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕರ್ನಾಟಕ ಸರ್ಕಾರದಿಂದ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಪರಿಶಿಷ್ಟ ಮತ್ತು ಬುಡಕಟ್ಟು ಇಲಾಖೆಯ ನಿರ್ದೇಶಕರಿಂದ ಪಡೆದು, ಸದರಿ ವರದಿಯನ್ನು ಸಚಿವ ಸಂಪುಟದಲ್ಲಿಟ್ಟು ಚರ್ಚಿಸಿ, ಅನುಮೋದನೆ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸರ್ಕಾರವನ್ನು ಒತ್ತಾಯಿಸುವುದರೊಂದಿಗೆ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ(ಎಸ್‌ಟಿ) ಸೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಡಿ.27ರಂದು ಬೆಳಗ್ಗೆ 11 ಗಂಟೆಗೆ ಬೆಳಗಾವಿಯ ಸುವರ್ಣ ಸೌಧದ ಮುಂಭಾಗದ ಕೊಂಡಸ್ ಕೊಪ್ಪ(ಎ) ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಅವಕಾಶ ನೀಡಲಾಗಿದೆ. ಈಗಾಗಲೇ ಕನಕ ಗುರುಪೀಠ ಸ್ವಾಮೀಜಿ ಪಾದಯಾತ್ರೆ ನಡೆಸಿ, ಎಸ್‌ಟಿಗೆ ಕುರುಬ ಸಮುದಾಯವನ್ನು ಸೇರಿಸುವಂತೆ ಆಗ್ರಹಿಸಿದ್ದಾರೆ. ಹಲವು ಬಾರಿ ಪ್ರತಿಭಟನೆಯನ್ನೂ ಮಾಡಲಾಗಿದೆ. ಆದರೂ ರಾಜ್ಯ ಸರ್ಕಾರ ಕುರುಬ ಸಮುದಾಯವನ್ನು ನಿರ್ಲಕ್ಷಿಸುತ್ತಾ ಬಂದಿದೆ. ಕೂಡಲೇ ಕುಲಶಾಸ್ತ್ರೀಯ ಅಧ್ಯಯನದ ವರದಿ ಸ್ವೀಕರಿಸಿ, ಕೇಂದ್ರಕ್ಕೆ ಕಳುಹಿಸಿಕೊಡುವ ಮೂಲಕ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಆಗ್ರಹಿಸಿದರು.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳಲ್ಲಿ ಕುರುಬ ಸಮುದಾಯದ ನಾಯಕರು, ಮುಖಂಡರು, ಕಾರ್ಯಕರ್ತರು ಇದ್ದಾರೆ. ಆದರೆ, ಸಮುದಾಯದ ಹಿತಕಾಯುವ ವಿಚಾರದಲ್ಲಿ ಪಕ್ಷಬೇಧ ಮರೆತು ಒಂದಾಗುತ್ತೇವೆ. ಅದೇ ರೀತಿ ಪರಿಶಿಷ್ಟ ಪಂಗಡಕ್ಕೆ ಕುರುಬ ಸಮುದಾಯವನ್ನು ಸೇರಿಸಲು ನಡೆಸಲು ನಿರ್ಧರಿಸಿರುವ ಪ್ರತಿಭಟನೆಯಲ್ಲಿ ಎಲ್ಲಾ ಪಕ್ಷಗಳಲ್ಲಿರುವ ನಮ್ಮ ಸಮುದಾಯದ ಮುಖಂಡರು, ನಾಯಕರು ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ ಪ್ರದೇಶ ಕುರುಬರ ಸಂಘದ ನೇತೃತ್ವದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಪಕ್ಷಬೇಧ ಮರೆತು ಸುಮಾರು 3 ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳಲಿದ್ದಾರೆ. ಮೈಸೂರು–ಚಾಮರಾಜನಗರ ಜಿಲ್ಲೆಯಿಂದ 25 ಸಾವಿರಕ್ಕೂ ಹೆಚ್ಚು ಮಂದಿ ಬೆಳಗಾವಿಗೆ ತೆರಳಲಿದ್ದಾರೆ ಎಂದರು.

10 ದಿನಗಳ ಕಾಲ ನಡೆಯುವ ಅಧಿವೇಶನದಲ್ಲೇ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸಲು ಸರ್ಕಾರ ತನ್ನ ನಿರ್ಧಾರ ಪ್ರಕಟಿಸಬೇಕು. ಡಿ.27ರಂದು ನಮ್ಮ ಪ್ರತಿಭಟನೆ ನಡೆಯಲಿದ್ದು, ಅದಾದ ಬಳಿಕ ಎರಡು ದಿನ ಅಧಿವೇಶನ ನಡೆಯಲಿದೆ. ಈ ಅವಧಿಯಲ್ಲೇ ಕುರುಬ ಸಮುದಾಯಕ್ಕೆ ನ್ಯಾಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದ ಅವರು, ಅಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಧರಣಿ ನಡೆಸಿದ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಪ್ರತಿಭಟನೆಗೆ ಸಂಬಂಧಿಸಿದಂತೆ ಈಗಾಗಲೇ ಬೆಳಗಾಂ, ಗದಗ, ಬಿಜಾಪುರದಲ್ಲಿ ಪೂರ್ವಾಭಾವಿ ಸಭೆ ನಡೆಸಲಾಗಿದ್ದು, ಇಂದು ಮೈಸೂರಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ಮುಖಂಡರ ಸಭೆ ನಡೆಸಲಾಗಿದೆ. ಎಲ್ಲೆಡೆ ವ್ಯಾಪಕ ಬೆಂಬಲ ದೊರೆಯುತ್ತಿದ್ದು, ಶಾಂತಿಯುತವಾಗಿ ಪ್ರತಿಭಟನೆ ನಡೆಸಲಾಗುತ್ತದೆ ಎಂದರು.

ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರಾದ ಜೆ.ಗೋಪಿ, ಅಭಿಲಾಷ್, ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಬಸವರಾಜು, ಕೆಂಪಣ್ಣ, ಶಿವಣ್ಣ, ಕುನ್ನೇಗೌಡ, ಮಹೇಶ್, ಬಿ.ಎಂ. ಆನಂದ್, ಗಣೇಶ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಹಿನಕಲ್ ಉದಯ್, ಗಂಧನಹಳ್ಳಿ ಜಿ.ಹೇಮಂತ್ ಕುಮಾರ್, ಸೋಮಶೇಖರ್, ಮಹದೇವಸ್ವಾಮಿ, ನಂಜೇಗೌಡ, ನಾಡನಹಳ್ಳಿ ರವಿ, ಬಿಎಸ್‌ಎನ್‌ಎಲ್ ಮಾದೇಗೌಡ, ರಾಜೇಶ್ವರಿ, ಲೋಹಿತ್, ಅಭಿಷೇಕ್ ಮತ್ತಿತರರು ಪಾಲ್ಗೊಂಡಿದ್ದರು.

ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿ ಹೆಚ್ಚಳ ಸಂವಿಧಾನದ ಶೆಡ್ಯೂಲ್ 9ಕ್ಕೆ ಸೇರಿಸಲು ಯತ್ನ

ಬೆಂಗಳೂರು, ಡಿ.23(ಕೆಎಂಶಿ)– ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಶೇ.15ರಿಂದ ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.3ರಿಂದ ಶೇ.7ಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಿಸಲಾಗಿದ್ದು, ಇದನ್ನು ಸಂವಿಧಾನದ ಶೆಡ್ಯೂಲ್ 9ರಲ್ಲಿ ಸೇರ್ಪಡೆಗೊಳಿಸುವ ಪ್ರಯತ್ನ ಮಾಡಲಾಗುವುದು ಎಂದು ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ವಿಧಾನ ಪರಿಷತ್ತಿಗೆ ಭರವಸೆ ನೀಡಿದರು.

ಪ್ರಶ್ನೋತ್ತರ ವೇಳೆಯಲ್ಲಿ ಟಿ.ಎ.ಶರವಣ ಅವರ ಪರವಾಗಿ ತಿಪ್ಪೇಸ್ವಾಮಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ವಿಧೇಯಕವನ್ನು ಮಂಡಿಸಿ, ಒಪ್ಪಿಗೆ ಪಡೆಯಲಾಗುವುದು ಎಂದರು.



ಆನಂತರ ಸಂಸತ್ತಿನಲ್ಲೂ ಈ ಸಂಬಂಧದ ವಿಧೇಯಕ ಮಂಡಿಸಿ ಒಪ್ಪಿಗೆ ಪಡೆಯಲು ನಮ್ಮ ಸರ್ಕಾರ ಪ್ರಯತ್ನ ಮಾಡಲಿದೆ. ಸಂಸತ್ತಿನ ಒಪ್ಪಿಗೆ ಪಡೆದ ಬಳಿಕ ಈ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿರುವುದನ್ನು ಶೆಡ್ಯೂಲ್ ಒಂಬತ್ತಕ್ಕೆ ಸೇರ್ಪಡೆಗೊಳಿಸಲಾಗುವುದು. ಈ ನಿಟ್ಟಿನಲ್ಲಿ ಕಾನೂನು ಪ್ರಕ್ರಿಯೆಗಳನ್ನು ಸರ್ಕಾರ ಮಾಡುತ್ತಿದೆಯೆಂದು ಅವರು ಭರವಸೆ ನೀಡಿದರು. ಜನಸಂಖ್ಯೆಯ ಪ್ರಮಾಣವನ್ನು ಆಧರಿಸಿ ಈ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲಾಗಿದೆ. ಮೀಸಲಾತಿ ಪ್ರಮಾಣ ಶೇ50ರಷ್ಟು ಮೀರಬಾರದು ಎಂದು ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಆದೇಶಿಸಿರುವುದು ಗಮನದಲ್ಲಿದೆ ಎಂದರು. ಕರ್ನಾಟಕ ರಾಜ್ಯ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಪುನರ್ ಪರಿಶೀಲನೆ ಮಾಡಿದ ಬಳಿಕ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೆ.ಪಿ.ನಂಜುಂಡಿ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು ಕರ್ನಾಟಕ ರಾಜ್ಯ ಶಾಶ್ವತಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರು ಪುನರ್ ಪರಿಶೀಲನೆ ಮಾಡಿ ಸರ್ಕಾರಕ್ಕೆ ಸಲ್ಲಿಸಲಿದ್ದಾರೆ. ನಂಜುಂಡಿ ಅವರ ಪ್ರಶ್ನೆಯಲ್ಲಿ ಅರ್ಥವಿದೆ. ಹಿಂದುಳಿದ ವರ್ಗಗಳ ಆಯೋಗ ಈಗ ರಚನೆ ಆಗಿ ಕೆಲಸ ಮಾಡುತ್ತಿದೆ. ಸದ್ಯದಲ್ಲೇ ಆ ವರದಿಗೆ ಅಂತಿಮ ರೂಪ ಕೊಡುತ್ತೇವೆ ಎಂದರು.

ಮನೆಗೆ ನುಗ್ಗಿ ರೈತ ಮಹಿಳೆ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿ

ಮೇಲುಕೋಟೆ, ಡಿ. 23– ವಿಳಾಸ ಕೇಳುವ ನೆಪದಲ್ಲಿ ರೈತ ಮಹಿಳೆಯ ಮನೆಗೆ ನುಗ್ಗಿ ಚಾಕು ತೋರಿಸಿ, ಬೆದರಿಸಿ ಮಾಂಗಲ್ಯ ಸರ ಕಿತ್ತುಕೊಂಡು ಹೋದ ಘಟನೆ ಪಾಂಡವಪುರ ತಾಲೂಕು ಜಕ್ಕನಹಳ್ಳಿ ಗ್ರಾಮದಿಂದ ವರದಿಯಾಗಿದೆ. ನ್ಯಾಮನಹಳ್ಳಿ ಗ್ರಾಮದ ಲಕ್ಷ್ಮಮ್ಮ(47) ಸರ ಕಳೆದುಕೊಂಡವರಾಗಿದ್ದು, ಡಿಸೆಂಬರ್ 21ರಂದು ಬೆಳಗ್ಗೆ ಇವರು, ಜಕ್ಕನಹಳ್ಳಿ ಬಳಿ ಜಮೀನಿನಲ್ಲಿ ನಿರ್ಮಿಸಿರುವ ತಮ್ಮ ಮನೆಯಲ್ಲಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ರಸ್ತೆಯಲ್ಲಿ ಬೈಕ್ ನಿಲ್ಲಿಸಿ, ಇವರ ಮನೆ ಬಳಿ ಬಂದು ಯಾವುದೋ ವಿಳಾಸ ಕೇಳುತ್ತಾ ಅವರನ್ನು ಮನೆಯೊಳಗೆ ದೂಡಿಕೊಂಡು ಹೋಗಿದ್ದಾರೆ. ನಂತರ ಚಾಕು ತೋರಿಸಿ, ಬೆದರಿಸಿ ಅವರ ಕತ್ತಿನಲ್ಲಿದ್ದ 35 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಮನೆಯ ಹೊರಗಿನಿಂದ ಚಿಲಕ ಹಾಕಿಕೊಂಡು ಪರಾರಿಯಾಗಿದ್ದಾರೆ. ಲಕ್ಷ್ಮಮ್ಮನವರು ಕೂಗಿಕೊಂಡಾಗ ಪಕ್ಕದ ಜಮೀನಿನವರು ಬಂದು ಮನೆ ಬಾಗಿಲು ತೆರೆದು ಅವರನ್ನು ಸಮಾಧಾನ ಪಡಿಸಿದ್ದಾರೆ. ಈ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು, ಲೇಖನ– ಡಾ.ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ–ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ, 10.00 ಟಿ.ಆರ್. ಮಹಾಲಿಂಗಂ – ವೇಣುವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದಸಂಗೀತ–ಮರಿಸಿದ್ದಮ್ಮ ಮತ್ತು ತಂಡ, 1.00 ಪ್ರಗತಿಪಥ–ಶ್ರಮವೇವ ಜಯತಿ–ಯೋಜನೆ ಕುರಿತು ಮಾತನಾಡುತ್ತಾರೆ ಎಂ.ಎಸ್.ಪರಮಾನಂದ, 1.20 ಭಾವಗೀತೆ, 3.30 ಮಕ್ಕಳ ಮಂಟಪ – ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ "ಚದುರಂಗ" ರಚನೆ– ವಸುಮತಿ ಉಡುಪ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ, 4.30 ನೆನಪಿನಂಗಳ–ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರಸ್ವಾಮಿ ಅವರೊಂದಿಗೆ ಡಾ.ಎಂ.ಎಸ್.ವಿಜಯಾಹರನ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ "ತೋರಣ ಹೂರಣ" ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.15 ಚಳಿಗೆ ಬಳಲಿದ ಕವಿಗಳು, ಮಾತನಾಡುವವರು– ಡಾ. ಮಾಲತಿ ಕೆ., 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಶೋಭಿತ್ ಕುಮಾರ್ ನಹರ್– ಸಿತಾರ್ ವಾದನ, ಅನೂಪ್ ಕುಮಾರ್ ಬ್ಯಾನರ್ಜಿ – ತಬಲ

ಇಂದಿನ ಪಂಚಾಂಗ

24.12.2022 ಶನಿವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಪ್ರತಿಪತ್, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ, ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ತಜ್ಞ ಆಯುರ್ವೇದ ಸ್ತ್ರೀರೋಗ ವೈದ್ಯರಿಂದ ಆರೋಗ್ಯ ತಪಾಸಣೆ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 9 ರಿಂದ.

■ **ಪ್ರಗತಿ ವಿದ್ಯಾಕೇಂದ್ರ** ವಿದ್ಯಾರ್ಥಿ ಯಶೋ ವೈಭವ, ಮುಖ್ಯ ಅತಿಥಿಗಳು : ಕರ್ನಾಟಕ ಸಿವಿಲ್ ಡಿಫೆನ್ಸ್‌ನ ಹೆಚ್ಚುವರಿ ಚೀಫ್ ಕಮಾಂಡಿಂಗ್ ಅಧಿಕಾರಿ ಡಾ. ಪಿ.ಆರ್.ಎಸ್. ಚೇತನ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಅಧ್ಯಕ್ಷತೆ : ವಿಜಯ ವಿಠ್ಠಲ ವಿದ್ಯಾಸಂಸ್ಥೆ ಖಜಾಂಚಿ ಬಿ.ಎಸ್. ರವಿಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಕಲಾ ಸಂಭ್ರಮ, ಬೆಳಗ್ಗೆ 9.30ಕ್ಕೆ ಉದ್ಘಾಟನೆ : ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಡಿ. ಉದಯ್‌ಕುಮಾರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ. ನಾಗರಾಜು, ಉಪಸ್ಥಿತರು ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಮರೀಗೌಡ, ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ, ಅಧ್ಯಕ್ಷತೆ : ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ಕೌದಿ ಕಲೆ, ನರಸಿಮುಲು ಪಿ.ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಿಮಾಲಯ ಪ್ರತಿಷ್ಠಾನ:** ಅಂಕಣಕಾರ ಕೆ.ವಿ.ವಾಸು ಅವರು ರಚಿಸಿರುವ ಕಾತ್ಯಾಯಿನಿ ಮತ್ತು ಇತರ ಕಥೆಗಳು ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ವೈದ್ಯ ಸಾಹಿತಿ ಡಾ. ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಕೃತಿ ಬಿಡುಗಡೆ : ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕೃತಿ ಕುರಿತು ಮಾತನಾಡುವವರು : ಡಾ. ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕರಾದ ಡಾ. ಕೆ. ಲೀಲಾ ಪ್ರಕಾಶ್, ಮುಖ್ಯ ಅತಿಥಿಗಳು : ಹಿರಿಯ ಸಂಶೋಧಕ ಎನ್. ಅಶ್ವತ್ಥನಾರಾಯಣ, ಮುಕ್ತಕ ಸಾಹಿತಿ ಎಂ. ಮುತ್ತುಸ್ವಾಮಿ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಪ್ರೌಢ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ:** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಲ್.ರೇವಣ್ಣ ಸಿದ್ದಯ್ಯ, ಸ್ಥಳ: ವಿದ್ಯಾರ್ಥಿ ನಿಲಯದ ಆವರಣ, ಗಂಗೋತ್ರಿ ಬಡಾವಣೆ, ಬೆಳಗ್ಗೆ 11.30ಕ್ಕೆ.

■ **ಆರಾಧ್ಯ ಮಹಾಸಭಾ:** 2023ರ ದಿನದರ್ಶಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಮಹಾಸಭಾ ಅಧ್ಯಕ್ಷ ಪಿ.ನಾಗಭೂಷಣ ಆರಾಧ್ಯ, ದಿನದರ್ಶಿಕೆ ಬಿಡುಗಡೆ: ಸಿದ್ಧಾಂತಿ ಕೆ.ಜಿ.ಪುಟ್ಟಹೊನ್ನಯ್ಯ, ಮುಖ್ಯ ಅತಿಥಿಗಳು: ಸಂಸ್ಕೃತ ಉಪನ್ಯಾಸಕ ಎ.ಎನ್.ನಾಗಭೂಷಣ ಆರಾಧ್ಯ, ಸ್ಥಳ: ಮಹಾಸಭಾ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಶ್ರೀರಾಮಕೃಷ್ಣ ವಿದ್ಯಾಶಾಲಾ :** ಕಾಲೇಜು ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಬೆಂಗಳೂರಿನ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್‌ಮೇಷನ್ ಟೆಕ್ನಾಲಜಿ ನಿರ್ದೇಶಕ ಪ್ರೊ. ದೇಬಬ್ರತ ದಾಸ್, ಸ್ಥಳ: ವಿದ್ಯಾಶಾಲಾ ಆವರಣ, ಸಂಜೆ 5ಕ್ಕೆ.

■ **ಮೈಸೂರು ಅರಮನೆ ಮಂಡಳಿ :** ಸಂಜೆ 5ಕ್ಕೆ ಅರಮನೆ ಫಲಪುಷ್ಪ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಸ್.ಎ. ರಾಮದಾಸ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸಂಜೆ 6.15ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ, ಸಂಜೆ 6.30 ರಿಂದ ಯದುಕುಮಾರ್ ಅವರಿಂದ ವಾದ್ಯಗೋಷ್ಠಿ, ಸಂಜೆ 7.30 ರಿಂದ ಶ್ರೀ ನಿಮಿಷಾಂಬ ನೃತ್ಯಶಾಲೆಯ ಶ್ರೀಧರ್ ಜೈನ್ ಮತ್ತು ತಂಡದಿಂದ ಮೇರಾ ಭಾರತ್ ನೃತ್ಯ ಸಂಭ್ರಮ, ಸ್ಥಳ: ಅರಮನೆ ಆವರಣ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಗೌರವ ಅತಿಥಿಗಳು : ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ ಹೆಚ್. ರಾಜಶೇಖರ್, ಮುಖ್ಯ ಅತಿಥಿಗಳು : ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಸಮಾರೋಪ ಭಾಷಣ : ಸಾರ್ವಜನಿಕ ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ರಾಮಚಂದ್ರ ರಾಜೇ ಅರಸ್, ಸ್ಥಳ: ಶಾಲೆ ಆವರಣ, ಜೆ.ಪಿ.ನಗರ, ಸಂಜೆ 5.15ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.

■ **ಶ್ರೀ ಕೃಷ್ಣ ಗಾನಸಭಾ :** ಬ್ಯಾಡರಹಳ್ಳಿ ಸುಬ್ಬರಾಜೇ ಅರಸು ಅವರ ಸ್ಮರಣಾರ್ಥ ಎಚ್ಚಮ ನಾಯಕ ಐತಿಹಾಸ ನಾಟಕ ಪ್ರದರ್ಶನ, ನಿರ್ದೇಶನ : ರಂಗಸ್ವಾಮಿ, ಉದ್ಘಾಟನೆ : ರೋಟರಿ ಮೈಸೂರು ಪಶ್ಚಿಮ ಅಧ್ಯಕ್ಷ ಉಲ್ಲಾಸ್ ಪಂಡಿತ್, ಅಧ್ಯಕ್ಷತೆ : ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸು, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಜಿ.ಕೆ. ಸೀತಾಲಕ್ಷ್ಮಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.


ಕಂಚುಮಲ್ಲಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಸಾನ್ನಿಧ್ಯ: ಶ್ರೀ ಬಸವೇಶ್ವರ ಪಟ್ಟದ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಉದ್ಘಾಟನೆ: ಶಾಸಕ ಅನಿಲ್ ಚಿಕ್ಕಮಾದು, ಅಧ್ಯಕ್ಷತೆ: ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಮ್ಯಾ ಗೋವಿಂದೇಗೌಡ, ಧ್ವಜಾರೋಹಣ: ಗ್ರಾಪಂ ಉಪಾಧ್ಯಕ್ಷ ರಂಗಸ್ವಾಮಿ, ಪ್ರಾಸ್ತಾವಿಕ ನುಡಿ: ಕಾಲೇಜು ಪ್ರಿನ್ಸಿಪಾಲ್ ಎಂ.ಪಿ. ರೇವಣ್ಣ, ಮುಖ್ಯ ಅತಿಥಿಗಳು: ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಕೆ. ಈರೇಗೌಡ, ಗ್ರಾಪಂ ಸದಸ್ಯರಾದ ಶೇಖರ್, ಮಲ್ಲಿಗಮ್ಮ, ಸಂಜೆ 4.30ಕ್ಕೆ.

ಗದ್ದಿಗೆಯಲ್ಲಿಂದು

■ **ಹನುಮಂತೋತ್ಸವ ಸಮಿತಿ ಗದ್ದಿಗೆ:** ಶ್ರೀ ಆಂಜನೇಯಸ್ವಾಮಿ ಭವ್ಯ ಮೆರವಣಿಗೆ, ಸ್ಥಳ: ಗದ್ದಿಗೆ ಕೆಂಡಗಣ್ಣೇಶ್ವರಸ್ವಾಮಿ ದೇವಸ್ಥಾನದಿಂದ, ಸಾನ್ನಿಧ್ಯ: ಪ್ರಧಾನ ಅರ್ಚಕ ಕೆಂಡಗಣ್ಣಪ್ಪ, ಮಧ್ಯಾಹ್ನ 3ಕ್ಕೆ.

7ನೇ ವರ್ಷದ ಪುಣ್ಯಸ್ಮರಣೆ



ಇನ್ನಾಸಪ್ಪ

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷವಾಯಿತು. ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ. ನಿಮ್ಮನ್ನು ಸದಾ ಸ್ಮರಿಸುವ ನಿಮ್ಮ ಪತ್ನಿ, ಮಗ ಮತ್ತು ಕುಟುಂಬಸ್ಥರು







ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಾನು ಯಾವಾಗಲೂ ನಿಮ್ಮ ಹೃದಯದಲ್ಲೇ ಇರೋಕೆ ಇಷ್ಟಪಡ್ತೀನಿ
ಗಂಡ : ಸರಿ, ಹಾಗಾದ್ರೆ ಅಲ್ಲಿ ಬೇರೆ ಹೆಂಗಸರ ಜೊತೆ ಜಗಳ ಆಡ್ಬೇಡ...!

ಮೈಸೂರು ಮಿತ್ರ

ಶನಿವಾರ, 24 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸ್ವಯಂ ಶಿಸ್ತು ಎಂದರೆ ಸ್ನಾಯುಗಳಿದ್ದಂತೆ, ಹೆಚ್ಚು ಅಭ್ಯಾಸ ಮಾಡಿದಷ್ಟೂ ಹೆಚ್ಚು ದೃಢವಾಗುತ್ತದೆ – ಡೇನಿಯಲ್ ಗೋಲ್ಡ್‌ಸ್ಟೀನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸೌಟು ಬಲ್ಲದೆ ಸಾರಿನ ನಂಟು

ನಿಮ್ಮ ಪತ್ರಗಳು

ವಿಶೇಷ ರಕ್ಷಣಾತ್ಮಕ ಕಾನೂನುಗಳ ಅಗತ್ಯವಿದೆಯೇ?

ಮಾನ್ಯರೆ,

ಒಂದೆರಡು ದಿನಗಳ ಹಿಂದೆ ದಿನಪತ್ರಿಕೆಗಳಲ್ಲಿ ಒಂದು ಸುದ್ದಿ ಸದ್ದು ಮಾಡಿತು. ಅದೇನೆಂದರೆ ರಾಜ್ಯದ ಮಠಾಧೀಶರ ರಕ್ಷಣೆಗೆ ಒಂದಷ್ಟು ರಕ್ಷಣಾತ್ಮಕ ಕಾನೂನುಗಳನ್ನು ಜಾರಿ ಮಾಡಬೇಕೆನ್ನುವ ಬೇಡಿಕೆ! ಅರೆ, ಬಹಳ ಚೆನ್ನಾಗಿದೆ. ಇರುವ ಕಾನೂನುಗಳ ಬಗ್ಗೆ ಇವರಿಗೆ ನಂಬಿಕೆ ಇಲ್ಲವೇ? ಹಾಗಾದರೆ ಮುಂದೊಂದು ದಿನ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ನೌಕರರು, ಹಾಗೆಯೇ ಸರ್ಕಾರೇತರ ಸಂಸ್ಥೆಗಳು, ಸಿನಿಮಾ ನಟರು ಹೀಗೆ ವಿವಿಧ ಕ್ಷೇತ್ರಗಳ 'ಜನ' ತಮಗೂ ರಕ್ಷಣೆಗೆ 'ವಿಶೇಷ ಕಾನೂನುಗಳು' ಬೇಕು ಎಂದು ಬೇಡಿಕೆ ಇಡಬಹುದು. ಈ ದೇಶದಲ್ಲಿ ಇದು ವಿಶೇಷವೇ ಅಲ್ಲ! ಇರುವ ಕಾನೂನುಗಳೇ ಎಲ್ಲರಿಗೂ ರಕ್ಷಣೆ ನೀಡುತ್ತಿವೆ. ಹಾಗೆಯೇ ಹಣವಂತರ ಹಾಗೂ ಬಲದಿಂದ 'ಮುಷ್ಟಿ ರಕ್ಷಣೆ' ಪಡೆಯುತ್ತಿರುವುದೂ ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ.

ಇನ್ನು ಈ ಬೇಡಿಕೆ ಯಾಕೆ ಬಂದಿದೆ ಎಂಬುದು ಎಲ್ಲರಿಗೂ ತಿಳಿದಿದೆ. ವಿಶೇಷವಾಗಿ ಮುಖ್ಯವಾಗಿ ಮಠಾಧೀಶರುಗಳು ಜನರಿಗೆ ತಮ್ಮ ಬಗ್ಗೆ ಯಾವುದೇ ಸಂದರ್ಭದಲ್ಲಿ ಅನುಮಾನವೇ ಬಾರದಂತೆ, ತಮ್ಮ ಜೀವನ 'ತೆರೆದ ಪುಸ್ತಕ' ಇರುವ ರೀತಿಯಲ್ಲಿ ಬದುಕಬೇಕು. ಅಕಸ್ಮಾತ್(?) ಅನುಮಾನ ಬಂದರೆ ಅದಕ್ಕೆ ಅಗತ್ಯವಾದ ಮತ್ತು ನಂಬಲರ್ಹ ವಿವರಣೆ ನೀಡಬೇಕು. ಯಾಕೆಂದರೆ ಅವರಿಗೆ ಸಮಾಜ ಜನ ಗೌರವ, ಮನ್ನಣೆ, ವಿಧೇಯತೆ ಎಲ್ಲವನ್ನೂ ನೀಡಿರುತ್ತಾರೆ. ಜನರ ಋಣ ಅವರ ಮೇಲಿರುತ್ತದೆ. ಮಠಾಧೀಶರು ಒಂದು ರೀತಿಯಲ್ಲಿ 'ಅನಿಯಮಿತ' ಅಧಿಕಾರ ಹೊಂದಿರುತ್ತಾರೆ! ಇದು ಯಾರಿಗೂ ಕಾಣುವುದಿಲ್ಲ. ಆದರೆ ಇದು ಅಧಿಕಾರ ಚಲಾಯಿಸುವವರು ಮತ್ತು ಆ ಅಧಿಕಾರವನ್ನು ಒಪ್ಪಿಕೊಂಡಿರುವವರಿಗೆ ಮಾತ್ರ ಗೊತ್ತಿರುತ್ತದೆ!! ಇದರಿಂದಾಗಿ ಅವರ ಬಗ್ಗೆ ಜನರು ಗೌರವ, ಭಯ, ಭಕ್ತಿ ಎಲ್ಲವನ್ನೂ ಹೊಂದಿರುತ್ತಾರೆ. ಅಂದರೆ ಸಮಾಜವೇ ಅವರಿಗೆ ಎಲ್ಲವನ್ನೂ ಕೊಟ್ಟ ಮೇಲೆ ಬೇರೆ ಏನಿದೆ? ಸಮಾಜ ಅವರಿಂದ ಏನನ್ನೂ ನಿರೀಕ್ಷಿಸುವುದಿಲ್ಲ. ಆದರೆ ಅವರು ಏನನ್ನು ಮಾಡಬೇಕೋ ಅದನ್ನು ಮಾತ್ರ ಮಾಡಬೇಕು ಅಷ್ಟೆ! ಅದನ್ನು ಮಾತ್ರ ಸಮಾಜ ನಿರೀಕ್ಷಿಸುತ್ತದೆ. ಅವರು ಆಧ್ಯಾತ್ಮಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಮಾತ್ರ ಆಸಕ್ತಿ, ಕಾಳಜಿ ಹೊಂದಿರಬೇಕೆಂಬುದು ಸಮಾಜದ ನಿರೀಕ್ಷೆ.

ಮಠಾಧೀಶರು ತಮ್ಮ 'ವ್ಯವಹಾರಗಳು' ಅದಷ್ಟೂ ಆಧ್ಯಾತ್ಮಿಕ ಮತ್ತು ಧಾರ್ಮಿಕ ವಿಷಯಗಳಿಗೆ ಮಾತ್ರ ಸಂಬಂಧಿಸಿದಂತೆ ಇರುವಂತೆ ನೋಡಿಕೊಳ್ಳಬೇಕು. ಹೆಣ್ಣು, ಹೊನ್ನು, ಮಣ್ಣುಗಳಂತಹ ಲೌಕಿಕ ವಿಷಯಗಳಲ್ಲಿ ನಿರಾಸಕ್ತರಾಗಿರಬೇಕು. ಯಾಕೆಂದರೆ ಅವರು ಸಮಾಜದಲ್ಲಿ ಒಂದು ರೀತಿಯಲ್ಲಿ 'ಪ್ರಶ್ನಾತೀತ' ವ್ಯಕ್ತಿಯಾಗಿರುತ್ತಾರೆ. ಹೀಗಿರುವಾಗ ಅವರ ವ್ಯವಹಾರ, ನಡವಳಿಕೆ, ವ್ಯಕ್ತಿತ್ವ ಎಲ್ಲವೂ 'ಸಂಶಯಾತೀತ' ವಾಗಿರಬೇಕು. ಅವರು ವಿಶೇಷ ಕಾನೂನುಗಳನ್ನು ಕೇಳುವುದೇ ಒಂದು ರೀತಿಯಲ್ಲಿ ಸಂಶಯಾಸ್ಪದ ನಡವಳಿಕೆ. ಮಠಾಧೀಶನೊಬ್ಬ ತನ್ನ ಮೇಲೆ ಯಾವುದಾದರೂ ಆರೋಪ ಬಂದಾಗ ಕಾನೂನು ಅದರ ಕೆಲಸ ಮಾಡಲು ಬಿಡಬೇಕು. ಆತ ಸಿಲುಕಿದ್ದಾಗ ನ್ಯಾಯಾಲಯದಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸುವ ಅಗತ್ಯವೇ ಇರುವುದಿಲ್ಲ. ಏಕೆಂದರೆ ನಮ್ಮ ನ್ಯಾಯಾಂಗ ವ್ಯವಸ್ಥೆ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದು, 'ನೂರು ಅಪರಾಧಿಗಳು ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು'. ಹೀಗಿದ್ದಾಗ ಯಾರಿಗಾದರೂ ವಿಶೇಷ ರಕ್ಷಣಾತ್ಮಕ ಕಾನೂನುಗಳ ಅಗತ್ಯವಿದೆಯೇ?

–ರಾಜೇಶ್ ಮೂರ್ತಿ, ಹನಗೋಡು, ಹುಣಸೂರು ತಾ.

ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ಜಿಲ್ಲೆಯಲ್ಲಿರುವ ರಾಮಸ್ವಾಮಿ ಬಸ್ ನಿಲ್ದಾಣ ಅತೀ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರುವ ಬಸ್ ಹತ್ತುವ ನಿಲ್ದಾಣವಾಗಿದೆ. ಈ ನಿಲ್ದಾಣದಲ್ಲಿ ವಿದ್ಯಾರ್ಥಿಗಳು ಸಾರಿಗೆಯ ಕೊರತೆಯಿಂದ ಬಹಳಷ್ಟು ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಮೈಸೂರಿಗೆ ವಿದ್ಯಾಭ್ಯಾಸಕ್ಕೆ ಬರುವ ನಾವು ಬಹುತೇಕ ಗ್ರಾಮೀಣ ಭಾಗದವರಾಗಿದ್ದು, ನಮ್ಮ ನಮ್ಮ ಹಳ್ಳಿಗಳಲ್ಲಿರುವ ಮನೆಗಳಿಗೆ ಹೋಗಲು ತಡವಾಗುತ್ತಿದೆ. ಇದರಿಂದ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರುತ್ತಿದೆ. ಈ ನಿಲ್ದಾಣದಲ್ಲಿ ನಾವು ನೂಕು ನುಗ್ಗಲಿನಲ್ಲಿ ಬಸ್ ಹತ್ತುವ ಪರಿಸ್ಥಿತಿ ಉಂಟಾಗಿದೆ. ಮತ್ತು ಬಾಗಿಲ ಬಳಿ ನಿಂತು ಹೋಗುವ ಪರಿಸ್ಥಿತಿ ಉಂಟಾಗಿದೆ. ಕೆಲವು ಬಸ್ಸುಗಳು ನಿಲ್ಲಿಸದೆ ಹೋಗುತ್ತವೆ. ಇದರಿಂದ ನಾವು ಬಹಳ ಕಷ್ಟವನ್ನು ಅನುಭವಿಸುತ್ತಿದ್ದೇವೆ. ಆದ್ದರಿಂದ ಶಾಲಾ ಕಾಲೇಜುಗಳು ಬಿಡುವ ವೇಳೆಯಲ್ಲಿ ಹೆಚ್ಚಿನ ಬಸ್ ವ್ಯವಸ್ಥೆ ಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಸಾರಿಗೆ ಇಲಾಖೆಯವರು ಗಮನ ಹರಿಸಬೇಕಾಗಿ ಮನವಿ.

–ಪವನ್ ಎ., ಮಹಾರಾಜ ಕಾಲೇಜು ಮೈಸೂರು

ಸೃಜನಶೀಲ ಸಾಗರ

ಮಾನ್ಯರೆ,

ಇನ್ನೇನು ಹಾವೇರಿಯಲ್ಲಿ ಜರುಗಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಿಯೋಜಿತರಾಗಿರುವ ಡಾ. ದೊಡ್ಡರಂಗೇ ಗೌಡರು ನನ್ನ ಬಗೆಗೆ ಆದರದಿಂದ ಬರೆದಿರುವ ಕವನವೊಂದನ್ನು ಇಲ್ಲಿ ಸಾದರಪಡಿಸಬಯಸುತ್ತೇನೆ.

ಅರೆಬರೆ ತಿಳಿದ ಅಬ್ಬರ ಯುಗದ ।
ತಬ್ಬಿಬ್ಬು ಮಾಡುವ ಮಂದಿಯ ನಡುವೆ ।
ತುಂಬಿದ ಕೊಡ ಸಿಪಿಕೆ ।
ಇದು ನನ್ನ ಸ್ವಂತ ಗ್ರಹಿಕೆ! ।
ಡೋಲು ಬಾರಿಸಿ, ಡೌಮಿ ತೋರುವ ।
ಕೆಂಬೂತ ಸಂತೆಯ ಕೃತಕತೆ ನಡುವೆ ।
ನೈಜ ನವಿಲು ಸಿಪಿಕೆ ।
ಇದು ನನ್ನ ಮನದ ನಂಬಿಕೆ! ।
ಬಡಿವಾರದಿ ಬೀಗುತ ಬುಡಬುಡುಕೆ ಆಡಿಸುತ ।
ಬಿಂಕದ ಬಿನ್ನಾಣದ ಬುರುಡೆಗಳ ನಡುವೆ ।
ಮೆಲು ಮಾತಿನ ಮೇಧಾವಿ ಸಿಪಿಕೆ ।
ಅಪ್ಪಟ ಕವಿ ನಮ್ಮ ಸಿಪಿಕೆ!।
ಸೃಜನಶಿಲ ಸಾಗರ, ಸಾಹಸದ ಆಗರ !!

ನಿಂತಲ್ಲಿ, ಕುಳಿತಲ್ಲಿ ಕ್ಷಣಮಾತ್ರದಲ್ಲಿ ಕವಿತೆ ಕಟ್ಟುವ, ಹಾಡು ಮೂಡಿಸುವ ಮಹಾ ಪ್ರತಿಭಾವಂತ, ದೊಡ್ಡರಂಗೇಗೌಡರು. ಅವರ ಬದುಕೇ ಒಂದು ಭಾವತೀತ; ಪ್ರಾಥ!

ತುಳಿತ : ಮೈಸೂರಿನ ಯಾವುದಾದರೊಂದು ರಸ್ತೆಗೆ ನನ್ನ ಹೆಸರಿಡಬೇಕೆಂದು ಇತ್ತೀಚೆಗೆ 'ಮಿತ್ರ'ನಿಗೆ ಪತ್ರ ಬರೆದಿದ್ದಾರೆ. ಮಿರ್ಲೆ ಚಂದ್ರಶೇಖರ (ಅವರಿಗೆ ನಾನು ಆಭಾರಿ). ಆದರೆ ವಿಷಾದದ ಸಂಗತಿಯೇನೆಂದರೆ, ಒಂದು ವೇಳೆ ಹಾಗೆ ಮಾಡಿದರೆ, ಬಹುಜನ ನನ್ನನ್ನು ತುಳಿಯುತ್ತಾರಲ್ಲ ಎಂಬುದು!

ಸಾಮ್ಯ : ಆಗಾಗ ನಾನು ಕುವೆಂಪು ಅವರ 'ದಿಟದ ಮನೆ' ಎಂಬ ನುಡಿಗಟ್ಟನ್ನು ಬಳಸುವುದುಂಟು. ಇತ್ತೀಚೆಗೆ ನನ್ನ ಗಮನಕ್ಕೆ ಬಂತು, ಸ್ವಾಮಿ ವಿವೇಕಾನಂದರ 'Abode of Reality' ಎಂಬ ಉಕ್ತಿ! ಸಾಮ್ಯ ಆಕಸ್ಮಿಕವಿರಬಹುದು.

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.

ಓದುಗರ ಗಮನಕ್ಕೆ

'ಮೈಸೂರು ಮಿತ್ರ'ನ 23-12-2022ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿನಿಬಂಧದಲ್ಲಿ ಎಡದಿಂದ ಬಲಕ್ಕೆ ಸಂಖ್ಯೆ 4ರಲ್ಲಿ ಯಾವುದೇ ಪ್ರಶ್ನೆ ಇರುವುದಿಲ್ಲ. ಹೀಗಾಗಿ ಅದನ್ನು ಹೊರತುಪಡಿಸಿ, ಉಳಿದ ಪ್ರಶ್ನೆಗಳಿಗೆ ಉತ್ತರಿಸುವುದು. –ಸಂ.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಅಮೆರಿಕದಲ್ಲಿ ಆತಂಕ ಸೃಷ್ಟಿಸಿರುವ ಶೂಟೌಟ್

ಅಮೆರಿಕವು ಭೂಲೋಕದ ಸ್ವರ್ಗವೆಂಬ ಭಾವನೆ ಹೆಚ್ಚಿನ ಭಾರತೀಯರಲ್ಲಿದೆ. ಭಾರತದ ಪೋಷಕರು ತಮ್ಮ ಮಕ್ಕಳು ಅಮೇರಿಕಾದಲ್ಲಿ ಉದ್ಯೋಗಿಗಳಾಗಬೇಕೆಂದು ಕನಸು ಕಾಣುತ್ತಿದ್ದಾರೆ. ಅದಕ್ಕಾಗಿ ಎಲ್ಲಾ ರೀತಿಯ ಕಷ್ಟಗಳನ್ನು ಎದುರಿಸಿ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುತ್ತಾರೆ. ಆದರೆ ಅಮೆರಿಕದ ವಾಸ್ತವಿಕ ಚಿತ್ರಣ ಬೇರೆಯೇ ಇದೆ. 2018ರಲ್ಲಿ ನಡೆದ ಅಧ್ಯಯನದಲ್ಲಿ 195 ದೇಶಗಳಲ್ಲಿ ಅಮೇರಿಕದಲ್ಲಿ ಅತೀ ಹೆಚ್ಚು ಗುಂಡಿನ ದಾಳಿಗಳು, ಆತ್ಮಹತ್ಯೆ, ಹತ್ಯೆ, ದರೋಡೆ, ಅಪಹರಣಗಳು, ಅತ್ಯಾಚಾರಗಳಂತಹ ಅಪರಾಧ ಪ್ರಕರಣಗಳು ಸಂಭವಿಸಿದೆ. ಎಲ್ಲಕ್ಕಿಂತ ಅಪಾಯಕಾರಿಯಾಗಿರುವ ಸಾಮೂಹಿಕ ಗನ್ ಶೂಟಿಂಗ್ ಹತ್ಯೆಗಳು ತೀವ್ರ ಕಾನೂನು ಮತ್ತು ಶಿಸ್ತಿನ ಸಮಸ್ಯೆ ಸೃಷ್ಟಿಸಿವೆ.

ಅತಿಯಾದ ಸಮೃದ್ಧಿ ಅಮೆರಿಕದ ಸಮಸ್ಯೆಯಾಗಿದೆ. ಇದರಿಂದ ಸಾಮಾಜಿಕ ವ್ಯವಸ್ಥೆ ಶಿಥಿಲಗೊಂಡಿದೆ. ಭಾವನೆಗಳಿಲ್ಲದ ಬದುಕು, ಬಾಂಧವ್ಯವಿಲ್ಲದ ಬಂಧುತ್ವ, ತಮ್ಮ ಹೆತ್ತವರು ಯಾರೆಂದು ತಿಳಿಯದೇ ಹಾಸ್ಟೆಲ್‌ಗಳಲ್ಲಿ ಬೆಳೆಯುತ್ತಿರುವ ಮಕ್ಕಳು. ಈ ಕಾರಣಗಳಿಂದ ಕಾಡುತ್ತಿರುವ ಅನಾಥ ಪ್ರಜ್ಞೆಯಿಂದ ಎಳೆ ಮನಸ್ಸುಗಳಲ್ಲಾಗುತ್ತಿರುವ ಸಿಟ್ಟು, ಉದ್ವೇಗ, ಹತಾಶೆ, ಖಿನ್ನತೆ, ಕ್ರೌರ್ಯ, ಆಕ್ರಮಣಶೀಲ ಸ್ವಭಾವವು ಅಮೇರಿಕದ ಆಳುವವರಲ್ಲಿ ಆತಂಕ ಸೃಷ್ಟಿಸಿದೆ. My children and your children are playing with our children ಎಂಬ ವಾಕ್ಯವು ಅಮೆರಿಕದ ಸಾಮಾಜಿಕ ಜೀವನ ಪತನಗೊಂಡಿರುವುದನ್ನು ಸೂಚಿಸುತ್ತದೆ. ಇದಕ್ಕೆ ಪೂರಕವಾಗಿ ಅಮೆರಿಕದಲ್ಲಿ ಸುಲಭವಾಗಿ ಸಿಗುವ ಪಿಸ್ತೂಲ್ ಸಹಿತ ಮಾರಕಾಯುಧಗಳು ಅಪ್ರಚೋದಿತ ಅಪರಾಧಿಗಳಿಗೆ ಅವಕಾಶ ನೀಡುತ್ತಿದೆ. ಪರಿಣಾಮ ಅಮೇರಿಕದಲ್ಲಿ ಸಾಮೂಹಿಕ (Mass) ಗನ್ ಶೂಟಿಂಗ್ ಪ್ರಕರಣಗಳಲ್ಲಿ ಭಾರೀ ಏರಿಕೆಯಾಗಿದೆ. ಸಾವಿರಾರು ಜನರು ಸಾವಿಗೀಡಾಗಿದ್ದಾರೆ. ಆದರೆ ಅಮೇರಿಕವು ಜಗತ್ತಿನ ಯಾವುದೇ ದೇಶದಲ್ಲಿ ಈ ರೀತಿಯ ಘಟನೆಗಳಾದಲ್ಲಿ ಮಾನವ ಹಕ್ಕಿನ ಉಲ್ಲಂಘನೆ ಎಂದು ಆ ದೇಶದ ಸರಕಾರಗಳನ್ನು ತರಾಟೆಗೆ ತೆಗೆದುಕೊಳ್ಳುತ್ತದೆ.

ದೀಪಕ್ಕೆ ತನ್ನ ಕೆಳಗೆ ಕತ್ತಲೆ ಇದೆ ಎನ್ನುವುದರ ಅರಿವಿರುವುದಿಲ್ಲ ಎಂಬಂತೆ ಅಮೆರಿಕದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಕರಿಯರು, ಏಷ್ಯನ್‌ರ ವಿರುದ್ಧದ ದ್ವೇಷ ಅಮೇರಿಕದಲ್ಲಿ ಮಾನವೀಯ ಸಮಸ್ಯೆಗಳನ್ನು ಸೃಷ್ಟಿಸಿದೆ.

ಅಮೆರಿಕದ ರೋಗ ನಿಯಂತ್ರಣ ಮತ್ತು ಪ್ರತಿಬಂಧಕ ಮಂಡಲಿ (ಸಿಡಿಸಿ) ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯಲ್ಲಿ 2020ರಲ್ಲಿ ಅತೀ ಹೆಚ್ಚು ಹಿಂಸಾತ್ಮಕ ಶೂಟೌಟ್ ಪ್ರಕರಣಗಳು ಸಂಭವಿಸಿವೆ. ಭಾರಿ ಸಂಖ್ಯೆಯಲ್ಲಿ ಗುಂಡು ಹಾರಿಸಿ ಆತ್ಮಹತ್ಯೆ, ಹತ್ಯೆಗಳಾಗಿವೆ. ಸಿಡಿಸಿ ವರದಿಯಂತೆ ಪಿಸ್ತೂಲ್‌ನಿಂದ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಪಿಸ್ತೂಲ್‌ನಿಂದ ಹತ್ಯೆಯಾದವರ ಸಂಖ್ಯೆಗಿಂತ ಅಧಿಕವಾಗಿದೆ. 2020ರಲ್ಲಿ 24292 ಮಂದಿ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರೆ, ಸಾಮೂಹಿಕ ಗನ್ ಶೂಟೌಟ್‌ನಲ್ಲಿ 19384, ಪೊಲೀಸ್ ಕಾರ್ಯಾಚರಣೆಯಲ್ಲಿ 611, ಆಕಸ್ಮಿಕ ಗುಂಡು ಸಿಡಿಯುವಿಕೆಯಲ್ಲಿ 535 ಮಂದಿ ಹಾಗೂ 400 ಜನರು ಅಕಾರಣವಾಗಿ ಸಾವನ್ನಪ್ಪಿದ್ದು, ಒಟ್ಟು 45222 ಜನರು 2020ರಲ್ಲಿ ಪಿಸ್ತೂಲ್ ಹಾಗೂ ಇತರ ಆಧುನಿಕ ಶಸ್ತ್ರಗಳಿಂದ ಸಾವಿಗೀಡಾಗಿದ್ದಾರೆ. ಅಮೆರಿಕದಲ್ಲಿ ಈ ರೀತಿ ಸಾವಿನ ಪ್ರಮಾಣದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ 14.2% ಕಳೆದ ಐದು ವರ್ಷಕ್ಕಿಂತ ಶೇ. 25, ಕಳೆದ 2010 ರಿಂದ ಈ ವರ್ಷ ಶೇ. 43 ರಷ್ಟು ಏರಿಕೆಯಾಗಿದೆ. 2020ರಲ್ಲಿ ಅಮೆರಿಕದಲ್ಲಿ ಪಿಸ್ತೂಲ್‌ನಿಂದ ಹತ್ಯೆಯಾದವರ ಪ್ರಮಾಣ ಶೇ. 79. ಇದೇ ಅವಧಿಯಲ್ಲಿ ಬ್ರಿಟನ್‌ನಲ್ಲಿ ಶೇ. 4. ಕೆನಡಾದಲ್ಲಿ ಶೇ. 37 ಹಾಗೂ ಆಸ್ಟ್ರೇಲಿಯಾದಲ್ಲಿ ಶೇ. 13 ಆಗಿತ್ತು.

ಅಮೇರಿಕದ ನಾಗರಿಕರ ಬಳಿ ಇರುವ ಪಿಸ್ತೂಲ್‌ಗಳ ಪ್ರಮಾಣ: 2018ರಲ್ಲಿ ಸ್ವಿಟ್ಜರ್‌ಲೆಂಡ್‌ನ ಒಂದು ಸಂಸ್ಥೆ ಮಾಡಿದ ಸರ್ವೆಯಂತೆ ಜಗತ್ತಿನಲ್ಲಿ 390 ಮಿಲಿಯನ್ ಪಿಸ್ತೂಲ್ ಹಾಗೂ ಇತರ ಆಧುನಿಕ ಶಸ್ತ್ರಗಳು ಖಾಸಗಿ ವ್ಯಕ್ತಿಗಳ ಬಳಿ ಇದೆ. 2019 ರಿಂದ 2021ರ ಅವಧಿಯಲ್ಲಿ



> ಅತಿಯಾದ ಸಮೃದ್ಧಿ ಅಮೇರಿಕದ ಸಮಸ್ಯೆಯಾಗಿದೆ. ಇದರಿಂದ ಸಾಮಾಜಿಕ ವ್ಯವಸ್ಥೆ ಶಿಥಿಲಗೊಂಡಿದೆ. ಭಾವನೆಗಳಿಲ್ಲದ ಬದುಕು, ಬಾಂಧವ್ಯವಿಲ್ಲದ ಬಂಧುತ್ವ, ತಮ್ಮ ಹೆತ್ತವರು ಯಾರೆಂದು ತಿಳಿಯದೇ ಹಾಸ್ಟೆಲ್‌ಗಳಲ್ಲಿ ಬೆಳೆಯುತ್ತಿರುವ ಮಕ್ಕಳು. ಈ ಕಾರಣಗಳಿಂದ ಕಾಡುತ್ತಿರುವ ಅನಾಥ ಪ್ರಜ್ಞೆಯಿಂದ ಎಳೆ ಮನಸ್ಸುಗಳಲ್ಲಾಗುತ್ತಿರುವ ಸಿಟ್ಟು, ಉದ್ವೇಗ, ಹತಾಶೆ, ಖಿನ್ನತೆ, ಕ್ರೌರ್ಯ, ಆಕ್ರಮಣಶೀಲ ಸ್ವಭಾವವು ಅಮೇರಿಕದ ಆಳುವವರಲ್ಲಿ ಆತಂಕ ಸೃಷ್ಟಿಸಿದೆ.

ಅಮೇರಿಕದಲ್ಲಿ ಹೊಸದಾಗಿ 7.5 ಮಿಲಿಯನ್ ನಾಗರಿಕರು (ಜನಸಂಖ್ಯೆಯ ಶೇ. 3) ಪಿಸ್ತೂಲ್ ಅನ್ನು ಖರೀದಿಸಿದ್ದಾರೆ. ಈ ಸಂಖ್ಯೆ ಸೇರಿ ಪ್ರಸ್ತುತ 11 ಮಿಲಿಯನ್ ಅಮೆರಿಕದ ನಾಗರಿಕರು ಪಿಸ್ತೂಲ್ ಹೊಂದಿದ್ದಾರೆ. ಆಘಾತಕಾರಿ ಮಾಹಿತಿಯಂತೆ ಈ ಸಂಖ್ಯೆಯಲ್ಲಿ 5 ಮಿಲಿಯನ್ ಮಕ್ಕಳು ಪಿಸ್ತೂಲ್ ಹೊಂದಿದ್ದಾರೆ. ಹೊಸದಾಗಿ ಪಿಸ್ತೂಲ್ ಖರೀದಿಸಿದವರಲ್ಲಿ ಶೇ. 40 ರಷ್ಟು ಹೆಂಗಸರಾಗಿದ್ದಾರೆ. 2018 ರಲ್ಲಿ ಅಮೇರಿಕದಲ್ಲಿ ಪ್ರತಿ ಒಂದು ನೂರು ನಾಗರಿಕರ ಬಳಿ ಇದ್ದ ಶಸ್ತ್ರಗಳ ಪ್ರಮಾಣ 120.5, ಯೆಮೆನ್‌ನಲ್ಲಿ 52.8, ಕೆನಡಾ 34.7 ಹಾಗೂ ಸರ್ಬಿಯಾ ಮೊಂಟೆನಿಗ್ರೊ ದೇಶೀಯರ ಬಳಿ 39.1 ಪಿಸ್ತೂಲ್ ಹಾಗೂ ಇತರ ಮಾದರಿಯ ಆಧುನಿಕ ಶಸ್ತ್ರಗಳಿವೆ.

ಅಮೇರಿಕದಲ್ಲಿ ಮಾಸ್ ಶೂಟೌಟ್‌ನ ಕೆಲವು ಘಟನೆಗಳು: ದಿನಾಂಕ 12.4.2022 ರಂದು ನ್ಯೂಯಾರ್ಕ್ ಮೆಟ್ರೋ ಸ್ಟೇಷನ್‌ನಲ್ಲಿ ನಡೆದ ಶೂಟೌಟ್‌ನಲ್ಲಿ 5 ಜನ ಸಾವಿಗೀಡಾಗಿ 15ಕ್ಕೂ ಹೆಚ್ಚು ಜನರು ಗಾಯಗೊಂಡರು. ದಿ. 25.5.2022 ರಂದು ಟೆಕ್ಸಾಸ್‌ನ ರೊಬ್ ಎಲಿಮೆಂಟರಿ ಶಾಲೆಯಲ್ಲಿ ಓರ್ವ ಬಂಧೂಕುಧಾರಿ ನಡೆಸಿದ ಗುಂಡು ಹಾರಾಟದಲ್ಲಿ 18 ಮಕ್ಕಳು, ಮೂವರು ಶಿಕ್ಷಕರು ಬಲಿಯಾದರು. ಜೂನ್‌ನಲ್ಲಿ ವಾಷಿಂಗ್‌ಟನ್‌ನಲ್ಲಿ ನಡೆದ ಶೂಟೌಟ್‌ನಲ್ಲಿ ಪೊಲೀಸ್ ಅಧಿಕಾರಿ ಸಹಿತ 10 ಜನರ ಹತ್ಯೆಯಾಯಿತು. ದಿ. 14.5.2022 ರಲ್ಲಿ ನ್ಯೂಯಾರ್ಕ್ ಕರಿಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ಬಫೆಲೋ ನಗರದ ಒಂದು ಸೂಪರ್ ಮಾರ್ಕೆಟ್‌ನಲ್ಲಿ ಓರ್ವ 18ರ ಶ್ವೇತವರ್ಣೀಯ ಯುವಕ ಸ್ವಯಂಚಾಲಿತ ಪಿಸ್ತೂಲ್‌ನಿಂದ ಕರಿಯರ ಗುಂಪಿನ ಮೇಲೆ ಯದ್ವಾತದ್ವಾ ಗುಂಡು ಹಾರಿಸಿದ ಘಟನೆಯಲ್ಲಿ ಹತ್ತು ಕರಿಯರು ಸಾವಿಗೀಡಾದರು. ಈ ಹಲ್ಲೆ ನಡೆಸಿದ ಜೆಸ್‌ಡ್ರೋನ್ ತನ್ನ ಈ ಕೃತ್ಯವನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡುತ್ತಿದ್ದ ಆತ 180 ಪುಟಗಳ ತನ್ನ ಶ್ವೇತವರ್ಣೀಯರ ಪರ ಪ್ರಣಾಳಿಕೆಯಲ್ಲಿ ಶ್ವೇತ ರಾಷ್ಟ್ರವಾದ ಬೆಂಬಲಿಸುವ ಮಾಹಿತಿ ಇತ್ತು. ಇದರಲ್ಲಿ ಕರಿಯರ, ಏಷ್ಯನ್ನರ ವಿರುದ್ಧ ದ್ವೇಷಪೂರಿತ ಬರಹಗಳಿದ್ದವು. ಕರಿಯರು, ಏಷಿಯನ್ನರು ಸೇರಿ ಶ್ವೇತವರ್ಣೀಯರನ್ನು ಅಲ್ಪಸಂಖ್ಯಾತರಾಗಿ ಮಾಡಿ ಮೂಲೆ ಗುಂಪು ಮಾಡುತ್ತಾರೆಂದು ವಿಚಾರಣೆ ವೇಳೆ ತಿಳಿಸಿದ್ದ. ಬಫೆಲ್‌ನಗರದ ಎಫ್‌ಬಿಐ ಅಧಿಕಾರಿ ಸ್ಟೀಫನ್ ಇದೊಂದು ಜನಾಂಗೀಯ ದ್ವೇಷದಿಂದಾದ ಕ್ರೌರ್ಯ ಎಂದು ಬಿಬಿಸಿಗೆ ತಿಳಿಸಿದ್ದರು.

ಅಮೆರಿಕದಲ್ಲಿ 1968–2017ರ ಅವಧಿಯಲ್ಲಿ 15 ಲಕ್ಷ ನಾಗರಿಕರು ಅಪ್ರಚೋದಿತ ಗುಂಡು ಹಾರಾಟಕ್ಕೆ ಬಲಿಯಾಗಿದ್ದಾರೆ. ಇದು 1775 ರಿಂದ ಇದುವರೆಗೆ ನಡೆದ ಯುದ್ಧಗಳಲ್ಲಿ ಸಾವಿಗೀಡಾದ ಅಮೇರಿಕದ ಸೈನಿಕರ ಸಂಖ್ಯೆಗಿಂತ ಹೆಚ್ಚಾಗಿದೆ. ಈ ವರ್ಷ ಜನವರಿಯಿಂದ ಮೇವರೆಗೆ 200 ಶೂಟೌಟ್ ಪ್ರಕರಣಗಳಾಗಿವೆ. ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆಯ ವಿಮರ್ಶೆಯಂತೆ ಅಮೇರಿಕದ ಇಂದಿನ ಹಿಂಸಾಚಾರದ ಪರಿಸ್ಥಿತಿಗೆ ಪೊಲೀಸರ ಅತಿರೇಕ ಹಾಗೂ ಕರಿಯರ ವಿರುದ್ಧ ಪಕ್ಷಪಾತಪೂರ್ಣ ಧೋರಣೆಯು ಕಾರಣವಾಗಿದೆ. ಪತ್ರಿಕೆಯ ಅಂದಾಜಿನಂತೆ ಪ್ರತಿವರ್ಷ ಪೊಲೀಸ್ ಗೋಲಿಬಾರ್ ಅಥವಾ ಇತರ ಕಠಿಣ ಕ್ರಮಗಳಲ್ಲಿ ಸರಾಸರಿ ಒಂದು ಸಾವಿರ ಕರಿಯರು ಸಾವಿಗೀಡಾಗುತ್ತಿದ್ದಾರೆ. ಅಮೇರಿಕದ ಜನಸಂಖ್ಯೆಯಲ್ಲಿ ಶೇ. 13 ಕರಿಯರಾಗಿದ್ದಾರೆ. ಪೊಲೀಸ್ ಕ್ರಮಗಳಲ್ಲಿ ಸಾವಿಗೀಡಾಗಿರುವ ಕರಿಯರಲ್ಲಿ ಶೇ.9.5ರಷ್ಟು 20 ರಿಂದ 40 ವರ್ಷ ವಯಸ್ಸಿನವರಾಗಿದ್ದಾರೆ.

ಅಮೆರಿಕದಲ್ಲಿ ಖಾಸಗಿಯಾಗಿ ಜನರು ಪಿಸ್ತೂಲ್, ಬಂದೂಕಿನಂತಹ ಮಾರಕ ಅಯುಧ ಹೊಂದಿರುವ ಹಾಗೂ ಜನಾಂಗೀಯ ದ್ವೇಷ ಬಿತ್ತಿರುವ ಬಫೆಲ್ ಹತ್ಯಾಕಾಂಡ ರಾಜಕೀಯ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಸಾಮಾನ್ಯವಾಗಿ ಬಾಲಕರು, ಯುವಕರು ಖಿನ್ನತೆ, ಕ್ರೌರ್ಯ, ಮೋಜಿಗಾಗಿ ಶೂಟೌಟ್ ಮಾಡುವುದು ಅಮೆರಿಕದಲ್ಲಿ ಸಾಮಾನ್ಯವಾಗಿದೆ. ಇದನ್ನು ನಿಯಂತ್ರಿಸಬೇಕೆಂದು ಅಮೆರಿಕದ ಪ್ರಜ್ಞಾವಂತರು, ಕೆಲವು ರಾಜಕಾರಣಿಗಳು ಪ್ರತಿಪಾದಿಸುತ್ತಿದ್ದಾರೆ. ಪಿಸ್ತೂಲ್ ಪರವಾನಗಿ ನಿಯಮಗಳು ಬಿಗಿ ಇರಬೇಕೆಂದು ಶೇ.91ರಷ್ಟು ಡೆಮಾಕ್ರಾಟ್‌ಗಳು, ಶೇ.24ರಷ್ಟು ರಿಪಬ್ಲಿಕ್ ಪಕ್ಷದವರು ಹಾಗೂ 45ರಷ್ಟು ಸ್ವತಂತ್ರ ವ್ಯಕ್ತಿಗಳು ಪ್ರತಿಪಾದಿಸುತ್ತಿದ್ದಾರೆ. ಅಮೇರಿಕದ ನಾಗರಿಕರಲ್ಲಿ ಶೇ.52 ಬಿಗಿ ಕಾನೂನು ಬೇಕೆಂದರೆ ಶೇ.35 ಜನರು ಈಗಿನ ಕಾನೂನು ಸರಿ ಎನ್ನುತ್ತಿದ್ದಾರೆ. ಶೇ.11ರಷ್ಟು ಕಾನೂನು ಇನ್ನೂ ಸರಳವಾಗಬೇಕೆನ್ನುತ್ತಿದ್ದಾರೆ. ಆದರೆ ಅಮೆರಿಕನ್‌ರು ಆಯುಧ ಹೊಂದಿರುವುದು ತಮಗೆ ಸಂವಿಧಾನ ನೀಡಿರುವ ಹಕ್ಕು, ಅದನ್ನು ಕಸಿಯುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಶಸ್ತ್ರಾಸ್ತ್ರ ಉತ್ಪಾದನಾ ಕಂಪನಿಗಳು ಇಂತಹ ಕ್ರಮಗಳನ್ನು ವಿರೋಧಿಸಲು ಅಮೇರಿಕನ್‌ರಿಗೆ ಕುಮ್ಮಕ್ಕು ನೀಡುತ್ತಿರುವುದು ಕಂಡು ಬಂದಿದೆ.

ಜನಾಂಗೀಯ ದ್ವೇಷದಿಂದ ನಡೆದ ಬಫೆಲ್ ಹತ್ಯಾಕಾಂಡ ರಾಜಕೀಯ ವಲಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿದೆ. ಈ ಘಟನೆಯ ಹಿನ್ನೆಲೆಯಲ್ಲಿ ಈ ವರ್ಷ ಪ್ರಕಟವಾದ ವರದಿಯಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ 2021ರಲ್ಲಿ ಅಮೇರಿಕದಲ್ಲಿ ಜನಾಂಗೀಯ ನೆಲೆಯಲ್ಲಿ ಭಾರೀ ಪ್ರಮಾಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಬಫೆಲೊ ಅಮೇರಿಕದಲ್ಲಿ ಜನಾಂಗೀಯ ದ್ವೇಷ ಮತ್ತು ರಾಜಕೀಯ ಹಿಂಸಾಚಾರ ಸ್ವೀಕಾರಾರ್ಹವಾಗುವ ಅಪಾಯಕಾರಿ ಕೋನದಿಂದ ವಿಮರ್ಶೆಗೆ ಯೋಗ್ಯವಾಗಿದೆ. ಈ ದುರ್ಘಟನೆ ಅಮೇರಿಕದ ಪ್ರಮುಖ ರಾಜಕೀಯ ಪಕ್ಷ ರಿಪಬ್ಲಿಕನ್ ಪಾರ್ಟಿಯಲ್ಲಿ ಉಗ್ರವಾದ ಬಲಪಂಥೀಯ ಚಿಂತನೆಗೆ ಅವಕಾಶ ತೆರೆದಿದೆ. ಕರಿಯರು ಹಾಗೂ ಏಷ್ಯನ್ನರು ಶ್ವೇತವರ್ಣೀಯರನ್ನು ಮೂಲೆಗುಂಪು ಮಾಡುತ್ತಿದ್ದಾರೆಂಬ ವಿಷಯ ರಿಪಬ್ಲಿಕನ್ ಪಾರ್ಟಿಯಲ್ಲಿ ಕೆಲವರು ಗಂಭೀರವಾಗಿ ಪರಿಗಣಿಸಿದ್ದಾರೆ. ಅಮೆರಿಕದ ಕೆಲವು ಪತ್ರಿಕೆಗಳು ಇದೇ ರೀತಿಯ ಜನಾಂಗೀಯ ವಾದವನ್ನು ಪ್ರತಿಪಾದಿಸುತ್ತಿದ್ದಾರೆ. ಪರಿಣಾಮ ಮುಂದಿನ ದಿನಗಳಲ್ಲಿ ಜನಾಂಗೀಯ ದ್ವೇಷದಿಂದ ಪ್ರೇರಿತವಾಗಿ ಇನ್ನಷ್ಟು ಹೆಚ್ಚು ಕರಿಯರ, ಏಷ್ಯನ್ನರ ಮೇಲೆ ಹಿಂಸಾತ್ಮಕ ಹಲ್ಲೆಗಳಾಗುವ ಸಂಭಾವ್ಯತೆ ಇದೆ. ಆದ್ದರಿಂದ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಜಗತ್ತಿನ ದೇಶಗಳಿಗೆ ಪಾಠ ಮಾಡುವ ಮೊದಲು ಅಮೇರಿಕವು ತನ್ನ ದೇಶದೊಳಗಿರುವ ಪರಿಸ್ಥಿತಿಯನ್ನು ಅವಲೋಕಿಸುವುದು ಸೂಕ್ತ. ಅಮೇರಿಕವು ಸಮೃದ್ಧವಾದರೂ ಸುರಕ್ಷಿತವಲ್ಲ ಎಂಬುದನ್ನು ಏಷ್ಯನ್ನರು ವಿಶೇಷವಾಗಿ ಭಾರತೀಯ ಅರ್ಥ ಮಾಡಿಕೊಳ್ಳಬೇಕಾಗಿದೆ. ಅಮೇರಿಕ ಭೂಲೋಕದ ಸ್ವರ್ಗವೆಂಬ ಭ್ರಮೆಯಿಂದ ಹೊರಬರಬೇಕಾಗಿದೆ.

ಅವಹೇಳನಕಾರಿ ಹೇಳಿಕೆ ಆರೋಪ

ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಮನೆಗೆ ಮುತ್ತಿಗೆ ಹಾಕಲೆತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರ ಬಂಧನ; ಬಿಡುಗಡೆ



ಮೈಸೂರು,ಡಿ.23(ಎಂಟಿವೈ)– ಬಿಜೆಪಿ ವಿರುದ್ಧ ಆರೋಪ ಮಾಡುವ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾದ 25ಕ್ಕೂ ಅಧಿಕ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಮೈಸೂರಿನ ಯಾದವಗಿರಿಯ ಆಕಾಶವಾಣಿ ವೃತ್ತದ ಬಳಿ ಇರುವ ಲಕ್ಷ್ಮಣ್ ಮನೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು. ಬಿಜೆಪಿ ಮತ್ತು ಪಕ್ಷದ ನಾಯಕರ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದ ಕಾರ್ಯಕರ್ತರು, ಅವರ ಮನೆಗೆ ಮುತ್ತಿಗೆ ಹಾಕುವುದಾಗಿ ಬಿಗಿಪಟ್ಟು ಹಿಡಿದರು. ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಅಂತಿಮವಾಗಿ ವಿವಿ ಪುರಂ ಠಾಣೆಯ ಪೊಲೀಸರು, ಸುಮಾರು 25ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿ, ನಗರ ಸಶಸ್ತ್ರ ಮೀಸಲು ಪಡೆಯ ಮೈದಾನಕ್ಕೆ ಕರೆದೊಯ್ದರು. ಅಲ್ಲಿ ಅವರ ಹೆಸರು ಮತ್ತು ವಿಳಾಸ ಸೇರಿದಂತೆ ಇನ್ನಿತರ ಮಾಹಿತಿ ಪಡೆದುಕೊಂಡು ಪ್ರತಿಭಟನಾಕಾರರನ್ನು ಬಿಡುಗಡೆಗೊಳಿಸಿದರು. ಪ್ರತಿಭಟನೆಯಲ್ಲಿ ಪಾಲಿಕೆ ಸದಸ್ಯ ರವೀಂದ್ರ, ಬಿಜೆಪಿ ಮುಖಂಡರಾದ ಕಾರ್ತಿಕ್ ಕುಮಾರ್, ಕಿರಣ್ ಗೌಡ, ಸುಜಿತ್ ಇನ್ನಿತರರು ಪಾಲ್ಗೊಂಡಿದ್ದರು.

ನಕಲಿ ಪದವಿ ಪ್ರಮಾಣ ಪತ್ರ ಸಲ್ಲಿಸಿ ಬಡ್ತಿ: ಮಂಡ್ಯ ಜಿಲ್ಲಾ ಪಂಚಾಯ್ತಿ ಯೋಜನಾಧಿಕಾರಿ ವಿರುದ್ಧ ಪ್ರಕರಣ ದಾಖಲಿಸಲು ಸೂಚನೆ

ಮಂಡ್ಯ ಡಿ.23–ಮಂಡ್ಯ ಜಿಲ್ಲಾ ಪಂಚಾಯ್ತಿ ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ ಕೆ.ಪಿ.ಪವನ್ ಕುಮಾರ್ ಅವರು ನಕಲಿ ಪದವಿ ಪ್ರಮಾಣ ಪತ್ರ ಸಲ್ಲಿಸಿ ಬಡ್ತಿ ಹೊಂದಿರುವುದು ಬೆಳಕಿಗೆ ಬಂದಿದೆ.

ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮಂಡ್ಯ ಜಿಲ್ಲಾ ಎಸ್ಪಿಯವರಿಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಪಾಪಣ್ಣ ನಿರ್ದೇಶಿಸಿದ್ದಾರೆ.

ವಿವರ: ಆರೋಪಕ್ಕೆ ಗುರಿಯಾಗಿರುವ ಕೆ.ಪಿ.ಪವನ್ ಕುಮಾರ್ ಅವರು ಅನುಕಂಪದ ಆಧಾರದ ಮೇರೆಗೆ 2001ರ ಜುಲೈ 23ರಂದು ಆರ್ಥಿಕ ಮತ್ತು ಸಾಂಖಿಕ ನಿರ್ದೇಶನಾಲಯದ ಗಣತಿದಾರರಾಗಿ ನೇಮಕವಾಗಿದ್ದರು. ನಂತರ ಅವರು ಸಾಂಖಿಕ ನಿರೀಕ್ಷಕರು, ಸಹಾಯಕ ಸಾಂಖಿಕ ಅಧಿಕಾರಿ, ಸಹಾಯಕ ನಿರ್ದೇಶಕರು ಹಾಗೂ ಉಪ ನಿರ್ದೇಶಕರಾಗಿ ಬಡ್ತಿ ಹೊಂದಿ ಹಾಲಿ ಮಂಡ್ಯ ಜಿಲ್ಲಾ ಪಂಚಾಯತ್‌ನ ಯೋಜನಾ ಅಂದಾಜು ಮೌಲ್ಯಮಾಪನಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಸಹಾಯಕ ಸಾಂಖಿಕಾಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ಹೊಂದಿದ ವೇಳೆ ತಮಿಳುನಾಡಿನ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿರುವುದಾಗಿ ದೃಢೀಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರು.

ರಾಜ್ಯದ ಹೊರಗಿನ ವಿಶ್ವವಿದ್ಯಾಲಯಗಳಿಂದ ದೂರ ಶಿಕ್ಷಣದ ಮೂಲಕ ಪದವಿ ಪಡೆದಿರುವ ನೌಕರರ ಅಂಕಪಟ್ಟಿಗಳ ನೈಜತೆ ಪರಿಶೀಲಿಸುವ ಸಲುವಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಹಲವಾರು ಬಾರಿ ಪತ್ರ ವ್ಯವಹಾರ ಮಾಡಲಾಗಿತ್ತಾದರೂ, ಅಂಕಪಟ್ಟಿಗಳ ನೈಜತೆ ಕುರಿತು ಯಾವುದೇ ರೀತಿಯ ಉತ್ತರ ಬಂದಿರಲಿಲ್ಲ. ಹೀಗಾಗಿ ಸದರಿ ಅಂಕಪಟ್ಟಿಗಳ ನೈಜತೆ ದೃಢೀಕರಿಸಿ ಕೊಡುವಂತೆ ತಮಿಳುನಾಡಿನ ಉನ್ನತ ಶಿಕ್ಷಣ ಇಲಾಖೆಯನ್ನು ಕೋರಲಾಗಿತ್ತು. ಆದರೆ ಅಲ್ಲಿನ ಉನ್ನತ ಶಿಕ್ಷಣ ಇಲಾಖೆಯು ತಮಿಳುನಾಡು ಕೇಂದ್ರೀಯ ವಿಶ್ವವಿದ್ಯಾಲಯ ತಮಿಳುನಾಡು ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಅಧಿಕಾರಿಯ ಪದವಿ ಪ್ರಮಾಣ ಪತ್ರಗಳನ್ನು ದೃಢೀಕರಿಸಲು ಸಾಧ್ಯವಿಲ್ಲವೆಂದು ತಿಳಿಸಿತ್ತು.

ಈ ಹಿನ್ನೆಲೆಯಲ್ಲಿ ಕೆ.ಪಿ.ಪವನ್ ಕುಮಾರ್ ಅವರು ನಕಲಿ ಪದವಿ ಪ್ರಮಾಣ ಪತ್ರ ಸಲ್ಲಿಸಿ ಬಡ್ತಿ ಪಡೆದಿದ್ದಾರೆ ಎಂದು ಪರಿಗಣಿಸಿದ್ದು, ಇದು ಕ್ರಿಮಿನಲ್ ಪ್ರಕರಣವಾದ್ದರಿಂದ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಮಂಡ್ಯ ಎಸ್ಪಿ ಅವರಿಗೆ ನಿರ್ದೇಶಿಸಲಾಗಿದೆ.

ಇನ್ನೂ ಒಂದು ವರ್ಷ ಉಚಿತ ಆಹಾರ ಧಾನ್ಯ ವಿತರಣೆ: ಕೇಂದ್ರ ನಿರ್ಧಾರ

ನವದೆಹಲಿ, ಡಿ.23– ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿ ದೇಶದ 81.35 ಕೋಟಿ ಬಡವರಿಗೆ ಒಂದು ವರ್ಷದವರೆಗೆ ಉಚಿತ ಪಡಿತರ ನೀಡುವ ಮಹತ್ವದ ನಿರ್ಧಾರವೊಂದನ್ನು ಕೇಂದ್ರ ಸರ್ಕಾರವು ಶುಕ್ರವಾರ ಪ್ರಕಟಿಸಿದೆ.

ಕೇಂದ್ರ ಸಂಪುಟದ ಈ ನಿರ್ಧಾರದ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಕೇಂದ್ರ ಆಹಾರ ಸಚಿವ ಪೀಯೂಷ್ ಗೋಯಲ್ ಅವರು ಎನ್‌ಎಫ್‌ಎಸ್‌ಎ ಅಡಿಯಲ್ಲಿ ಉಚಿತ ಆಹಾರ ಧಾನ್ಯಗಳನ್ನು ಒದಗಿಸುವ ಸಂಪೂರ್ಣ ಹೊರೆಯನ್ನು ಕೇಂದ್ರವು ಭರಿಸಲಿದೆ. ಇದರಿಂದ ಬೊಕ್ಕಸಕ್ಕೆ ವಾರ್ಷಿಕವಾಗಿ ರೂ. 2 ಲಕ್ಷ ಕೋಟಿ ವೆಚ್ಚವಾಗಲಿದೆ ಎಂದು ಹೇಳಿದ್ದಾರೆ.

ಎನ್‌ಎಫ್‌ಎಸ್‌ಎ ಅಡಿಯಲ್ಲಿ ಸರ್ಕಾರವು ಪ್ರಸ್ತುತ ಪ್ರತಿ ವ್ಯಕ್ತಿಗೆ ಕೆ.ಜಿ.ಗೆ ರೂ. 2ರಿಂದ ರೂ. 3ರಂತೆ 5 ಕೆ.ಜಿ.ಯಷ್ಟು ಆಹಾರ ಧಾನ್ಯವನ್ನು ಒದಗಿಸುತ್ತಿದೆ. ಅಂತ್ಯೋದಯ ಅನ್ನ ಯೋಜನೆ (ಎಎವೈ) ಅಡಿಯಲ್ಲಿ ಬರುವ ಕುಟುಂಬಗಳು ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪಡೆಯುತ್ತಿವೆ. ಅಂತೆಯೇ ಬಡವರಿಗೆ ಪ್ರತಿ ಕೆಜಿಗೆ ರೂ. 3ರಂತೆ ಅಕ್ಕಿಯನ್ನು ಹಾಗೂ ಪ್ರತಿ ಕೆ.ಜಿ.ಗೆ ರೂ. 2ರಂತೆ ಗೋಧಿಯನ್ನು ನೀಡಲಾಗುತ್ತಿದೆ. ಈ ಮಧ್ಯೆ, ಕೇಂದ್ರ ಸರ್ಕಾರವು ಇದೇ ಡಿ. 31ಕ್ಕೆ ಮುಕ್ತಾಯವಾಗಲಿರುವ ಉಚಿತ ಪಡಿತರ ವನ್ನೊದಗಿಸುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ವಿಸ್ತರಿಸದಿರಲು ನಿರ್ಧರಿಸಿದೆ.

ಪ್ರಚೋದನಾ ಹೇಳಿಕೆ ಆರೋಪ: ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ವಿರುದ್ಧ ದೂರು

ಮೈಸೂರು, ಡಿ.23– ರಾಜಕೀಯ ಪಕ್ಷದ ಹೆಸರಿನಡಿ ಸಮಾಜದ ಶಾಂತಿ ಸುವ್ಯವಸ್ಥೆಗೆ ಭಂಗ ತರುವ ರೀತಿಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡುತ್ತ ಕಾಂಗ್ರೆಸ್ ಪಕ್ಷದ ನಾಯಕರುಗಳ ವಿರುದ್ಧ ವೈಯಕ್ತಿಕ ನಿಂದನೆ ಮಾಡುತ್ತಿರುವ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್ ಗೌಡ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಡಿಸಿಪಿ ಮುತ್ತುರಾಜ್ ಅವರಿಗೆ ದೂರು ಸಲ್ಲಿಸಿದ್ದಾರೆ. ಡಿ.16 ರಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ವೈಯಕ್ತಿಕವಾಗಿ ನಿಂದಿಸಿ, ಬಹಿರಂಗವಾಗಿ ಬೆದರಿಕೆ ಒಡ್ಡಿರುವುದು ಆತಂಕಕಾರಿ ವಿಷಯವಾಗಿದೆ. ಪ್ರಚೋದನಕಾರಿ ರೀತಿಯಲ್ಲಿ ಎಂ.ಲಕ್ಷ್ಮಣ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿ ಅಶ್ಲೀಲ ಪದಗಳನ್ನು ಉಪಯೋಗಿಸಿ ಪಕ್ಷ ಪಕ್ಷಗಳ ನಡುವೆ ಘರ್ಷಣೆ ಉಂಟುಮಾಡುವ ದುರುದ್ದೇಶದಿಂದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇವರ ಮೇಲೆ ಕ್ರಮ ಜರುಗಿಸುವಂತೆ ಸಮಿತಿ ಮನವಿ ನೀಡಿದೆ.



ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯ್ ಕುಮಾರ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್ ಸೇರಿದಂತೆ ಪದಾಧಿಕಾರಿಗಳು ಇದ್ದರು.

ಸೈನಿಕರ ಒನ್ ರ್‍ಯಾಂಕ್ ಒನ್ ಪೆನ್ಶನ್ ಪರಿಷ್ಕರಣೆಗೆ ಕೇಂದ್ರ ಸಂಪುಟ ಅಸ್ತು

ನವದೆಹಲಿ: ಸಶಸ್ತ್ರ ಪಡೆಗಳ ಪಿಂಚಣಿದಾರರು/ಕುಟುಂಬ, ಪಿಂಚಣಿದಾರರ ಒನ್ ರ್‍ಯಾಂಕ್ ಒನ್ ಪೆನ್ಶನ್ (ಒಆರ್‌ಒಪಿ) ಅನ್ನು ಪರಿಷ್ಕರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಅವರು, ಯುದ್ಧದಲ್ಲಿ ಮಡಿದ ಯೋಧರ ಪತ್ನಿಯರಿಗೆ ಮತ್ತು ಅಂಗವಿಕಲ ಪಿಂಚಣಿದಾರರು ಸೇರಿದಂತೆ ಕುಟುಂಬ ಪಿಂಚಣಿದಾರರಿಗೂ ಈ ಪ್ರಯೋಜನವನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದ್ದಾರೆ.

ಒಆರ್‌ಒಪಿ ಯೋಜನೆಯಡಿ ವಿವಿಧ ಸಮಯಗಳಲ್ಲಿ ನಿವೃತ್ತರಾದ ಒಂದೇ ಶ್ರೇಣಿಯ ಸೈನಿಕರು ಸಮಾನ ಪಿಂಚಣಿ ಪಡೆಯುತ್ತಾರೆ. ಅವರು ಯಾವುದೇ ಸಮಯದಲ್ಲಿ ನಿವೃತ್ತರಾಗಿದ್ದರೂ ಪಿಂಚಣಿ ಮೊತ್ತದಲ್ಲಿ ಏಕರೂಪತೆ ಇರುತ್ತದೆ ಎಂದು ಠಾಕೂರ್ ಹೇಳಿದ್ದಾರೆ.

ಬಾಕಿಯನ್ನು ನಾಲ್ಕು ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲಾಗುವುದು. ಆದಾಗ್ಯೂ, ವಿಶೇಷ, ಉದಾರೀಕೃತ ಕುಟುಂಬ ಪಿಂಚಣಿ ಮತ್ತು ಶೌರ್ಯ ಪ್ರಶಸ್ತಿ ವಿಜೇತರು ಸೇರಿದಂತೆ ಎಲ್ಲಾ ಕುಟುಂಬ ಪಿಂಚಣಿದಾರರಿಗೆ ಒಂದೇ ಕಂತಿನಲ್ಲಿ ಬಾಕಿಯನ್ನು ಪಾವತಿಸಲಾಗುತ್ತದೆ. ಒಆರ್‌ಒಪಿ ಯೋಜನೆ ಪರಿಷ್ಕರಣೆಯಿಂದ ಕೇಂದ್ರ ಸರ್ಕಾರಕ್ಕೆ 8,450 ಕೋಟಿ ರೂ.ಹೆಚ್ಚುವರಿ ಹೊರೆಯಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ 2014ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ನಿವೃತ್ತ ಸೈನಿಕರಿಗೆ ಒನ್ ರ್‍ಯಾಂಕ್ ಒನ್ ಪೆನ್ಶನ್ (ಒಆರ್‌ಒಪಿ) ಯೋಜನೆ ಘೋಷಿಸಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001. Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 24 ಶನಿವಾರ 2022

ಸಂಪುಟ: 43 | ಸಂಚಿಕೆ: 247 | ಪುಟಗಳು: 12

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇನ್ನು ಮುಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದಲೇ ಕೆ–ಸೆಟ್

● ಇದರೊಂದಿಗೆ ಮೈಸೂರು ವಿವಿಗೆ ನೀಡಲಾಗಿದ್ದ ಮಾನ್ಯತೆ ರದ್ದು ● ವ್ಯಾಪಕ ಅವ್ಯವಹಾರ ನಡೆದ ಬಗ್ಗೆ ಸಂಸದ ಪ್ರತಾಪ್ ಸಿಂಹ ಯುಜಿಸಿ, ಶಿಕ್ಷಣ ಸಚಿವರಿಗೆ ದೂರು ಸಲ್ಲಿಸಿದ್ದರು

ಮೈಸೂರು, ಡಿ.23–ಮೈಸೂರು ವಿಶ್ವವಿದ್ಯಾನಿಲಯವು 2021ರ ಜುಲೈನಲ್ಲಿ ನಡೆಸಿದ ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ (ಕೆ-ಸೆಟ್) ಅವ್ಯವಹಾರ ನಡೆದಿರುವ ಹಿನ್ನೆಲೆಯಲ್ಲಿ ಕೆ–ಸೆಟ್ ನಡೆಸುವ ಮಾನ್ಯತೆಯನ್ನು ಮೈಸೂರು ವಿವಿಯಿಂದ ಹಿಂಪಡೆದಿರುವ ರಾಜ್ಯ ಸರ್ಕಾರ, ಇನ್ನು ಮುಂದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಕೆ–ಸೆಟ್ (ಕರ್ನಾಟಕ ಸ್ಟೇಟ್ ಎಲಿಜಬಲಿಟಿ ಟೆಸ್ಟ್) ನಡೆಸುವಂತೆ ಆದೇಶಿಸಿದೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ)ವು 2019ರ ಡಿಸೆಂಬರ್‌ನಲ್ಲಿ ನಡೆಸಿದ ಸಭೆಯಲ್ಲಿ ಮಾನ್ಯತೆ ಸಮಿತಿಯ ಶಿಫಾರಸುಗಳ ಆಧಾರದ ಮೇರೆಗೆ ಕರ್ನಾಟಕ ರಾಜ್ಯದ ಪರವಾಗಿ 2020ರ ಜನವರಿ 14 ರಿಂದ ವರ್ಷಕ್ಕೆ ಒಂದು ಬಾರಿಯಂತೆ 41 ವಿಷಯಗಳಲ್ಲಿ 2022ರವರೆಗೆ ಒಟ್ಟು 3 ಕೆ–ಸೆಟ್ ಪರೀಕ್ಷೆಗಳನ್ನು ನಡೆಸಲು ಮೈಸೂರು ವಿವಿಗೆ ಮಾನ್ಯತೆ ನೀಡಲಾಗಿತ್ತು.

ಆದರೆ ಮೈಸೂರು ವಿವಿ 2021ರ ಜುಲೈನಲ್ಲಿ ನಡೆಸಿದ ಕೆ–ಸೆಟ್ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿದ್ದು, ಈ ಅವ್ಯವಹಾರಕ್ಕೆ ಮೈಸೂರು ವಿವಿಯ ಕೆ–ಸೆಟ್ ಪರೀಕ್ಷೆಯ ಸಂಯೋಜಕರು ಹಾಗೂ ಇತರರು ಹೊಣೆಗಾರರು ಎಂದು ಯುಜಿಸಿಯಲ್ಲಿ ದೂರು ದಾಖಲಾಗಿತ್ತು ಇದೇ ವಿಷಯವಾಗಿ ಸಂಸದ ಪ್ರತಾಪ್ ಸಿಂಹ ಅವರು ಮೈಸೂರು ವಿವಿ ವಿರುದ್ಧ ಗಂಭೀರ ಆರೋಪವನ್ನೂ ಮಾಡಿದ್ದರು. 4 ರಿಂದ 6 ಲಕ್ಷ ಲಂಚ ಪಡೆದು ಕೆ–ಸೆಟ್ ಪರೀಕ್ಷೆಯಲ್ಲಿ ಪಾಸ್ ಮಾಡಲಾಗುತ್ತಿದೆ ಎಂದು ಸಾರ್ವಜನಿಕವಾಗಿ ಆರೋಪಿಸಿದ್ದ ಅವರು, ಈ ಸಂಬಂಧ ಯುಜಿಸಿ ಛೇರ್ಮನ್ ಎಂ.ಜಗದೀಶ್‌ಕುಮಾರ್ ಅವರಿಗೆ ಫೆ.11ರಂದು ಲಿಖಿತ ದೂರು ಸಲ್ಲಿಸಿದ್ದರು. ಅಲ್ಲದೇ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರಿಗೂ ಕೂಡ ಈ ಸಂಬಂಧ ಪತ್ರ ಬರೆದು ಕೆ–ಸೆಟ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸಬೇಕೆಂದು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ 2022ನೇ ಸಾಲು ಸೇರಿದಂತೆ ಮುಂದಿನ ಆದೇಶದವರೆಗೂ ಕೆ–ಸೆಟ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವಂತೆ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು–1) ಶೀತಲ್ ಎಂ.ಹಿರೇಮಠ ಅವರು ಆದೇಶಿಸಿದ್ದಾರೆ.



ಮೈಸೂರು ವಿವಿಯಲ್ಲಿ ಕೆ–ಸೆಟ್ ಪರೀಕ್ಷೆಯನ್ನು ಅಕ್ರಮವಾಗಿ ನಡೆಸುತ್ತಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೋಸವಾಗಬಾರದು ಎಂಬ ಉದ್ದೇಶದಿಂದ ಕೆ–ಸೆಟ್ ಪರೀಕ್ಷೆಯಲ್ಲಿ ಪಾರದರ್ಶಕತೆ ತರಬೇಕೆಂದು ಯುಜಿಸಿ ಛೇರ್ಮನ್ ಜಗದೀಶ್ ಕುಮಾರ್ ಅವರನ್ನು ಕಳೆದ ಫೆಬ್ರವರಿಯಲ್ಲಿ ಭೇಟಿ ಮಾಡಿ ಮನವಿ ಮಾಡಿದ್ದೆ. ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರಿಗೆ ಪತ್ರದ ಮುಖೇನ ಮನವಿ ಮಾಡಿದ್ದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ಕೆ–ಸೆಟ್ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆಸುವಂತೆ ಆದೇಶ ಮಾಡಿರುವುದು ಶ್ಲಾಘನೀಯ. ನನ್ನ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರಿಗೆ ಅಭಿನಂದನೆ.

– ಪ್ರತಾಪ್ ಸಿಂಹ, ಸಂಸದ

ಬಿಜೆಪಿಯ ಸಂಕಲ್ಪ ಯಾತ್ರೆ, ಜೆಡಿಎಸ್‌ನ ಪಂಚರತ್ನ ಯಾತ್ರೆ ನಡುವೆ

ಡಿ.30ರಿಂದ ಕಾಂಗ್ರೆಸ್ ಬಸ್ ಯಾತ್ರೆ

● ಎರಡು ಹಂತದಲ್ಲಿ ಒಂದು ತಿಂಗಳ ಪ್ರವಾಸ ● ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಒಗ್ಗಟ್ಟಿನ ಮಂತ್ರ
● ಕೊರೊನಾ ಸೋಂಕು ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಕೆಲ ನಿರ್ಬಂಧ ಸಾಧ್ಯತೆ

ಬೆಂಗಳೂರು, ಡಿ.23(ಕೆಎಂಶಿ)– ಕೊರೊನಾ ಸೋಂಕಿನ ಭೀತಿಯ ನಡುವೆಯೇ ಪ್ರದೇಶ ಕಾಂಗ್ರೆಸ್ ನಾಯಕರು ರಾಜ್ಯಾದ್ಯಂತ ಬಸ್ ಯಾತ್ರೆ ಕೈಗೊಂಡಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿಯು ಸಂಕಲ್ಪಯಾತ್ರೆ, ಜೆಡಿಎಸ್ ಪಂಚರತ್ನಯಾತ್ರೆ ಆರಂಭಿಸಿರುವ ಬೆನ್ನಲ್ಲೇ ಮತದಾರರನ್ನು ಮನವೊಲಿಸಲು ಕಾಂಗ್ರೆಸ್ ಒಂದು ತಿಂಗಳ ಕಾಲ ಬಸ್ ಯಾತ್ರೆ ಹಮ್ಮಿಕೊಂಡಿದೆ. ಬಸ್ ಯಾತ್ರೆಗೆ ಸಂಬಂಧಿಸಿದಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಉಂಟಾಗಿದ್ದ ವೈಮನಸ್ಸನ್ನು ದೆಹಲಿ ವರಿಷ್ಠರು ಬಗೆಹರಿಸಿದ ನಂತರ ಯಾತ್ರೆಗೆ ಹಸಿರು ನಿಶಾನೆ ದೊರೆತಿದೆ. ಡಿಸೆಂಬರ್ 30 ರಿಂದ ಜನವರಿ 29ರವರೆಗೆ ಇಡೀ ರಾಜ್ಯಾದ್ಯಂತ





ಎರಡು ಹಂತದಲ್ಲಿ ಬಸ್ ಯಾತ್ರೆ ನಡೆಯಲಿದೆ. ಒಕ್ಕಲಿಗ ಸಮುದಾಯ ಹೆಚ್ಚಿರುವ ದಕ್ಷಿಣ ಕರ್ನಾಟಕದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅಹಿಂದ ಮತದಾರರನ್ನು ಓಲೈಸಲು ಉತ್ತರ ಕರ್ನಾಟಕ ಭಾಗದಲ್ಲಿ ಸಿದ್ದರಾಮಯ್ಯ ನಾಯಕತ್ವದಲ್ಲಿ ಯಾತ್ರೆ ನಡೆಯಲಿದೆ. ಈ ಮಧ್ಯೆ ವಿಶ್ವದ ಅನೇಕ ಭಾಗಗಳಲ್ಲಿ ಕೊರೊನಾ ಸೋಂಕು ಉಲ್ಬಣಗೊಂಡಿದ್ದು, ರಾಷ್ಟ್ರದಲ್ಲಿ ಸೋಂಕು ಹರಡದಂತೆ ಕೇಂದ್ರ ಮುನ್ನೆಚ್ಚರಿಕೆ ನೀಡಿದೆ.

ರಾಜ್ಯ ಸರ್ಕಾರ ಕೂಡ ನಾಳೆ ಕೆಲವು ಕಠಿಣ ತೀರ್ಮಾನಗಳನ್ನು ಈ ಸಂಬಂಧ ತೆಗೆದುಕೊಳ್ಳಲಿದೆ. ರಾಹುಲ್‌ಗಾಂಧಿ ಅವರ ಭಾರತ್ ಜೋಡೋ ಯಾತ್ರೆಗೆ ಕೇಂದ್ರ ಕೆಲವು ನಿಯಮಾವಳಿಗಳನ್ನು ರೂಪಿಸಿರುವಂತೆ ಕರ್ನಾಟಕದಲ್ಲೂ ಈ ಚುನಾವಣೆ ಯಾತ್ರೆಗೆ ಕೆಲವು ನಿರ್ಬಂಧಗಳನ್ನು ಹೇರುವ ಸಾಧ್ಯತೆ ಇದೆ. ಇದರ ನಡುವೆಯೇ ಕಾಂಗ್ರೆಸ್ ನಾಯಕರು ಯಾತ್ರೆ ಆರಂಭಿಸಲಿದ್ದಾರೆ. ಬಸ್ ಮೂಲಕ ಪ್ರವಾಸ ಮಾಡಿ ಎಲ್ಲ ಜಿಲ್ಲೆಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಇದರಲ್ಲಿ ರಾಜ್ಯದ ಎಲ್ಲ ಕಾಂಗ್ರೆಸ್ ಹಿರಿಯ ನಾಯಕರು ಒಗ್ಗಟ್ಟಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಎರಡು ತಂಡಗಳು ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರವಾಸ ▶ 7ನೇ ಪುಟಕ್ಕೆ

ಕೊರೊನಾ ಉಪಟಳಿಗೆ ಕಡಿವಾಣ ಹಾಕಲು

ಸರ್ಕಾರದ ಸಲಹೆ ಪಾಲಿಸಿ; ಜಿಲ್ಲಾಡಳಿತದೊಂದಿಗೆ ಸಹಕರಿಸಿ

● ಸಾರ್ವಜನಿಕರಲ್ಲಿ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮನವಿ
● ರಾಜ್ಯ ಸರ್ಕಾರದ ಸಲಹೆ ರೂಪದ ಮಾರ್ಗಸೂಚಿ ಮಾಹಿತಿ; ಕೆಲವು ಸಲಹೆ
● ಜನಸಂದಣಿ ಪ್ರದೇಶದಲ್ಲಿ ಮಾಸ್ಕ್ ಧರಿಸಿ; ವ್ಯಾಕ್ಸಿನೇಷನ್‌ಗೆ ಆದ್ಯತೆ ನೀಡಲು ಸೂಚನೆ

ಮೈಸೂರು, ಡಿ.23(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಸದ್ಯ ನಾಲ್ಕು ಕೊರೊನಾ ಸೋಂಕು ಪ್ರಕರಣಗಳಿದ್ದು, ಎಲ್ಲರೂ ಮನೆಯಲ್ಲೇ ಆರೈಕೆಯಲ್ಲಿದ್ದಾರೆ. ಆದರೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು ಸರ್ಕಾರದ ಸಲಹೆಗಳನ್ನು ಪರಿಪಾಲಿಸುವ ಮೂಲಕ ಸಾರ್ವಜನಿಕರೂ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮನವಿ ಮಾಡಿದ್ದಾರೆ.



ಹಲವು ದೇಶಗಳಲ್ಲಿ ಕೊರೊನಾ ರೂಪಾಂತರಿ ಬಿ.ಎಫ್–7 ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರ ಸಲಹೆ ರೂಪದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಇಂದು ಜಿಲ್ಲಾ ಕೋವಿಡ್ ನಿರ್ವಹಣಾ ಸಮಿತಿ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದರು.

ಚೀನಾ, ಯುಎಸ್‌ಎ, ಜಪಾನ್ ಸೇರಿದಂತೆ ಹಲವು ದೇಶಗಳಲ್ಲಿ ಕೋವಿಡ್ ಮತ್ತೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಆಯುಕ್ತರ ಮೂಲಕ ಸರ್ಕಾರ ಹಲವು ನಿರ್ದೇಶನಗಳನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಇಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ಮಾಡಿ, ಮುಂಜಾಗ್ರತಾ ಕ್ರಮಗಳ ▶ 9ನೇ ಪುಟಕ್ಕೆ

ನಿವೇಶನಗಳಿಗೆ ಖಾತೆ ಮಾಡಿಕೊಡಲು ಲಂಚ ಸ್ವೀಕಾರ

ಲೋಕಾಯುಕ್ತ ಬಲೆಗೆ ಬಿದ್ದ ಮುಡಾ ವಿಶೇಷ ತಹಶೀಲ್ದಾರ್, ಎಫ್‌ಡಿಎ, ಡಿ–ಗ್ರೂಪ್ ಸಿಬ್ಬಂದಿ



ಸುರೇಶ್‌ಬಾಬು
ಲೋಕಾಯುಕ್ತ ಎಸ್ಪಿ

ಮೈಸೂರು,ಡಿ.23(ಆರ್‌ಕೆ)–ನಿವೇಶನಗಳಿಗೆ ಖಾತೆ ಮಾಡಲು ಎನ್‌ಜಿಓವೊಂದರ ಅಧ್ಯಕ್ಷರಿಂದ ಲಂಚ ಪಡೆದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವಿಶೇಷ ತಹಶೀಲ್ದಾರ್ ಸೇರಿ ಮೂವರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಮುಡಾ ವಲಯ ಕಚೇರಿ–3ರ ವಿಶೇಷ ತಹಶೀಲ್ದಾರರೂ ಆದ ಇ–ಖಾತಾ ಪ್ರಭಾರ ವಿಶೇಷ ತಹಸೀಲ್ದಾರ್ ಬಿ.ಕೆ. ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕ ರಂಗಪ್ಪ ಮತ್ತು ಡಿ–ಗ್ರೂಪ್ ಸಿಬ್ಬಂದಿ ವರಲಕ್ಷ್ಮಿ ಬಂಧನಕ್ಕೊಳಗಾದವರು.

ವಿವರ: ಮಾನವ ಹಕ್ಕು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ಮೈಸೂರು ಘಟಕದ ಅಧ್ಯಕ್ಷ ಕಾರ್ತಿಕ್ ಗೌಡ ಅವರು ಮೈಸೂರಿನ ಶ್ರೀರಾಂ ಪುರದಲ್ಲಿರುವ ಖಾಸಗಿ ಬಡಾವಣೆ ಯೊಂದರ 7 ನಿವೇಶನಗಳಿಗೆ ಖಾತೆ ಗಾಗಿ ಮುಡಾಗೆ ಅರ್ಜಿ ಸಲ್ಲಿಸಿದ್ದರು. 'ಸಕಾಲ'ದಡಿ 21 ದಿನದಲ್ಲಿ ಖಾತೆ ಮಾಡಿಕೊಡಬೇಕಾಗಿತ್ತು. ಒಂದು ವೇಳೆ ದಾಖಲೆಗಳಲ್ಲಿ ಏನಾದರೂ ನ್ಯೂನ್ಯತೆಗಳಿದ್ದರೆ ಹಿಂಬರಹ ನೀಡ ಬೇಕಾಗಿತ್ತು. ಆದರೆ 4 ತಿಂಗಳು ಕಳೆದರೂ ಕಾರ್ತಿಕ್‌ಗೌಡ ಸಲ್ಲಿಸಿದ್ದ ಅರ್ಜಿ ಆಧರಿಸಿ ನಿವೇಶನಗಳಿಗೆ ಖಾತೆ ಮಾಡಿ ಕೊಟ್ಟಿರಲಿಲ್ಲ.



ಪದೇ ಪದೆ ಮುಡಾ ಕಚೇರಿಗೆ ಅಲೆಯುತ್ತಿದ್ದ ಕಾರ್ತಿಕ್ ಗೌಡ ಅವರು, ಕಳೆದ ವಾರ ಪ್ರಥಮ ದರ್ಜೆ ಸಹಾಯಕ ರಂಗಪ್ಪ ಅವರನ್ನು ಭೇಟಿ ಮಾಡಿದಾಗ, ಹಣ ಕೊಡದೆ ಯಾವುದೇ ಕೆಲಸವಾಗಲ್ಲ ಎಂದು ಹೇಳಿದ ರಂಗಪ್ಪ, ▶ 7ನೇ ಪುಟಕ್ಕೆ

ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಪಂಚರತ್ನ ರಥ ಯಾತ್ರೆ

ರೈತರು ಸಾಲ ಮಾಡದೇ ಆರ್ಥಿಕವಾಗಿ ಸದೃಢವಾಗಿರುವಂತೆ ಯೋಜನೆ ರೂಪಿಸಿದ್ದೇನೆ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಭರವಸೆ ● ರಾಜ್ಯದ ಜನತೆಗೆ ಶಾಶ್ವತ ಯೋಜನೆಗಳ ನೀಡುವ ಮಹದುದ್ದೇಶ ● ಜೆಡಿಎಸ್ ಬಹುಮತದ ಸರ್ಕಾರ ರಚನೆಗೆ ಆಶೀರ್ವದಿಸಲು ಜನತೆಯಲ್ಲಿ ಮನವಿ

ಶ್ರೀರಂಗಪಟ್ಟಣ, ಡಿ.23–ನಾಡಿನ ಯುವ ಜನಾಂಗ, ರೈತರು ಹಾಗೂ ಬಡವರ ಏಳಿಗೆಗೆ ಅಗತ್ಯವಿರುವ ಶಾಶ್ವತ ಯೋಜನೆಗಳನ್ನು ಸಾಕಾರಗೊಳಿಸಲು ಜಿಲ್ಲೆಯ ಮತದಾರರು ಜೆಡಿಎಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕೊತ್ತತ್ತಿ ಗ್ರಾಮಕ್ಕೆ ಪಂಚರತ್ನ ರಥಯಾತ್ರೆ ಆಗಮಿಸಿದ ವೇಳೆ ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂಪೂರ್ಣ ಬಹುಮತದ ಸರ್ಕಾರವನ್ನು ರಚಿಸುವ ಅವಕಾಶವನ್ನು ಜೆಡಿಎಸ್‌ಗೆ ರಾಜ್ಯದ ಜನತೆ ನೀಡಿದರೆ, ಜನಪರ ಯೋಜನೆಗಳನ್ನು ಜಾರಿಗೊಳಿಸುತ್ತೇವೆ ಎಂದರು. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು ಜಯಗಳಿಸಿದ ಫಲವಾಗಿ ಸಮ್ಮಿಶ್ರ ಸರ್ಕಾರದಲ್ಲಿ ರೈತರ 27 ಸಾವಿರ ಕೋಟಿ ಸಾಲ ಮನ್ನಾ



ಮಾಡಲಾಯಿತು. 2023ರಲ್ಲಿ ಪೂರ್ಣ ಪ್ರಮಾಣದ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಶಿಕ್ಷಣ, ಆರೋಗ್ಯ, ಉದ್ಯೋಗ ಹಾಗೂ ಕೃಷಿಕರ ಬಾಳು ಹಸನಾಗಲು ಸೂಕ್ತ ಯೋಜನೆ ಜಾರಿಗೊಳಿಸುವುದು ನನ್ನ ಮುಂದಿರುವ ಮಹಾ ಉದ್ದೇಶ ಎಂದು ತಿಳಿಸಿದರು. ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷಕ್ಕೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ದೇವದುರ್ಗ ಸೇರಿದಂತೆ 40 ಕ್ಷೇತ್ರಗಳಲ್ಲಿ ಜೆಡಿಎಸ್ ಜಯ ಖಂಡಿತ, ಆ ಭಾಗದ 50 ತಾಲೂಕುಗಳಲ್ಲಿ ರಥ ಯಾತ್ರೆ ಸಂಚರಿಸಲಿದೆ ಎಂದು ಹೇಳಿದರು.

ಭತ್ತ, ಕಬ್ಬು, ತೆಂಗು ಸೇರಿದಂತೆ ವಿವಿಧ ಬೆಳೆ ಬೆಳೆಯುವ ರೈತರ ಸಂಕಷ್ಟ ಹೇಳತೀರದಾಗಿದೆ. ರೈತರ ಮನೆ ಬಾಗಿಲಿಗೆ ಖರೀದಿ ವ್ಯವಸ್ಥೆಯನ್ನು ಜಾರಿಗೊಳಿಸಿ ಆ ವರ್ಗವನ್ನು ಶಾಶ್ವತವಾಗಿ ನೆಮ್ಮದಿಯಾಗಿರಿಸುವ ಯೋಜನೆ ▶ 7ನೇ ಪುಟಕ್ಕೆ

ಕೊನೆಗೂ ಕೊಟ್ಟಿಗೆ ಮಾದರಿ ರೂಪಿಸಿ, ಅದರಲ್ಲಿ ಕಸ ಹಾಕಿ, ಮೇಕೆ, ಎಮ್ಮೆ ಕೂಡಿ ರಣತಂತ್ರ

ಇಬ್ಬರು ವಿದ್ಯಾರ್ಥಿಗಳ ಬಲಿ ಪಡೆದ ಚಿರತೆ ಸೆರೆ

ಅಂತೂ ಯಶಸ್ವಿಯಾದ ಅರಣ್ಯ ಸಿಬ್ಬಂದಿ; ಗ್ರಾಮಗಳ ಜನರಲ್ಲಿ ನೆಮ್ಮದಿ ನಿಟ್ಟುಸಿರು



ತಿ.ನರಸೀಪುರ, ಡಿ.23–ಇಬ್ಬರು ವಿದ್ಯಾರ್ಥಿಗಳ ಬಲಿ ಪಡೆದು, ಅರಣ್ಯ ಇಲಾಖೆ ಹಾಗೂ ತಾಲೂಕಿನ ಜನತೆ ನಿದ್ದೆಗೆಡಿಸಿದ್ದ ಚಿರತೆ ತಾಲೂಕಿನ ಮದ್ಗಾರಲಿಂಗಯ್ಯನ ಹುಂಡಿ ಗ್ರಾಮದ ಶ್ರೀ ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ಕೊನೆಗೂ ಸೆರೆ ಸಿಕ್ಕಿದೆ.

ಗುರುವಾರವಷ್ಟೇ ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ಕೋಳಿ ತಿನ್ನಲು ಬಂದು ಚಿರತೆ ಬೋನಿಗೆ ಬಿದ್ದಿತ್ತು. ಮರುದಿನವೇ ವಿದ್ಯಾರ್ಥಿಗಳನ್ನು ಬಲಿ ಪಡೆದಿದ್ದ 8 ವರ್ಷದ ಗಂಡು ಚಿರತೆ ಅರಣ್ಯ ಇಲಾಖೆ ಇರಿಸಿದ ಬೋನಿಗೆ ಬಿದ್ದಿದೆ. ಕಳೆದ ಅ.31 ರಂದು ಚಿರತೆ ಉಕ್ಕಲಗೆರೆ ಮಲ್ಲಪ್ಪನಬೆಟ್ಟದಲ್ಲಿ ಎಂ.ಎಲ್.ಹುಂಡಿ ಗ್ರಾಮದ ವಿದ್ಯಾರ್ಥಿ ಮಂಜುನಾಥ್ ಮೇಲೆ ದಾಳಿ ನಡೆಸಿ, ಕತ್ತು ಕಚ್ಚಿ ಸೀಳಿ ಕೊಂದು ಹಾಕಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು ಚಿರತೆ ಸೆರೆ ಹಿಡಿಯಲು ▶ 9ನೇ ಪುಟಕ್ಕೆ



Promotional Feature

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಮುಡಾ ಮಾಜಿ ಸದಸ್ಯರೂ ಹಾಗೂ ದಸರಾ ದೀಪಾಲಂಕಾರ ಸಮಿತಿ ಅಧ್ಯಕ್ಷರೂ ಅಗಿದ್ದ ರಮೇಶ್ ಸ್ನೇಹ ಬಳಗದಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಶ್ರೀ ಕೃಷ್ಣ ಎಂಟರ್‌ಪ್ರೈಸಸ್‌ನ ಮಾಲೀಕರಾದ ಪ್ರದೀಪ್ ಸಿಂಗ್, ಮುಖಂಡರಾದ ಶರಾವತಿ ವೆಂಕಟೇಶ್, ಮಹದೇವು, ಮಧು, ಶಿವರಾಮು ಇತರರನ್ನು ಕಾಣಬಹುದು.

ಕೊಡವರ ಹಕ್ಕು, ಬೇಡಿಕೆಗಳ ಅಧ್ಯಯನಕ್ಕೆ ಆಯೋಗ ರಚಿಸಿ

ಕೇಂದ್ರದ ಮಾಜಿ ಸಚಿವ ಡಾ. ಸುಬ್ರಮಣಿಯನ್‌ಸ್ವಾಮಿ ಕೇಂದ್ರ ಕಾನೂನು ಸಚಿವ, ಗೃಹ ಕಾರ್ಯದರ್ಶಿ, ಸಿಎಂಗೆ ಪತ್ರ ಬರೆದು ಆಗ್ರಹ

ಮಡಿಕೇರಿ, ಡಿ.23– ಕೊಡವ ಭೂ–ರಾಜಕೀಯ ಸ್ವಾಯತ್ತತೆ ಮತ್ತು ಆಂತರಿಕ ರಾಜಕೀಯ ಸ್ವಯಂ ನಿರ್ಣಯದ ಹಕ್ಕುಗಳಿಗಾಗಿ ಅಥವಾ 1956ರ ಹಿಂದಿನ ಸ್ಥಿತಿಯನ್ನು ಕೊಡಗಿನಲ್ಲಿ ಮರು ಸ್ಥಾಪಿಸುವ ದಕ್ಕಾಗಿ ಅಧ್ಯಯನ ನಡೆಸಲು ಆಯೋಗವೊಂದನ್ನು ರಚಿಸಬೇಕೆಂದು ಮಾಜಿ ಕೇಂದ್ರ ಸಚಿವ ಹಾಗೂ ಖ್ಯಾತ ಅರ್ಥ ಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಒತ್ತಾಯಿಸಿದ್ದಾರೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಗೃಹ ಕಾರ್ಯದರ್ಶಿ ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಅವರು, ಕೊಡವ ಬುಡಕಟ್ಟು ಸಮುದಾಯವನ್ನು ಆಡಳಿತ ವ್ಯವಸ್ಥೆ ನಿರ್ಲಕ್ಷಿಸುತ್ತಿದ್ದು, ಕೊಡಗಿನಲ್ಲಿ 1956ರ ಹಿಂದಿನ ಗತವೈಭವ ಮರುಸ್ಥಾಪಿಸಲು ಮಧ್ಯ ಪ್ರವೇಶಿಸಬೇಕೆಂದು ಮನವಿ ಮಾಡಿದ್ದಾರೆ.

ಕೊಡವ ಸಮುದಾಯವನ್ನು ಕಡೆಗಣಿಸುತ್ತಲೇ ಬಂದರೆ ಜನಾಂಗದ ಇತಿಹಾಸ ಮತ್ತು ಸಂಸ್ಕೃತಿಯ ಕುರುಹು ಮರೆಯಾಗುವ ಎಲ್ಲಾ ಸಾಧ್ಯತೆಗಳಿದೆ. ಕಳೆದ ಹಲವು ವರ್ಷಗಳಿಂದ ನಂದಿನೆರವಂಡ ಯು.ನಾಚಪ್ಪ



ಅವರ ನೇತೃತ್ವದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವ ಸಮುದಾಯದ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದೆ. ಈ ಸಂಘಟನೆಯ ಕಾನೂನು ಬದ್ಧ ಬೇಡಿಕೆಗಳನ್ನು ಪರಿಶೀಲಿಸಿ ಆಯೋಗವನ್ನು ರಚಿಸಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸಂವಿಧಾನದ 6ನೇ ಶೆಡ್ಯೂಲ್ ಪ್ರಕಾರ ಕೊಡವ ಭೂ–ರಾಜಕೀಯ ಸ್ವಾಯತ್ತತೆ ಮತ್ತು ಆಂತರಿಕ ರಾಜಕೀಯ ಸ್ವಯಂ ನಿರ್ಣಯದ ಹಕ್ಕುಗಳ ಅನುಷ್ಠಾನ, ಕೊಡವ ಬುಡಕಟ್ಟು ಜನಾಂಗವನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕು, ಸಿಖ್ಖರ ಕಿರ್ಪಾಣ್ ಮಾದರಿಯಲ್ಲಿ ಕೊಡವ ಸಾಂಪ್ರದಾಯಿಕ ಜನಾಂಗೀಯ 'ಸಂಸ್ಕಾರ ತೋಕ್' ಗನ್‌ನ ಹಕ್ಕುಗಳನ್ನು ಸಂವಿಧಾನದ 25 ಮತ್ತು 26ನೇ ವಿಧಿಗಳಡಿಯಲ್ಲಿ ರಕ್ಷಿಸಬೇಕು ಹಾಗೂ ಸ್ಥಳೀಯ ಭಾಷೆ ಅಂದರೆ 'ಕೊಡವ ಥಕ್' ಅನ್ನು 8ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು. ಈ ಬೇಡಿಕೆಗಳನ್ನು ಈಡೇರಿಸಲು ಆಯೋಗ ರಚನೆ ಸೂಕ್ತ ಮಾರ್ಗವಾಗಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಗಮನ ಸೆಳೆದಿದ್ದಾರೆ.

ಭಾರತದ ಸಂವಿಧಾನದ 6ನೇ ಶೆಡ್ಯೂಲ್ ಆಯಾ ರಾಜ್ಯಗಳಲ್ಲಿ ಸ್ವಾಯತ್ತತೆಯನ್ನು ನೀಡಲಾಗಿರುವ ಸ್ವಾಯತ್ತ ಆಡಳಿತ ವಿಭಾಗಗಳ ರಚನೆಗೆ ಅವಕಾಶ ನೀಡುತ್ತದೆ. ಪ್ರಸ್ತುತ ಅಸ್ಸಾಂ ಮತ್ತು ಮೇಘಾಲಯದಲ್ಲಿ 10 ಸ್ವಾಯತ್ತ ಪ್ರದೇಶಗಳಿವೆ. ಲಡಾಖ್, ಮಿಜೋರಾಂ ಮತ್ತು ತ್ರಿಪುರಾ 6ನೇ ಶೆಡ್ಯೂಲ್‌ನ ಬಲದಿಂದ ರೂಪುಗೊಂಡಿವೆ. ಇದೇ ಮಾದರಿಯಲ್ಲಿ ಕೊಡವ ಹೋಂ ಲ್ಯಾಂಡ್ ಮೂಲಕ 1956ರ ಹಿಂದಿನ ಇತಿಹಾಸವನ್ನು ಮರುಸ್ಥಾಪಿಸಬೇಕಾಗಿದೆ.

ನಮ್ಮ ದೇಶಾದ್ಯಂತ ವೈವಿಧ್ಯಮಯ ಜನರ ಭೌಗೋಳಿಕ–ರಾಜಕೀಯ ಆಕಾಂಕ್ಷೆಗಳು ಮತ್ತು ಅಸಂಖ್ಯಾತ ಭಾಷಾ ಗುಂಪುಗಳ ಸಾಂಸ್ಕೃತಿಕ ನೀತಿಗಳಿಗೆ ಅವಕಾಶ ಕಲ್ಪಿಸಲು ಕಾಲಕಾಲಕ್ಕೆ ನಡೆಯುತ್ತಿರುವ ಸಾಂವಿಧಾನಿಕ ಶಾಸನಗಳು, ತಿದ್ದುಪಡಿಗಳ ಇತಿಹಾಸವಿದೆ. ಇದು ನಿರಂತರ ಮತ್ತು ಅಂತ್ಯವಿಲ್ಲದ ಸಾಂವಿಧಾನಿಕ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಬೇಡಿಕೆಯನ್ನು ಕೂಡ ಪರಿಶೀಲಿಸಬೇಕಾಗಿದೆ. ಇದಕ್ಕಾಗಿ ಆಯೋಗ ರಚನೆ ಆಗಲೇಬೇಕೆಂದು ಪತ್ರದಲ್ಲಿ ವಿವರಿಸಿದ್ದಾರೆ.

ಕುಡಿದ ಅಮಲಿನಲ್ಲಿ ಪತಿಯ ಕೊಂದ ಪತ್ನಿ

ವಿರಾಜಪೇಟೆ, ಡಿ.23– ಕುಡಿದ ಅಮಲಿನಲ್ಲಿದ್ದ ಪತ್ನಿ ದೊಣ್ಣೆಯಿಂದ ಪತಿ ಮೇಲೆ ಹಲ್ಲೆ ನಡೆಸಿ ನಂತರ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿರುವ ದಾರುಣ ಘಟನೆ ತಾಲೂಕಿನ ಬೊಳ್ಳುಮಾಡು ಗ್ರಾಮದಲ್ಲಿ ನಡೆದಿದೆ.

ವಿರಾಜಪೇಟೆ ಸಮೀಪದ ಬೊಳ್ಳುಮಾಡು ಗ್ರಾಮದ ಎಂ.ರಮೇಶ್ ಎಂಬುವರ ಕಾಫಿ ತೋಟದ ಲೈನ್‌ಮನೆಯಲ್ಲಿ ವಾಸವಿದ್ದ ಕೂಲಿ ಕಾರ್ಮಿಕ ಸುಂದರ (42) ಕೊಲೆಯಾದ ದುರ್ದೈವಿ. ಸುಂದರ ಮತ್ತು ಶೋಭಾ ದಂಪತಿ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡು ಲೈನ್ ಮನೆಯಲ್ಲಿ ವಾಸವಾಗಿದ್ದರು. ಗುರುವಾರ (ಡಿ.22) ರಾತ್ರಿ ಇವರಿಬ್ಬರು ಕಂಠಪೂರ್ತಿ ಕುಡಿದಿದ್ದರಂತೆ. ಈ ವೇಳೆ ಇಬ್ಬರಿಗೂ ಮಾತಿಗೆ ಮಾತು ಬೆಳೆದು ದೊಡ್ಡ ಜಗಳವೇ ಆಗಿದೆ. ಆಗ ಶೋಭ ಕುಪಿತಗೊಂಡು ದೊಣ್ಣೆಯಿಂದ ಗಂಡನ ತಲೆಗೆ ಹೊಡೆದಿದ್ದು, ಆತ ಕೆಳಗೆ ಬಿದ್ದಾಗ ವೇಲಿನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಮೃತನ ಸಹೋದರ ಎಸ್.ಬಿ.ಚಂದ್ರ ವಿರಾಜಪೇಟೆ ಗ್ರಾಮಾಂತರ ಠಾಣೆಗೆ ದೂರು ನೀಡಿರುವ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ ಅವರು ಆರೋಪಿ ಶೋಭಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಅಯ್ಯಪ್ಪ ಹಾಗೂ ವಿರಾಜಪೇಟೆ ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಈ ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

ಪೇದೆ ಮೇಲೆ ಹಲ್ಲೆ ನಡೆಸಿದ ಸಹ ಶಿಕ್ಷಕನ ಅಮಾನತು

ಮಡಿಕೇರಿ, ಡಿ.23– ಕರ್ತವ್ಯನಿರತ ಪೊಲೀಸ್ ಪೇದೆ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿರುವ ಸಹ ಶಿಕ್ಷಕರೋರ್ವರನ್ನು ಸೇವೆಯಿಂದ ಅಮಾನತುಗೊಳಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ನಾಪೋಕ್ಲು ಸಮೀಪದ ಬೇತುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕರಾದ ನಾಗೇಂದ್ರ ಕೆ.ಜಿ. ಅಮಾನತಿಗೆ ಒಳಗಾದ ಶಿಕ್ಷಕ. ನ.29ರಂದು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ವಾಹನ ಚಾಲಕ ಯೋಗೇಶ್ ಎಸ್.ಎನ್. ಅವರ ಮೇಲೆ ಹಲ್ಲೆ ನಡೆಸಿ, ಅವಾಚ್ಯ ಪದಗಳಿಂದ ನಿಂದಿಸಿದ ಆರೋಪದ ಮೇಲೆ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಶಿಕ್ಷಕ ನಾಗೇಂದ್ರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ.17 ರಂದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ ಹಿನ್ನೆಲೆಯಲ್ಲಿ ಆರೋಪಿ ನಾಗೇಂದ್ರ ನ್ಯಾಯಾಂಗ ಬಂಧನದಲ್ಲಿ 48 ಗಂಟೆ ಕಳೆದಿರುವುದರಿಂದ ಅವರನ್ನು ಸೇವೆಯಿಂದ ಅಮಾನತು ಗೊಳಿಸಿ ಶಿಸ್ತು ಪ್ರಾಧಿಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸಿ.ರಂಗಧಾಮಯ್ಯ ಅವರು ಆದೇಶ ಹೊರಡಿಸಿದ್ದಾರೆ. ಇಲಾಖೆಯ ಪೂರ್ವಾನುಮತಿ ಪಡೆಯದೇ ಆರೋಪಿಯು ಕೇಂದ್ರ ಸ್ಥಾನ ಬಿಡದಂತೆ ಸೂಚಿಸಿದ್ದು, ಅಮಾನತಿನ ಅವಧಿಯಲ್ಲಿ ಯಾವುದೇ ಉದ್ಯೋಗ, ವಾಣಿಜ್ಯ ವ್ಯವಹಾರ, ವೃತ್ತಿ ಅಥವಾ ಕಸುಬಿನಲ್ಲಿ ನಿರತವಾಗಿರುವುದಿಲ್ಲ ಎಂಬುದನ್ನು ಸಮರ್ಥಿಸುವ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಇಂದಿನಿಂದ ರಾಜಸೀಟು ಉದ್ಯಾನವನದಲ್ಲಿ 'ಜೇನು ಉತ್ಸವ'

ಮಡಿಕೇರಿ, ಡಿ.23– ಕೊಡಗು ಜಿಲ್ಲಾಡಳಿತ, ಕೊಡಗು ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ಡಿ.24 ರಂದು ಸಂಜೆ 4 ಗಂಟೆಗೆ ರಾಜಾಸೀಟು ಉದ್ಯಾನವನದಲ್ಲಿ ಗಣ್ಯರಿಂದ 'ಜೇನು ಉತ್ಸವ'ಕ್ಕೆ ಚಾಲನೆ ದೊರೆಯಲಿದೆ. ಕೊಡಗಿನ ಜೇನು ತುಪ್ಪ ತನ್ನದೇ ಆದ ವಿಶಿಷ್ಟ ಗುಣಗಳನ್ನು ಹೊಂದಿದ್ದು, ಇಲ್ಲಿನ ಜೇನಿಗೆ ದೇಶ ವಿದೇಶದಲ್ಲಿ ಹೆಚ್ಚಿನ ಬೇಡಿಕೆ ಇದೆ. ಆದ್ದರಿಂದ ಕೊಡಗಿನಲ್ಲಿ ಜೇನು ಕೃಷಿಯನ್ನು ಉತ್ತೇಜನಗೊಳಿಸಲು ಜೇನು ಬೆಳೆಗಾರರು, ವಿಜ್ಞಾನಿಗಳು, ಜೇನು ಕೃಷಿ ಅಧಿಕಾರಿಗಳು ಹಾಗೂ ಜೇನು ಸೊಸೈಟಿ ಮತ್ತು ಜೇನು ಪರಿಕರ ತಯಾರಕರು, ಜೇನು ತುಪ್ಪ ಉತ್ಪಾದನೆ ಕಂಪನಿಯನ್ನು ಒಂದೇ ವೇದಿಕೆಗೆ ತಂದು ಕೊಡಗಿನ ಜೇನನ್ನು ಗ್ರಾಹಕರಿಗೆ ಪರಿಚಯಿಸುವ ಉದ್ದೇಶದಿಂದ ಜೇನು ಉತ್ಸವವನ್ನು ಆಯೋಜಿಸಲಾಗಿದೆ.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಮತದಾನ ಕುರಿತ ಜಾಗೃತಿ ಜಾಥಾಕ್ಕೆ ಡಿಸಿ ಚಾಲನೆ

ಮಡಿಕೇರಿ, ಡಿ.23– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸ್ವೀಪ್ ಸಮಿತಿ, ಗೋಣಿಕೊಪ್ಪ ಕಾವೇರಿ ಕಾಲೇಜು ಮತ್ತು ವಿರಾಜಪೇಟೆ ದಂತ ಮಹಾವಿದ್ಯಾಲಯದ ವತಿಯಿಂದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಹಾಗೂ ಮತದಾನದ ಮಹತ್ವ ಕುರಿತು ಏರ್ಪಡಿಸಲಾಗಿದ್ದ ಜಾಗೃತಿ ಜಾಥಾಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಶುಕ್ರವಾರ ಚಾಲನೆ ನೀಡಿದರು.

ನಗರದ ಗಾಂಧಿ ಮೈದಾನದಲ್ಲಿ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು 2023 ರ ಜನವರಿ, 01 ಕ್ಕೆ 18 ವರ್ಷ ಪೂರ್ಣಗೊಂಡ ಎಲ್ಲರೂ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಬೇಕು. ಜೊತೆಗೆ ಚುನಾವಣಾ ಸಂದರ್ಭದಲ್ಲಿ ಮತದಾನ ಮಾಡಬೇಕು ಎಂದು ಕೋರಿದರು. ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ರಾಜ್ಯದಲ್ಲಿಯೇ ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಮತದಾನ ಮಾಡುವ ನಿಟ್ಟಿನಲ್ಲಿ ಅರ್ಹರೆಲ್ಲರೂ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿ ಮತ ಹಕ್ಕು ಚಲಾಯಿಸಬೇಕು ಎಂದು ಅವರು ತಿಳಿಸಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ರಾಜ್‌ಗೋಪಾಲ್ ಮಾತನಾಡಿ, ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ ವತಿಯಿಂದ ಮತದಾನ ಜಾಗೃತಿ ಅಭಿಯಾನದ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು.

ರಾಷ್ಟ್ರೀಯ ಸೇವಾ ಯೋಜನೆ ಮುಖ್ಯಸ್ಥ ಮಹಮ್ಮದ್ ಅಕ್ರಮ್, ಎನ್‌ಎಸ್‌ಎಸ್ ಅಧಿಕಾರಿ ಕೃಪಾ ಶಂಕರ್, ಜಿಪಂ ಯೋಜನಾ ಶಾಖೆ ನವೀನ್ ಇತರರು ಇದ್ದರು. ನಗರದ ಗಾಂಧಿ ಮೈದಾನದಿಂದ ಮಂಗೇರಿರ ಮುತ್ತಣ್ಣ ವೃತ್ತ, ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತ, ಇಂದಿರಾ ಗಾಂಧಿ, ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದ ಮೂಲಕ ಜಾಥ ನಡೆಯಿತು. ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿ.ಪಂ. ಮುಖ್ಯ ಯೋಜನಾಧಿಕಾರಿ ರಾಜ್ ಗೋಪಾಲ್, ಕೊಡಗು ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷರಾದ ಎಚ್.ಟಿ. ಅನಿಲ್, ಎನ್‌ಸಿಸಿ ವಿದ್ಯಾರ್ಥಿಗಳು ಇತರರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಪಂಚರತ್ನ ರಥಯಾತ್ರೆಗೆ ವೈಭವಯುತ ಸ್ವಾಗತ

ಕಬ್ಬಿನ ಜಲ್ಲೆ, ಭತ್ತದ ತೆನೆ, ದ್ರಾಕ್ಷಿ ಗೊಂಚಲು, ಮೊಸಂಬಿ ಹಾರ ಸೇರಿದಂತೆ ಹೆಲಿಕಾಪ್ಟರ್‌ನಿಂದ ಪುಷ್ಪಾರ್ಚನೆ

ಶ್ರೀರಂಗಪಟ್ಟಣ, ಡಿ.23– ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ಪ್ರವೇಶಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಪಂಚರತ್ನ ರಥಯಾತ್ರೆಗೆ ಕ್ಷೇತ್ರದ ಎಲ್ಲೆಡೆ ಅದ್ದೂರಿ ಸ್ವಾಗತ ದೊರೆಯಿತು. ಪ್ರಮುಖ ಗ್ರಾಮಗಳಲ್ಲಿ ಕಬ್ಬು, ದ್ರಾಕ್ಷಿ ಗೊಂಚಲು, ಮೊಸಂಬಿ ಹಾರ ಸೇರಿದಂತೆ ಹೆಲಿಕಾಪ್ಟರ್ ನಿಂದ ಪುಷ್ಪಾರ್ಚನೆ ಮೂಲಕ ಅಭೂತಪೂರ್ವ ಸ್ವಾಗತ ಕೋರಲಾಯಿತು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗಡಿ ಗ್ರಾಮ ಕ್ಯಾತುಂಗೆರೆ ಗ್ರಾಮಕ್ಕೆ ತೆರಳುವ ಮುನ್ನ ಗೌರಿಶಂಕರ ಕಲ್ಯಾಣ ಮಂಟಪದ ಬಳಿ ನೆರೆದಿದ್ದ ಸಾವಿರಾರು ಕಾರ್ಯಕರ್ತರು ಕುಮಾರಸ್ವಾಮಿ ಹಾಗೂ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಗೆ ಜೈ ಕಾರ ಹಾಕಿ, ಜೆಸಿಬಿ ಮೂಲಕ ಹೂವಿನ ಸುರಿಮಳೆ ಗೈದರು.

ಕ್ಯಾತುಂಗೆರೆ ಪ್ರವೇಶಿಸಿದ ರಥ ಯಾತ್ರೆಗೆ ಗ್ರಾಮದ ಕಾರ್ಯಕರ್ತರು ಹಾಗೂ ಮುಖಂಡರು ದ್ರಾಕ್ಷಿ ಹಣ್ಣಿನ ಹಾರ, ಬೇವಿನ ಹಳ್ಳಿ ಗ್ರಾಮದಲ್ಲಿ ಬೃಹತ್ ಹೂವಿನ ಹಾರ



ಹಾಗೂ ಜೆಸಿಬಿ ಮೂಲಕ ಪುಷ್ಪಾರ್ಚನೆ, ಹೋಬಳಿ ಕೇಂದ್ರ ಕೊತ್ತತ್ತಿ ಗ್ರಾಮದ ಬಳಿ ಬೇಲೂರು, ಹೆಮ್ಮಿಗೆ, ಸೂನಗಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಸಾವಿರಾರು ಮಂದಿ ಕ್ರೇನ್ ಮೂಲಕ ಬೃಹತ್ ಹಾರ, ಬೃಹತ್ ಗಾತ್ರದ ಕಬ್ಬಿನ ಹಾರ ಹಾಕಿ ಯಾತ್ರೆಯನ್ನು ಬರಮಾಡಿಕೊಂಡರು.

ಕೊಡಿಯಾಲ ಗ್ರಾಮದಲ್ಲಿ ಮೊಸಂಬಿ ಹಣ್ಣಿನ ಬೃಹತ್ ಗಾತ್ರದ ಹಾರ, ವೀರಗಾಸೆಯೊಂದಿಗೆ ಸ್ವಾಗತಿಸಲಾಯಿತು. ಇದೇ ವೇಳೆ ಹೆಲಿಕಾಪ್ಟರ್ ಮೂಲಕ ಬಾನಂಗಳದಿಂದ ಪಂಚರತ್ನ ರಥಯಾತ್ರೆಗೆ ಹೂ ಮಳೆ ಮೂಲಕ ಶಾಸಕ ರವೀಂದ್ರ ಶ್ರೀಕಂಠಯ್ಯ ವಿಭಿನ್ನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರತಿ ಗ್ರಾಮಗಳ ರಸ್ತೆಯುದ್ದಕ್ಕೂ ಗ್ರಾಮಸ್ಥರು, ಕಾರ್ಯಕರ್ತರು ಹಾಗೂ ಮುಖಂಡರು ಸಾಕ್ಷಿಯಾದರು. ರಸ್ತೆಯುದ್ದಕ್ಕೂ ನೆರೆದಿದ್ದ ಅಪಾರ ಜನರನ್ನು ಕಂಡ ಮಾಜಿ ಮುಖ್ಯ ಮಂತ್ರಿ ಕುಮಾರಸ್ವಾಮಿ ಹಾಗೂ ಶಾಸಕ ರವೀಂದ್ರ ಶ್ರೀಕಂಠಯ್ಯ ಜನರತ್ತ ಕೈ ಬೀಸಿ ತೆರಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಯುವಕರು ಹಾಗೂ ಗ್ರಾಮಸ್ಥರ ಜೊತೆ ಮಹಿಳೆಯರು ಸಹ ಕುಮಾರಸ್ವಾಮಿ ಆಗಮನಕ್ಕೆ ಸಾಕ್ಷಿಯಾಗಿದ್ದರು.

ರಥಯಾತ್ರೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಘಟಕದ ಅಧ್ಯಕ್ಷ ಪೈಮುಕುಂದ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಾಳೇಗೌಡ, ಜೆಡಿಎಸ್ ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ಬಸವರಾಜು, ಮುಖಂಡರಾದ ಹೆಚ್.ಕೆ ರಾಮು, ಎ.ಹೆಚ್.ನಾರಾಯಣ, ಪಕ್ಷದ ರಾಜ್ಯ ಉಪಾಧ್ಯಕ್ಷ ಎಂ.ಸಂತೋಷ್, ಬೇಲೂರು ಶಶಿಧರ್, ಶಕುಂತಲಾ ಸಣ್ಣೇಗೌಡ, ಮಾದೇಗೌಡ, ಕೊತ್ತತ್ತಿ ಭಾಸ್ಕರ್ ಇತರರಿದ್ದರು. ಪ್ರಮುಖ ಗ್ರಾಮ ಹಾಗೂ ಪ್ರಮುಖ ವೃತ್ತಗಳಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಎಚ್.ಡಿ ಕುಮಾರಸ್ವಾಮಿ, ರವೀಂದ್ರ ಶ್ರೀಕಂಠಯ್ಯ ಹಾಗೂ ನಿಖಿಲ್ ಕುಮಾರಸ್ವಾಮಿ ಕಟೌಟ್‌ಗಳು ರಾರಾಜಿಸುತ್ತಿದ್ದವು.

ಕೃಷಿಗೆ ಬೇಡಿಕೆ ಬರುವ ದಿನ ದೂರವಿಲ್ಲ: ಶಾಂತ ಎಲ್ ಹುಲ್ಮನಿ



ಮಂಡ್ಯ, ಡಿ.23– ಕೃಷಿ ಜೀವನ ಕಷ್ಟಕರ ಎಂದು ಬೇರೆ ಉದ್ಯೋಗ ಹುಡುಕಿ ಹೊರಟವರ ಸಂಖ್ಯೆ ಹೆಚ್ಚು. ಆದರೆ, ಕೃಷಿ ಹಾಗೂ ರೈತ ಉದ್ಯೋಗಕ್ಕೂ ಬೇಡಿಕೆ ಬರುವ ದಿನ ದೂರವಿಲ್ಲ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತ ಎಲ್ ಹುಲ್ಮನಿ ತಿಳಿಸಿದರು.

ಇಂದು ಕೃಷಿ ಇಲಾಖೆ ವತಿ ಯಿಂದ ಜಿಪಂ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರೈತ ದಿನಾಚರಣೆ ಅಂಗವಾಗಿ ಮಾಜಿ ಪ್ರಧಾನಿ ದಿ.ಚೌದರಿ ಚರಣ್ ದೇಸಾಯಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಕೃಷಿಯಲ್ಲಿ ಬಹಳ ಸವಾಲುಗಳಿವೆ. ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಹೆಚ್ಚು. ಕೃಷಿಯಲ್ಲಿ ಕಾರ್ಮಿಕರ ಕೊರತೆ ಇದೆ. ಯಂತ್ರೋಪಕರಣ ಆಧುನಿಕ ಪದ್ಧತಿ ಬಳಸಲು ಹಣದ ಕೊರತೆ ಇದೆ. ರೈತರು ಸಂಘಟಿತರಾಗಿ ಗುಂಪುಗಳನ್ನು ಮಾಡಿಕೊಂಡು ತಮಗೆ ಬೇಕಿರುವ ಯಂತ್ರೋಪಕರಣಗಳನ್ನು ಖರೀದಿಸಿ ಬಳಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕಿದೆ ಎಂದರು.

ಕೃಷಿ ಲಾಭದಾಯಕ ಹುದ್ದೆಯಾಗಬೇಕು, ಹಿಂದಿನ ಕಾಲದಲ್ಲಿ ಬೆಲ್ಲದಲ್ಲಿ ಮಾಡಿದ ಟೀ ಎಂದರೆ ಅದು ಬಡವರು ಕುಡಿಯುವ ಟೀ ಎನ್ನುತ್ತಿದ್ದರೂ, ಇಂದು ಪೋಷಕಾಂಶ ಹಾಗೂ ಆರೋಗ್ಯದ ಬಗ್ಗೆ ಜನರಲ್ಲಿ ಹೆಚ್ಚು ಅರಿವು ಮೂಡಿದ್ದು, ಶ್ರೀಮಂತರು ಇಂದು ಹೆಚ್ಚು ಬೆಲ್ಲದಿಂದ ಮಾಡಿದ ಆಹಾರ ಪದಾರ್ಥಗಳನ್ನು ಬಳಸುತ್ತಿದ್ದಾರೆ. ಈ ಬದಲಾವಣೆ ಗಮನಿಸಿದಾಗ, ಮಂಡ್ಯ ಜಿಲ್ಲೆಯಲ್ಲಿ ಬೆಲ್ಲಕ್ಕೆ ಹೆಚ್ಚು ಬೇಡಿಕೆ ಬರಬೇಕು. ಆದರೆ, ಇಂದು ಕೇವಲ 1600 ಆಲೆಮನೆಗಳು ಕಾರ್ಯನಿರ್ವಹಿಸುತ್ತಿದೆ ಎಂದರು.

ಜಿಲ್ಲೆಯಲ್ಲಿ ಸಾವಯವ ಬೆಲ್ಲ ಹೆಚ್ಚು ಉತ್ಪಾದನೆಯಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಗಳಿಸಬೇಕು. ಇದಕ್ಕಾಗಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಾವಯವ ಬೆಲ್ಲ ತಯಾರಿಕೆಯ ಬಗ್ಗೆ ಕೃಷಿ ಇಲಾಖೆ ವತಿಯಿಂದ ಹಲವಾರು ಕಾರ್ಯಾಗಾರ ಹಾಗೂ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕಬ್ಬು ಉತ್ಪಾದನೆ, ರಾಸಾಯನಿಕ ಮುಕ್ತ ಸ್ವಚ್ಛ ಬೆಲ್ಲ ತಯಾರಿಕೆ ಹಾಗೂ ಮೌಲ್ಯವರ್ಧನೆ ಕುರಿತು ಸಿಎಫ್‌ಟಿಆರ್‌ಐನ ಹಿರಿಯ ವಿಜ್ಞಾನಿ ಡಾ.ಬಿ.ಬಿ.ಬೋರ್ಸೆ ಅವರು ಉಪನ್ಯಾಸ ನೀಡಿದರು. ರೈತರು ಮತ್ತು ವಿಜ್ಞಾನಿಗಳ ನಡುವೆ ಸಂವಾದ ಕಾರ್ಯಕ್ರಮದಲ್ಲಿ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಡಾ.ಗೋವಿಂದ ರಾಜು, ಬೆಂಗಳೂರು ಇಂದಿರಾ ಫುಡ್ಸ್‌ನ ಮುಖ್ಯಸ್ಥೆ ಇಂದಿರಾ, ವಿಕಸನ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರ ಗುರು, ರೈತರು ಸಾವಯವ ಕಬ್ಬು ಬೆಳೆಗಾರರು ಹಾಗೂ ರಾಸಾಯನಿಕ ಮುಕ್ತ ಬೆಲ್ಲ ತಯಾರಕರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ್, ಉಪ ಕೃಷಿ ನಿರ್ದೇಶಕಿ ಮಮತ ಹೆಚ್.ಎನ್, ಮಾಲತಿ.ಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ ಎಸ್.ಹೆಚ್ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ತಾಯಮ್ಮ ನಿಧನ



ಕೆ.ಆರ್.ಪೇಟೆ, ಡಿ.23– ತಾಲೂಕಿನ ನಾರ್ಗೋನಹಳ್ಳಿ ಹಿರಿಯ ಮುಖಂಡ ಮೀಸೆ ಜವರಯ್ಯ ಅವರ ಪತ್ನಿ ತಾಯಮ್ಮ(70) ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಿತು.

ಈಶ್ವರಯ್ಯ



ಕೆ.ಆರ್.ಪೇಟೆ, ಡಿ.23– ತಾಲೂಕಿನ ಮಾಕವಳ್ಳಿ ಗ್ರಾಮದ ಹಿರಿಯ ಮುಖಂಡ ಈಶ್ವರಯ್ಯ (65) ನಿಧನರಾದರು. ಮೃತರು ಪತ್ನಿ ಲಕ್ಷ್ಮಮ್ಮ ಇಬ್ಬರು ಪುತ್ರಿಯರು ಪುತ್ರ, ಮೊಮ್ಮಗ ಪತ್ರಕರ್ತ ಮನು ಸೇರಿದಂತೆ ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಿತು.

ನೀರಿನ ಮೂಲ ಸಂರಕ್ಷಣೆ, ಸದ್ಬಳಕೆ ಎಲ್ಲರ ಜವಾಬ್ದಾರಿ: ಸಂಜೀವಪ್ಪ

ಮಂಡ್ಯ, ಡಿ.23– ಭೂಮಿ ಮೇಲಿನ ಪ್ರತಿ ಜೀವಿಗೂ ನೀರು ಅವಶ್ಯ ಆದ ಕಾರಣ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜಲ ಸಂಜೀವಿನಿ ಕಾರ್ಯ ಕ್ರಮದಡಿ ನೀರಿನ ಸದ್ಬಳಕೆ ಕುರಿತು ಜ್ಞಾನ, ತಿಳುವಳಿಕೆ ಮೂಡಿಸುವ ಕಾರ್ಯದಲ್ಲಿ ಗ್ರಾಮದ ಪ್ರತಿಯೊಬ್ಬರು ಕಾಳಜಿ ವಹಿಸಿ ನೀರಿನ ಸಂರಕ್ಷಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ(ಅಭಿವೃದ್ಧಿ) ಸಂಜೀವಪ್ಪ ತಿಳಿಸಿದರು.

ಮಳವಳ್ಳಿ ತಾಲೂಕಿನ ಬಂಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ದಡದಪುರ ಗ್ರಾಮದಲ್ಲಿ ಅಮೃತ ಸರೋವರ ಕಾಮಗಾರಿ ಮೊಗಕಟ್ಟೆಯಲ್ಲಿ ರಾಷ್ಟ್ರೀಯ ರೈತ ದಿನಾಚರಣೆ ಮಾಡಿ ಜಲ ಸಂಜೀವಿನಿ–ರೈತ ಸಂವಾದ ನಮ್ಮ ನಡಿಗೆ ರೈತರ ಕಡೆಗೆ ಸಂವಾದ ಕಾರ್ಯಕ್ರಮದಲ್ಲಿ ರೈತರ ಜೊತೆಗೆ ಸಂವಾದ ಮಾಡಿದರು.

ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಮುಂಬರುವ ವರ್ಷದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಜಲ ಸಂಜೀವಿನಿ ವಿನೂತನ ಕಾರ್ಯಕ್ರಮಗಳಾದ ವೈಜ್ಞಾನಿಕ ಯೋಜನೆ, ಗೋಮಾಳ ಅಭಿವೃದ್ಧಿ, ವಿಪತ್ತು ನಿರ್ವಹಣೆ, ವನ್ಯಜೀವಿ ಸಂರಕ್ಷಣೆ ಹಾಗೂ ಸುಸ್ಥಿರ ಜೀವನೋಪಾಯವನ್ನು ರೈತರಿಗೆ ತಿಳಿಸಿದರು. ಕಾರ್ಯನಿರ್ವಾಹಕ ಅಧಿಕಾರಿ ರಾಮಲಿಂಗಯ್ಯ ಮಾತನಾಡಿ, ನರೇಗಾ ಯೋಜನೆಯಡಿ ಸಮುದಾಯ ಕಾಮಗಾರಿ ಆರಂಭಿಸಲಾಗಿದೆ. ಕೂಲಿಕಾರರು ಅಳತೆ ಅನುಸಾರವಾಗಿ ಕೆಲಸ ನಿರ್ವಹಣೆ ಮಾಡಿ, ಅಲ್ಲದೆ ಇನ್ನೂ ಹೆಚ್ಚು ಮಹಿಳೆಯರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದರು.

ಗ್ರಾಪಂ ಅಧ್ಯಕ್ಷೆ ರಮ್ಯ, ಸಹಾಯಕ ನಿರ್ದೇಶಕ ದೀಪು, ಪಿಡಿಒ ಪ್ರದೀಪ್ ಎಡಿಪಿಸಿ ಮುನಿರಾಜು, ತಾಂತ್ರಿಕ ಸಂಯೋಜಕ ಸುಹಾಸ್, ತಾಲೂಕು ಐಇಸಿ ಸಂಯೋಜಕ ಸುನಿಲ್ ಕುಮಾರ್.ಹೆಚ್, ಜಿಪಂ ರಶ್ಮಿ ಕುಸುಮಾ, ಶಿಲ್ಪ ಹಾಗೂ ಗ್ರಾಮದ ರೈತರು, ಗ್ರಾಮ ಕಾಯಕ ಮಿತ್ರ, ಕಾಯಕ ಬಂಧುಗಳು, ಗ್ರಾಮ ಪಂಚಾಯತಿಯ ಸಿಬ್ಬಂದಿ ಉಪಸ್ಥಿತರಿದ್ದರು.

ಬಸ್ ಡಿಕ್ಕಿ: ಚಾಲಕ ಸಾವು

ಸಂತೇಮರಳ್ಳಿ, ಡಿ.23– ಪಾದಚಾರಿಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಇಲ್ಲಿನ ಪೆಟ್ರೋಲ್ ಬಂಕ್ ಬಳಿಯ ಹೆದ್ದಾರಿಯಲ್ಲಿ ನಡೆದಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಐನೂರುಹುಂಡಿ ಗ್ರಾಮದ ನಾಗೇಂದ್ರ (35) ಮೃತ ವ್ಯಕ್ತಿ. ಈತ ಸಂತೇಮರಳ್ಳಿಯ ಕಾವೇರಿ ಪೈಪ್‌ಲೈನ್‌ನಲ್ಲಿ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ. ಕಾರ್ಯ ನಿಮಿತ್ತ ಗುರುವಾರ ರಾತ್ರಿ 7.30ರ ವೇಳೆ ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದಾಗ ಖಾಸಗಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡು ನಾಗೇಂದ್ರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಳ್ಳೇಗಾಲ: ಡಿ. 27ರಿಂದ 29ರವರೆಗೆ ನೀರು ವ್ಯತ್ಯಯ

ಚಾಮರಾಜನಗರ, ಡಿ.23– ಕೊಳ್ಳೇಗಾಲ ನಗರಸಭೆ ವತಿಯಿಂದ ಕೆಎಂಆರ್‌ಪಿ ಯೋಜನೆಯಡಿ ಅನುಷ್ಠಾನಗೊಂಡಿರುವ ನಿರಂತರ ನೀರು ಸರಬರಾಜು ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಯೋಜನೆಯಡಿ ನೀರು ಶುದ್ದೀಕರಣ ಘಟಕ (ಡಬ್ಲ್ಯೂಟಿಪಿ) ದಲ್ಲಿ ಹೊಸ ಪಂಪ್ ಸೆಟ್ ಅಳವಡಿಸುವುದು ಹಾಗೂ ವಾಸವಿ ಮಹಲ್ ಹತ್ತಿರ ಕೊಳವೆ ಮಾರ್ಗ ದುರಸ್ತಿ ಕಾಮಗಾರಿ ಇರುವುದರಿಂದ ಡಿ.27ರಿಂದ 29 ರವರೆಗೆ ಕೊಳ್ಳೇಗಾಲ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಇರುವುದಿಲ್ಲ. ಸಾರ್ವಜನಿಕರು ಸಹಕರಿಸುವಂತೆ ಪೌರಾಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕೋವಿಡ್ ಮಾರ್ಗಸೂಚಿ ಪಾಲಿಸಲು ಡಿಸಿ ಸೂಚನೆ

ಕೋವಿಡ್ ಪರೀಕ್ಷೆ ಹೆಚ್ಚಳ, ಲಸಿಕಾಕರಣಕ್ಕೆ ವೇಗ

ಚಾಮರಾಜನಗರ, ಡಿ.23– ಕೆಲವು ದೇಶಗಳಲ್ಲಿ ಕೋವಿಡ್–19 ಪ್ರಕರಣಗಳು ಏರಿಕೆಯಾಗಿರುವ ವರದಿ ಹಿನ್ನೆಲೆಯಲ್ಲಿ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ಜಿಲ್ಲೆಯಲ್ಲಿ ಪಾಲನೆ ಮಾಡಬೇಕಿದ್ದು, ಕೋವಿಡ್ ಪರೀಕ್ಷೆ ಹೆಚ್ಚಳ, ಲಸಿಕಾಕರಣಕ್ಕೆ ವೇಗ ನೀಡುವ ಕಾರ್ಯಕ್ಕೆ ಮುಂದಾಗಬೇಕೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ಕೋವಿಡ್ ಸಂಬಂಧ ನಡೆದ ಜಿಲ್ಲಾ ವಿಪತ್ತು ನಿರ್ವಹಣ ಪ್ರಾಧಿಕಾರದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೆಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗಿರುವ ವರದಿಯ ಕಾರಣದಿಂದ ಸರ್ಕಾರ ಕೋವಿಡ್‌ಗೆ ಸಂಬಂಧಿಸಿದಂತೆ ಅನುಸರಿಸಬೇಕಿರುವ ಮಾರ್ಗಸೂಚಿಯನ್ನು ಹೊರಡಿಸಿದೆ. ಇದರಂತೆ ಕೋವಿಡ್ ಪರೀಕ್ಷೆ, ಲಸಿಕಾಕರಣ, ಚಿಕಿತ್ಸೆ, ಇತರೆ ಅಂಶಗಳ ಕಾರ್ಯತಂತ್ರಗಳನ್ನು ಹೆಚ್ಚಿಸುವ



ನಿಟ್ಟಿನಲ್ಲಿ ಕ್ರಮವಹಿಸಬೇಕಿದೆ. ಕೋವಿಡ್ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಳ ಮಾಡಬೇಕು. ಐಎಲ್‌ಐ, ಸಾರಿ ಪ್ರಕರಣಗಳಿಗೆ ಕೋವಿಡ್ ಪರೀಕ್ಷೆ ಮಾಡಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಸೋಂಕಿನ ಲಕ್ಷಣಗಳನ್ನು ಹೊಂದಿರುವವರನ್ನು ಪರೀಕ್ಷೆಗೆ ಒಳಪಡಿಸಲು ಅಗತ್ಯ ಸಂಖ್ಯೆಯಲ್ಲಿ ತಂಡಗಳನ್ನು ನಿಯೋಜಿಸಬೇಕು. ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಪರೀಕ್ಷೆ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಇದಕ್ಕಾಗಿ ತುರ್ತಾಗಿ ಕಾರ್ಯೋನ್ಮುಖರಾಗಬೇಕು ಎಂದರು. ಕೋವಿಡ್–19 ಲಸಿಕೆಯ ಬೂಸ್ಟರ್ ಡೋಸ್ ನೀಡುವ ಪ್ರಕ್ರಿಯೆ ವೇಗಗೊಳಿಸಬೇಕು. ಆರೋಗ್ಯ ಸಿಬ್ಬಂದಿ, ಮುಂಚೂಣಿ ಕಾರ್ಯಕರ್ತರೆಲ್ಲರೂ ಇನ್ನೆರಡು ದಿನಗಳೊಳಗೆ ಮುನ್ನೆಚ್ಚರಿಕೆ ಡೋಸ್ ಅನ್ನು ಪಡೆಯಬೇಕು. ಈ ಬಗ್ಗೆ ವ್ಯಾಪಕವಾಗಿ ಅಧಿಕಾರಿಗಳು ತುರ್ತು ಗಮನಹರಿಸಬೇಕು ಎಂದು ಅವರು ತಿಳಿಸಿದರು. ಜಿಲ್ಲೆಯಲ್ಲಿರುವ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳು, ಐಸೋಲೇಷನ್ ಹಾಸಿಗೆ, ಆಮ್ಲಜನಕ ಲಭ್ಯತೆ, ಔಷಧಿ ದಾಸ್ತಾನು ಬಗ್ಗೆ ವಿವರವಾಗಿ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು ಕೋವಿಡ್–19 ಪ್ರಕರಣಗಳು ಏರಿಕೆಯಾದ ಪಕ್ಷದಲ್ಲಿ ಸಂದರ್ಭವನ್ನು ನಿರ್ವಹಿಸಲು ಎಲ್ಲ ಹಂತಗಳ ಆಸ್ಪತ್ರೆಗಳನ್ನು ಸನ್ನದ್ಧವಾಗಿರಿಸುವ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ ಎಂದು ಅವರು ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಎಂ. ಗಾಯಿತ್ರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆಎಸ್. ಸುಂದರ್‌ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ವೈದ್ಯಕೀಯ ಕಾಲೇಜಿನ ಡೀನ್ ಡಾ. ಸಂಜೀವ್, ಜಿಲ್ಲಾಸ್ಪತ್ರೆಯ ನೋಡಲ್ ಅಧಿಕಾರಿ ಡಾ. ಮಹೇಶ್, ಸ್ಥಾನಿಕ ವೈದ್ಯಾಧಿಕಾರಿ ಡಾ. ಕೃಷ್ಣಪ್ರಸಾದ್, ಜಿಲ್ಲಾ ಕಣ್ಗಾವಲು ಅಧಿಕಾರಿ ಡಾ. ನಾಗರಾಜು, ತಹಶೀಲ್ದಾರ ಬಸವರಾಜು, ಮಂಜುಳಾ, ಆನಂದಯ್ಯ, ರವಿಶಂಕರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಸುಧಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಊರೂರಿಗೆ ಭೀಮಸಂದೇಶ ಯಾತ್ರೆಗೆ ಚಾಲನೆ



ಚಾಮರಾಜನಗರ, ಡಿ.23– ಭೀಮಾ ಕೊರೆಗಾಂವ್ ವಿಜಯೋತ್ಸವದ ಅಂಗವಾಗಿ ಬಹುಜನ ವಾಲೆಂಟಿಯರ್ ಫೋರ್ಸ್ ಜಿಲ್ಲಾ ಘಟಕದಿಂದ ಜ.1ರ ವರೆಗೆ ಹಮ್ಮಿಕೊಂಡಿರುವ ಊರೂರಿಗೆ ಭೀಮಸಂದೇಶ ಯಾತ್ರೆಗೆ ಕರ್ನಾಟಕ ಬೌದ್ಧ ಮಹಾಸಭಾ ರಾಜ್ಯಾಧ್ಯಕ್ಷ ಹ.ರಾ. ಮಹೇಶ್ ಚಾಲನೆ ನೀಡಿದರು. ನಗರದ ರಾಮಸಮುದ್ರ ಬಡಾವಣೆಯ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು. ಶೋಷಿತರು, ಶೋಷಕ ಶಕ್ತಿಗಳ ವಿರುದ್ಧ ಸಾರಿದ ಯುದ್ಧ ಕೊರೆಗಾಂವ್ ಯುದ್ಧ. ಅದು ಭೀಮಾ ತೀರದಲ್ಲಿ ನಡೆದಿದ್ದರಿಂದ ಇತಿಹಾಸದಲ್ಲಿ ಭೀಮಾ ಕೋರೆಗಾಂವ್ ಯುದ್ಧವೆಂದೇ ಪ್ರಸಿದ್ಧವಾಗಿದೆ ಎಂದರು.

ಕೋರೆಗಾಂವ್ ಕದನ ಭಾರತದ ಇತಿಹಾಸದಲ್ಲೇ ಮಹತ್ವದ ಸ್ಥಾನ ಪಡೆದಿದೆ. ದಲಿತರ ಆತ್ಮಗೌರವ ಹಾಗೂ ಹಕ್ಕುಗಳಿಗೆ ತಳಕು ಹಾಕಿಕೊಂಡ ಸ್ಥಳವಿದು. 500 ಮಂದಿ ಮಹಾರ್ ಸೈನಿಕರು ಆಹಾರ, ನೀರು ಹಾಗೂ ವಿಶ್ರಾಂತಿ ಇಲ್ಲದೆ 28 ಸಾವಿರ ಮಂದಿಯ ಪೇಶ್ವೆಗಳ ಸೈನ್ಯದ ವಿರುದ್ಧ ನಿರಂತರ 12 ಗಂಟೆ ಕಾದಾಡಿದ ಸ್ಮರಣೀಯ ಕದನವಿದು. ಇದರಲ್ಲಿ ಮಹಾರ್ ಸೈನಿಕರು ಇತಿಹಾಸ ಸೃಷ್ಟಿಸಿದರು ಎಂದರು.

ನಂತರ ನಗರಸಭಾ ಸದಸ್ಯ ಆರ್.ಪಿ. ನಂಜುಂಡಸ್ವಾಮಿ ಮಾತನಾಡಿ, ಬಹುಜನ ಚಳವಳಿಯ ಬೆನ್ನೆಲುಬು ರಾಮಸಮುದ್ರವಾಗಿದೆ. ಬಹುಜನ ಚಳುವಳಿಗೆ ಇಲ್ಲಿಂದಲ್ಲೇ ಚಾಲನೆಗೊಂಡು ಯಶಸ್ವಿಯಾಗಿ ಸಾಗುತ್ತಿದೆ. ಈ ಯಾತ್ರೆಯು ಯಶಸ್ವಿಯಾಗಲಿ ಎಂದು ಆಶಿಸಿದರು. ಈ ವೇಳೆ ಬಿವಿಎಫ್ ಅಧ್ಯಕ್ಷ ಎಸ್.ಬಿ. ಚಂದ್ರಕಾಂತ್, ಬಿವಿಎಫ್ ಸಂಯೋಜಕ ರವಿ ಮೌರ್ಯ, ಆಶ್ರೀತ್, ಅಧ್ಯಕ್ಷ ಚಂದ್ರಕಾಂತ್, ರಾಜೇಂದ್ರ, ರಾಜು, ಬಾಬು ರಾಮಸಮುದ್ರ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್. ನಾಗಯ್ಯ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬಿ.ಮ. ಕೃಷ್ಣಮೂರ್ತಿ, ತಾಲೂಕು ಅಧ್ಯಕ್ಷ ಅಮಚವಾಡಿ ಪ್ರಕಾಶ್, ಸಂಯೋಜಕ ಎಸ್.ಪಿ. ಮಹೇಶ್, ನಗರಸಭಾ ಸದಸ್ಯ ಆರ್.ಪಿ. ನಂಜುಂಡಸ್ವಾಮಿ ಇತರರಿದ್ದರು.

ರಕ್ತಚಂದನ ಮರದ ತುಂಡು ಸಾಗಿಸುತ್ತಿದ್ದ ಇಬ್ಬರ ಬಂಧನ

103 ಕೆಜಿ ಮರ, ಕಾರು, ಮೊಬೈಲ್, ನಗದು ವಶ



ಕೊಳ್ಳೇಗಾಲ, ಡಿ.23– ಮಡಿಕೇರಿಯಿಂದ ಸೇಲಂ ಮಾರುಕಟ್ಟೆಗೆ ಅಕ್ರಮವಾಗಿ ಸಾಗಿಸುತ್ತಿದ್ದ 103 ಕೆಜಿ ತೂಕದ 23 ರಕ್ತಚಂದನ ಮರದ ತುಂಡುಗಳನ್ನು ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ವಶಕ್ಕೆ ಪಡೆದು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 3 ಮೊಬೈಲ್, ನಗದು ಹಾಗೂ ಒಂದು ಕಾರು ವಶಕ್ಕೆ ಪಡೆಯಲಾಗಿದೆ.

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲೂಕಿನ ಕೂಡಿಗೆ ಗ್ರಾಮದ ಶಮೀರ್ ಬಿನ್ ಉಮ್ಮರ್ (32), ಮುಳ್ಳುಸೋಗೆ ಗ್ರಾಮದ ಪೈರೋಜ್ ಪಾಶಾ ಬಿನ್ ಹೈದರ್ ಷರೀಫ್ (24) ಬಂಧಿತ ಆರೋಪಿಗಳು. ಆರೋಪಿಗಳು ಶುಕ್ರವಾರ ಟಗರಪುರ ಮೋಳೆ ಸಮೀಪದ ಮೈಸೂರು ಮುಖ್ಯ ರಸ್ತೆಯಲ್ಲಿ ಅಕ್ರಮವಾಗಿ ರಕ್ತಚಂದನ ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಹಿನ್ನೆಲೆ ಕಾರ್ಯಾಚರಣೆ ನಡೆಸಿದ ಕೊಳ್ಳೇಗಾಲ ಅರಣ್ಯ ಸಂಚಾರಿ ದಳದ ಪೊಲೀಸರು ಕಂದು ಬಣ್ಣದ ಕಾರನ್ನು (ಕೆಎ19, ಎಂ.ಎ0355) ತಡೆದು ಪರಿಶೀಲನೆ ನಡೆಸಿದಾಗ ಈ ಅಕ್ರಮ ಬಯಲಿಗೆ ಬಂದಿತು. ಬಂಧಿತರಿಂದ ಮರದ ತುಂಡುಗಳು, ಕಾರು, ಮೂರು ಮೊಬೈಲ್, 4575 ರೂ. ನಗದು ವಶಕ್ಕೆ ಪಡೆದುಕೊಂಡರು. ತಮಿಳುನಾಡಿನ ಸೇಲಂ ಮಾರುಕಟ್ಟೆಗೆ ಅಕ್ರಮವಾಗಿ ಮಾರಾಟಕ್ಕೆ ತೆಗೆದುಕೊಂಡು ಹೋಗಲಾಗುತ್ತಿತ್ತು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಬಂಧಿತರು ಮಡಿಕೇರಿ ಸಮೀಪದಲ್ಲಿ ಅಕ್ರಮ ವಾಗಿ ರಕ್ತಚಂದನ ಕಡಿದು ತಮಿಳುನಾಡಿಗೆ ಸಾಗಿಸಲು ತರುತ್ತಿದ್ದರು ಎನ್ನಲಾಗಿದ್ದು ಶುಕ್ರವಾರ ಅರಣ್ಯ ಸಂಚಾರಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ. ಸಬ್‌ಇನ್ಸ್‌ಪೆಕ್ಟರ್ ವಿಜಯ್ ರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ, ಸ್ವಾಮಿ, ಬಸವರಾಜ, ತಖೀವುಲ್ಲಾ, ಬಸವರಾಜು, ಚಾಲಕ ಪ್ರಭಾಕರ್ ಅವರುಗಳು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಈ ಸಂಬಂಧ ಮಾಂಬಳ್ಳಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಮುಂದಿನ ಕ್ರಮಕ್ಕಾಗಿ ಆರೋಪಿಗಳನ್ನು ಹಸ್ತಾಂತರಿಸಲಾಗಿದೆ.


ಸುನಂದಮ್ಮ ನಿಧನ



ಚಾಮರಾಜನಗರ, ಡಿ.23– ನಗರದ ರಾಮಸಮುದ್ರ ಬಡಾವಣೆ ನಿವಾಸಿ ಸುನಂದಮ್ಮ (74) ಗುರುವಾರ ರಾತ್ರಿ ನಿಧನರಾದರು. ಮೃತರು ಹರಳುಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕರಾಗಿದ್ದ ದಿ.ರಂಗಸ್ವಾಮಿ ಅವರ ಪತ್ನಿಯಾಗಿದ್ದು, ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹರಳುಕೋಟೆ ದೇವಸ್ಥಾನದ ಬಳಿ ಶುಕ್ರವಾರ ಅಂತ್ಯಕ್ರಿಯೆ ನಡೆಯಿತು.

ಒಕ್ಕಲಿಗರಿಗೆ ಮೀಸಲಾತಿ ಹೆಚ್ಚಳ ಸಂಬಂಧ ಅಧಿವೇಶನ ಮುಗಿಯುವುದರೊಳಗೆ ನಿರ್ಧಾರ

● ಒಕ್ಕಲಿಗ ಜನಾಂಗದ ಸಚಿವರು, ಶಾಸಕರ ನಿಯೋಗಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ● ಹಿಂದುಳಿದ ವರ್ಗ ಆಯೋಗದ ಮಧ್ಯಂತರ ವರದಿ ಆಧರಿಸಿ ಶೀಘ್ರ ತೀರ್ಮಾನ



ಬೆಂಗಳೂರು, ಡಿ.23(ಕೆಎಂಶಿ)– ಹಿಂದುಳಿದ ವರ್ಗಗಳ ಆಯೋಗದ ಮಧ್ಯಂತರ ವರದಿ ಸರ್ಕಾರಕ್ಕೆ ತಲುಪಿದ ತಕ್ಷಣ ಒಕ್ಕಲಿಗ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡುವ ಸಂಬಂಧ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದರು.

ಈ ಸಮಾಜಕ್ಕೆ ಸೇರಿದ ಸಚಿವರು, ಶಾಸಕರು ಮೀಸಲಾತಿ ಹೆಚ್ಚಳ ಮಾಡುವಂತೆ ಮುಖ್ಯಮಂತ್ರಿಯವರನ್ನು ಸುವರ್ಣ ಸೌಧದಲ್ಲಿ ಭೇಟಿಯಾಗಿ ಸಲ್ಲಿಸಿದ ಮನವಿ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ಸಂಬಂಧ ಆಯೋಗ ಮಧ್ಯಂತರ ವರದಿ ನೀಡಿದೆ.

ಪ್ರಸಕ್ತ ವಿಧಾನ ಮಂಡಲ ಅಧಿವೇಶನ ಮುಗಿಯುವ ವೇಳೆಗೆ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸರ್ಕಾರ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಿದೆ. ಅಧಿವೇಶನ ಮುಗಿಯುವುದಕ್ಕೂ ಮುನ್ನ ಆಯೋಗ ಒಕ್ಕಲಿಗರಿಗೆ ಸಂಬಂಧಿಸಿದಂತೆ ಮಧ್ಯಂತರ ವರದಿ ನೀಡಿದರೆ, ಅದನ್ನೂ ಪರಿಗಣಿಸಿ ಮುಂದಿನ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ ಎಂದರು.

ಒಕ್ಕಲಿಗರ ಜನಸಂಖ್ಯೆ ಹೆಚ್ಚಾಗಿದ್ದು, ಶಿಕ್ಷಣ ಮತ್ತು ಉದ್ಯೋಗದಲ್ಲಿ ಆಶೋತ್ತರಗಳು ಈಡೇರಬೇಕು, ಅವಕಾಶಗಳು ಹೆಚ್ಚಾಗಬೇಕೆಂಬ ಹಿನ್ನೆಲೆಯಲ್ಲಿ ಈಗಿನ ಮೀಸಲಾತಿ ಪ್ರಮಾಣದಲ್ಲಿ ಹೆಚ್ಚಳವಾಗಬೇಕೆಂದು ಬೇಡಿಕೆ ಸಲ್ಲಿಸಿದ್ದಾರೆ. ಅದೇ ಸಮುದಾಯಕ್ಕೆ ಹೊಂದಿಕೊಂಡಿರುವ ರೆಡ್ಡಿ, ಬಂಟ ಸೇರಿದಂತೆ ಎಲ್ಲಾ ಸಮುದಾಯದ ಮೀಸಲಾತಿ ಅಗತ್ಯ. ಕುಂಚಿಟಿಗ ಸಮುದಾಯ ಕೇಂದ್ರದ ಪಟ್ಟಿಯಲ್ಲಿ ಇಲ್ಲ. ಹೀಗಾಗಿ ಸಮುದಾಯವನ್ನು ಕೇಂದ್ರದ ಪಟ್ಟಿಯಲ್ಲಿ ಸೇರ್ಪಡೆಗೊಳಿಸಬೇಕು ಎಂದು ಅವರು ಪ್ರತ್ಯೇಕ ಮನವಿ ಸಲ್ಲಿಸಿದ್ದಾರೆ ಎಂದರು. ಈ ಹಿಂದೆಯೇ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆ ನಡೆಸಿ ಮನವಿ ಕೊಟ್ಟಿದ್ದರು. ಆ ಮನವಿಯನ್ನು ಈಗಾಗಲೇ ಹಿಂದುಳಿದ ವರ್ಗಗಳ ಆಯೋಗಕ್ಕೆ ಕಳುಹಿಸಲಾಗಿದೆ. ಅದರ ಪರಿಷ್ಕರಣೆ ಕೂಡ ಆಗುತ್ತಿದೆ. ಸಂವಿಧಾನದತ್ತವಾದ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸು ಅಗತ್ಯವಿದೆ. ಹೀಗಾಗಿ ಕಳೆದ ಮಾಹೆಯ 29ನೇ ತಾರೀಖಿನಂದೇ ಕಳುಹಿಸಲಾಗಿದೆ. ಇದರ ಅಂಶ ಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ. ಈಗಿನ ಮನವಿಯನ್ನೂ ಆಯೋಗಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಒಕ್ಕಲಿಗ ಸಮಾಜಕ್ಕೆ ಸೇರಿದ ಸಚಿವರು, ಶಾಸಕರು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ನಮ್ಮ ಸಮುದಾಯಕ್ಕೆ ಪ್ರವರ್ಗ–3ಎ ಅಡಿ ಮೀಸಲಾತಿ ಪ್ರಮಾಣವನ್ನು ಶೇಕಡಾ 12ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದರು.

ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 16ರಷ್ಟಿರುವ ಹಾಗೂ ವಿವಿಧ ಯೋಜನೆಗಳಿಂದಾಗಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಕಳೆದುಕೊಳ್ಳುತ್ತಿರುವ ಒಕ್ಕಲಿಗ ಸಮುದಾಯಕ್ಕೆ ಪ್ರವರ್ಗ 3ಎ ಅಡಿ ಮೀಸಲಾತಿಯನ್ನು ಶೇಕಡ 12ಕ್ಕೆ ಹೆಚ್ಚಿಸಬೇಕು ಎಂದು ಮನವಿ ಪತ್ರದಲ್ಲಿ ವಿವರಿಸಿದ್ದೇವೆ.

ನಗರೀಕರಣ ಹಾಗೂ ಕೈಗಾರಿಕೀಕರಣಕ್ಕಾಗಿ ಒಕ್ಕಲಿಗರು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಭೂಮಿ ಕಳೆದುಕೊಳ್ಳುತ್ತಿದ್ದಾರೆ. ವಾಸ್ತವವಾಗಿ ಇವರೆಲ್ಲಾ ಭೂಮಿ ನೆಚ್ಚಿಕೊಂಡೇ ಜೀವನ ಮಾಡುವವರು. ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಭೂಮಿ ಕಳೆದುಕೊಳ್ಳುತ್ತಿರುವ ಒಕ್ಕಲಿಗರ ಸಂಖ್ಯೆ ಹೆಚ್ಚುತ್ತಿದೆ. ಈಗಿರುವ 3ಎ ಪ್ರವರ್ಗವು ಶೇಕಡ 20ರಷ್ಟು ಜನ ಸಂಖ್ಯೆ ಇರುವ ಸಮುದಾಯವನ್ನು ಪ್ರತಿನಿಧಿಸುತ್ತಿದೆ. ಆದರೆ ಇದಕ್ಕೆ ನಿಗದಿಯಾಗಿರುವುದು ಶೇಕಡ 4ರಷ್ಟು ಮೀಸಲಾತಿ ಮಾತ್ರ. ಇದರಲ್ಲಿ ಒಕ್ಕಲಿಗರಿಗೆ ಸಿಗುತ್ತಿರುವುದು ಶೇಕಡ 3ರಷ್ಟು ಮಾತ್ರ ಎಂಬ ಬಗ್ಗೆ ಗಮನ ಸೆಳೆದರು. ಒಕ್ಕಲಿಗ ಸಮುದಾಯದ ಉಪಜಾತಿಗಳಾದ ಬಂಟರು, ರೆಡ್ಡಿಗಳು ಮತ್ತು ಕುಂಚಟಿಗರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿಲ್ಲ. ಇದರಿಂದ ಈ ಸಮುದಾಯಗಳಿಗೆ ಅನ್ಯಾಯವಾಗಿದೆ. ತಕ್ಷಣವೇ ಇದನ್ನು ಸರಿಪಡಿಸಬೇಕು ಎಂದು ಮನವಿ ಮಾಡಿಕೊಂಡರು.

ಮೈಸೂರು ವಿವಿ ಕುಲಪತಿ ನೇಮಕ ಪ್ರಕ್ರಿಯೆಗೆ ಹೈಕೋರ್ಟ್ ತಡೆ

ಮೈಸೂರು, ಡಿ.23(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ನೇಮಕಾತಿ ಪ್ರಕ್ರಿಯೆಗೆ ರಾಜ್ಯ ಉಚ್ಚ ನ್ಯಾಯಾಲಯವು ಗುರುವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ.



ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮೈಸೂರು ವಿಶ್ವವಿದ್ಯಾನಿಯಲದ ಪ್ರಭಾರ ಕುಲಪತಿ ಪ್ರೊ. ರಾಜಶೇಖರ್, ಕುಲಪತಿಗಳ ಆಯ್ಕೆಗಾಗಿ ರಚಿಸಲಾಗಿದ್ದ ಶೋಧನಾ ಸಮಿತಿಯು ಕಳೆದ ಮೂರು ದಿನಗಳ ಹಿಂದೆ ಸಭೆ ನಡೆಸಿ ಮೂವರು ಪ್ರಾಧ್ಯಾಪಕರ ಹೆಸರನ್ನು ಶಿಫಾರಸ್ಸು ಮಾಡಿತ್ತು. ತಾವೂ ಸಹ ಕುಲಪತಿ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದು, ಅಗತ್ಯ ಅರ್ಹತೆ, ಸೇವಾ ಹಿರಿತನವಿದ್ದಾಗ್ಯೂ ಸಮಿತಿಯು ತಮ್ಮನ್ನು ಕೈಬಿಟ್ಟಿರುವುದರ ವಿರುದ್ಧ ಹೈಕೋರ್ಟ್ ಮೊರೆ ಹೋಗಿದ್ದೆ. ನನ್ನಂತೆ ಇನ್ನೂ ನಾಲ್ಕೈದು ಮಂದಿ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿಯ ವಿಚಾರಣೆ ನಡೆಸಿದ ರಾಜ್ಯ ಹೈಕೋರ್ಟ್, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿಗಳ ನೇಮಕಾತಿ ಪ್ರಕ್ರಿಯೆಗೆ ಮಧ್ಯಂತರ ತಡೆಯಾಜ್ಞೆನೀಡಿದೆ ಎಂದು ಅವರು ತಿಳಿಸಿದರು. ಬೆಂಗಳೂರಿನ ಸಿಎಂಆರ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಎಂ.ಎಸ್. ಶಿವಕುಮಾರ್ ನೇತೃತ್ವದ ಶೋಧನಾ ಸಮಿತಿಯು ಮೈಸೂರು ವಿಶ್ವವಿದ್ಯಾನಿಲಯದ ಸೈಕಾಲಜಿ ವಿಭಾಗದ ಮುಖ್ಯಸ್ಥ ಜಿ.ವೆಂಕಟೇಶ್ ಕುಮಾರ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಪ್ರೊ.ಡಿ.ಎಸ್. ಗುರು ಹಾಗೂ ಹೈದರಾಬಾದ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಪ್ರಾಧ್ಯಾಪಕ ಡಾ.ಶರತ್ ಅನಂತಮೂರ್ತಿ ಅವರ ಹೆಸರನ್ನು ಶಿಫಾರಸ್ಸು ಮಾಡಿತ್ತು. ತಮ್ಮ ಹೆಸರು ಕೈಬಿಟ್ಟಿದ್ದರಿಂದ ಅಸಮಾಧಾನಗೊಂಡಿ ರುವ ಪ್ರೊ.ರಾಜಶೇಖರ್ ಕೋರ್ಟ್ ಮೆಟ್ಟಿಲೇರಿದ್ದರು.

ಐದನೇ ಪುಟದಿಂದ

ಸದೃಢವಾಗಿರುವಂತೆ ಯೋಜನೆ ರೂಪಿಸಿದ್ದೇನೆ

ಜಾರಿಗೊಳಿಸಲು ಬದ್ಧ ಎಂದರು. ಶಾಸಕ ರವೀಂದ್ರ ಶ್ರೀಕಂಠಯ್ಯ ರನ್ನು ಮತ್ತೆ ಗೆಲ್ಲಿಸಿ. ಇವರು ನೇರವಾದಿ, ಕುತಂತ್ರ ರಾಜಕಾರಣಿಯಲ್ಲ ಎಂದು ಪರೋಕ್ಷವಾಗಿ ಮಾಜಿ ಶಾಸಕ ರಮೇಶ್ ಬಂಡೀಸಿದ್ದೇಗೌಡರನ್ನು ಕುಟುಕಿದರು.

ಪ್ರತಿ ಎಕರೆಗೆ 10 ಸಾವಿರ ಸಹಾಯಧನ: ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಪ್ರತಿ ಹಂಗಾಮಿನಲ್ಲಿ ರೈತರು ಬಿತ್ತನೆ ಕಾರ್ಯ ಪ್ರಾರಂಭಿಸುವ ಮುನ್ನವೇ, ಪ್ರತಿ ಎಕರೆಗೆ 10 ಸಾವಿರ ರೂ. ಸಹಾಯಧನ ನೀಡುವ ಯೋಜನೆಯನ್ನು ಜಾರಿಗೆ ತರಲಾಗುವುದು. ಈ ಸಹಾಯ ಧನವು ಪ್ರತಿ ಹಂಗಾಮು ಪ್ರಾರಂಭವಾಗುವ ಮೊದಲೇ ರೈತರ ಕೈ ಸೇರುವಂತೆ ಮಾಡಲಾಗುವುದು. ಇದರಿಂದಾಗಿ ರೈತರು ಯಾವುದೇ ಸಾಲ ಮಾಡದೇ ಕೃಷಿ ಕಾರ್ಯದಲ್ಲಿ ತೊಡಗಲು ಅನುಕೂಲವಾಗುವುದು ಎಂದರು.

ರೈತರ ಸಾಲಮನ್ನಾ ಮಾಡಿದ್ದು ನಿಮ್ಮ ಕುಮಾರಸ್ವಾಮಿ. ಮತ್ತೊಮ್ಮೆ ಪೂರ್ಣ ಬಹುಮತದೊಂದಿಗೆ ಸರ್ಕಾರ ರಚನೆಗೆ ಅವಕಾಶ ಕೊಡಿ. ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿ ಸಾಲ ಮನ್ನಾ ಮಾಡಿದ್ದೇನೆ. ಸಾಲ ಮನ್ನಾದಿಂದ ಶಾಶ್ವತ ಪರಿಹಾರಗಳಿಲ್ಲ. ರೈತರು ಸಾಲ ಮಾಡಿಕೊಳ್ಳದ ರೀತಿಯಲ್ಲಿ ಆರ್ಥಿಕವಾಗಿ ಸದೃಢವಾಗಿ ಬದುಕುವ ರೀತಿಯಲ್ಲಿ ಪಂಚರತ್ನ ಯೋಜನೆಯಲ್ಲಿ ಅಳವಡಿಸಿದ್ದೇನೆ. ಈ ಬಗ್ಗೆ ಮಾಹಿತಿಗಳನ್ನು ರಾಜ್ಯದ ಪ್ರತೀ ಮನೆ ಮನೆಗೆ ತಲುಪಿಸುವ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು.

ಕೋವಿಡ್ ನಿಯಮ ಜಾರಿ ವಿಚಾರ: ಮೊದಲ ಹಂತದಲ್ಲಿ ಕೆಲವು ನಿಯಮಗಳನ್ನು ಕೊಟ್ಟಿದ್ದಾರೆ. ಮುಂದೆ ಯಾವ ರೀತಿ ಬದಲಾವಣೆಯಾಗುತ್ತೋ ಗೊತ್ತಿಲ್ಲ. ಸರ್ಕಾರ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಲಘುವಾಗಿ ಮಾತನಾಡಲ್ಲ. ಚೀನಾದಲ್ಲಿ ಮತ್ತೆ ದೊಡ್ಡ ಮಟ್ಟದಲ್ಲಿ ಕೋವಿಡ್ ಹಾವಳಿ ಹೆಚ್ಚಾಗಿದೆ. ಹೆಚ್ಚಿನ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ರಾಜ್ಯ, ರಾಷ್ಟ್ರದಲ್ಲಿ ಸಮಸ್ಯೆಗಳು ಏನಾಗುತ್ತೆ ನೋಡೋಣ. ನಾವು ಸಹಕಾರ ಕೊಡುತ್ತೇವೆ. ಆದರೆ ರಾಜಕೀಯ ಉದ್ದೇಶಕ್ಕಾಗಿ ಬೇರೆ ರೀತಿಯಲ್ಲಿ ವಿರೋಧ ಪಕ್ಷವನ್ನು ಕಟ್ಟಿಹಾಕುವ ವಾತಾವರಣ ನಿರ್ಮಾಣ ಮಾಡಲು ಹೋದರೆ. ಅದಕ್ಕೆ ನಮ್ಮ ಸಹಮತವಿಲ್ಲ ಎಂದರು. ಬಿಜೆಪಿ ಅವರಿಗೆ ಅಭಿವೃದ್ಧಿ ಬೇಕಾಗಿಲ್ಲ, ಧರ್ಮದ ಹೆಸರಿನಲ್ಲಿ ಭಾವನಾತ್ಮಕವಾಗಿ ಜನರನ್ನು ಕೆಣಕಿ ರಾಜಕೀಯವಾಗಿ ಯಶಸ್ಸುಗಳಿಸಲು ಹೊರಟ್ಟಿದ್ದಾರೆ. ಮಂಡ್ಯ, ಕರಾವಳಿ ಪ್ರದೇಶ ಅಲ್ಲ, ಮಂಡ್ಯ ಜನತೆ ಶ್ರಮ ಜೀವಿಗಳು. ಕರಾವಳಿ ಪ್ರದೇಶದ ಜೀವನ ಶೈಲಿ, ವಾತಾವರಣವೇ ಬೇರೆ. ಇಲ್ಲಿನ ಜನರು ಬಿಜೆಪಿ ಕುತಂತ್ರಗಳಿಗೆ ತಲೆಬಾಗುವವರಲ್ಲ. ಬಿಜೆಪಿ ಅವರಿಗೆ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದೇ ಮುಳುವಾಗಲಿದೆ. ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರಿಸಲು ಹಿಂದುಳಿದ ವರ್ಗಗಳ ವಿರೋಧವಿದೆ. ಯಾವ ಯಾವ ಸಮುದಾಯ ಪರಿಸ್ಥಿತಿ ಏನಾಗಿದೆ. ಆರ್ಥಿಕ, ಶೈಕ್ಷಣಿಕ ಹಾಗೂ ಅವರ ಪ್ರತಿನಿತ್ಯದ ಆದಾಯದ ಬಗ್ಗೆ ಸಮಗ್ರ ಅಧ್ಯಯನ ಮಾಡಿ ಮೀಸಲಾತಿ ನಿಗದಿ ಮಾಡಬೇಕು. ಈಗ ಎಲ್ಲಾ ಸಮುದಾಯದಲ್ಲೂ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯ ಆರಂಭವಾಗಿದೆ ಪ್ರತಿಯೊಬ್ಬರ ಹಕ್ಕನ್ನು ಕೊಡುವುದು ಸರ್ಕಾರದ ಜವಾಬ್ದಾರಿ. ಕಾಟಾಚಾರಕ್ಕೆ ಏನೋ ಮಾಡಿ ಜನರನ್ನು ಮೆಚ್ಚಿಸುತ್ತೇವೆ ಅಂದರೆ ಮುಂದಿನ ಚುನಾವಣೆಯಲ್ಲಿ ಜನ ಬುದ್ಧಿ ಕಲಿಸುತ್ತಾರೆ. ಬಿಜೆಪಿಯ ಒಕ್ಕಲಿಗ ಮಂತ್ರಿಗಳು, ಒಕ್ಕಲಿಗ ಸಮಾಜದ ಬಗ್ಗೆ ಕೂಡ ಮಾತನಾಡಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ರವೀಂದ್ರ ನೇರ ಮಾತುಗಾರ: ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ನೇರ ಮಾತಿನ ನಾಯಕ. ಅವರಿಗೆ ಕುತಂತ್ರ ರಾಜಕಾರಣ ಮಾಡುವುದು ತಿಳಿದಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸಿದ್ದಾರೆ. ಕಳೆದ ಬಾರಿ 43 ಸಾವಿರ ಮತಗಳ ಅಂತರದಿಂದ ಜಯಗಳಿಸಿದ್ದರು. ಮುಂದಿನ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ಅವರನ್ನು 80 ಸಾವಿರ ಮತಗಳ ಅಂತರದಿಂದ ಜಯಗಳಿಸಲು ಅಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು. ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಜನರ ಋಣ ತೀರಿಸಲು ನಾವಿಬ್ಬರು ಒಟ್ಟಾಗಿ ಕಾರ್ಯ ನಿರ್ವಹಿಸುತ್ತೇವೆ. ಕುತಂತ್ರಿಗಳ ಮಾತಿಗೆ ಮಣೆ ಹಾಕದೆ ರವೀಂದ್ರ ಅವರನ್ನು ಬೆಂಬಲಿಸಬೇಕು ಎಂದು ಹೇಳುವ ಮೂಲಕ ಶಾಸಕ ರವೀಂದ್ರ ಶ್ರೀಕಂಠಯ್ಯ ಪರವಾಗಿ ಮತ ಬೇಟೆ ಆರಂಭಿಸಿದರು. ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಮತದಾರರು ಜೆಡಿಎಸ್ ಬೆಂಬಲಿಸಿ ರಾಜ್ಯದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದರು.

ಎಫ್‌ಡಿಎ, ಡಿ–ಗ್ರೂಪ್ ಸಿಬ್ಬಂದಿ

7 ನಿವೇಶನಗಳ ಖಾತೆಗೆ 14 ಸಾವಿರ ರೂ. ಲಂಚ ನೀಡಬೇಕೆಂದು ಒತ್ತಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗುರುವಾರ ಕಾರ್ತಿಕ್ ಗೌಡ ಅವರು ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಅವರಿಗೆ ಲಿಖಿತ ದೂರು ಸಲ್ಲಿಸಿದ್ದರು. ಇಂದು ಮುಡಾ ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರಂತೆ ಸುತ್ತಾಡುತ್ತಿದ್ದು, ದೂರುದಾರರಾದ ಕಾರ್ತಿಕ್ ಗೌಡ ಅವರನ್ನು ಹಿಂಬಾಲಿಸುತ್ತಿದ್ದರು. ರಂಗಪ್ಪ ಅವರನ್ನು ಭೇಟಿ ಮಾಡಿದ ಕಾರ್ತಿಕ್ ಗೌಡ, ಮೊದಲಿಗೆ ನಿವೇಶನವೊಂದಕ್ಕೆ ಸಾವಿರ ರೂ.ಗಳಂತೆ 7 ಸಾವಿರ ರೂ. ನೀಡಿ, ಖಾತೆ ಮಾಡಿದ ನಂತರ ಉಳಿದ ಹಣ ನೀಡುವುದಾಗಿ ಚೌಕಾಸಿ ಮಾಡಿದ್ದಾರೆ. ಆದರೆ ಅದಕ್ಕೆ ಒಪ್ಪದ ರಂಗಪ್ಪ, ಪೂರ್ತಿ 14 ಸಾವಿರ ರೂ. ಕೊಟ್ಟರೆ ಮಾತ್ರ ತಾನು ಖಾತೆಗೆ ಸಂಬಂಧಿಸಿದ ಫೈಲ್ ಅನ್ನು ಪುಟ್‌ಅಪ್ ಮಾಡುವುದಾಗಿ ತಿಳಿಸಿದ ಮೇರೆಗೆ ಕಾರ್ತಿಕ್ ಗೌಡರು 14 ಸಾವಿರ ರೂ.ಗಳನ್ನು ರಂಗಪ್ಪ ಅವರಿಗೆ ನೀಡಿ, ತಾನು ಲಂಚ ನೀಡಿರುವುದಾಗಿ ತಮ್ಮನ್ನು ಹಿಂಬಾಲಿಸುತ್ತಿದ್ದ ಲೋಕಾಯುಕ್ತ ಅಧಿಕಾರಿಗಳಿಗೆ ಸನ್ನೆ ಮಾಡಿದ್ದಾರೆ. ತಕ್ಷಣವೇ ಲೋಕಾಯುಕ್ತ ಅಧಿಕಾರಿಗಳು ಕಾರ್ಯಪ್ರವೃತ್ತರಾಗುವಷ್ಟರಲ್ಲಿ ಡಿ–ಗ್ರೂಪ್ ಸಿಬ್ಬಂದಿ ವರಲಕ್ಷ್ಮಿ ಮೂಲಕ ಲಂಚದ ಹಣದ ಪೈಕಿ 10 ಸಾವಿರ ರೂ.ಗಳನ್ನು ವಿಶೇಷ ತಹಸೀಲ್ದಾರ್ ಬಿ.ಕೆ.ಶ್ರೀನಿವಾಸ್ ಅವರಿಗೆ ರಂಗಪ್ಪ ಕಳುಹಿಸಿದ್ದರು. ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ ಲೋಕಾಯುಕ್ತ ಅಧಿಕಾರಿಗಳು, ಮೂವರನ್ನೂ ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು, ಡಿವೈಎಸ್‌ಪಿ ಕೃಷ್ಣ, ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್, ರೇಖಾ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಡಿ.30ರಿಂದ ಕಾಂಗ್ರೆಸ್ ಬಸ್ ಯಾತ್ರೆ

ಕೈಗೊಳ್ಳಲಿದೆ. ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ದಕ್ಷಿಣ ಕರ್ನಾಟಕ ಭಾಗದ ಪ್ರವಾಸ ಕಾರ್ಯಕ್ರಮಗಳ ಸಂಯೋಜಕರಾಗಿದ್ದಾರೆ. ಮಾಜಿ ಸಚಿವ ಬಸವರಾಜ ರಾಯರೆಡ್ಡಿ, ಉತ್ತರ ಕರ್ನಾಟಕ ಭಾಗದ ಪ್ರವಾಸ ಕಾರ್ಯಕ್ರಮಗಳ ಸಂಯೋಜಕರಾಗಿರುತ್ತಾರೆ. ಈ ತಂಡಗಳಲ್ಲಿ ಆಯಾ ಭಾಗದ ಜಿಲ್ಲಾ ಕಾಂಗ್ರೆಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಕೆಪಿಸಿಸಿ ಉಸ್ತುವಾರಿ ಪದಾಧಿಕಾರಿಗಳು, ಹಿಂದೆ ಸ್ಪರ್ಧಿತ ಚುನಾವಣಾ ಅಭ್ಯರ್ಥಿಗಳು, ಭಾರತ್ ಜೋಡೋ ಯಾತ್ರೆ ಸಮಿತಿ ಪದಾಧಿಕಾರಿಗಳು, ವಿಧಾನಸಭಾ ಕ್ಷೇತ್ರಗಳ ಕೆಪಿಸಿಸಿ ಸಂಯೋಜಕರು, ಪಕ್ಷದ ಟಿಕೆಟ್ ಆಕಾಂಕ್ಷಿಗಳು ಈ ಪ್ರವಾಸ ಕಾರ್ಯಕ್ರಮಗಳನ್ನು ಸಂಘಟಿಸಲು ಪೂರ್ಣ ಸಹಕಾರ ನೀಡುವಂತೆ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಜಿಲ್ಲಾ ಉಸ್ತುವಾರಿ ಕಾರ್ಯಾಧ್ಯಕ್ಷರು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು (ಕರ್ನಾಟಕ ರಾಜ್ಯ ಜಿಲ್ಲಾ ಉಸ್ತುವಾರಿ), ಕೆಪಿಸಿಸಿ ಜಿಲ್ಲಾ ಉಸ್ತುವಾರಿ ಪದಾಧಿಕಾರಿಗಳನ್ನೊಳಗೊಂಡ ತಂಡವು ಮುಂಚಿತವಾಗಿ ಪಾದಯಾತ್ರೆ, ಸಭೆಗಳು ನಡೆಯುವ ಪ್ರತಿಯೊಂದು ವಿಧಾನಸಭಾ ಕ್ಷೇತ್ರಗಳಿಗೆ ತೆರಳಿ ಸಭೆಗಳ ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕು. ಎಲ್ಲಾ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿಗಳು ಪಕ್ಷದ ಎಲ್ಲ ಹಂತಗಳಲ್ಲಿ ನಡೆಯುವ ಬೃಹತ್ ಸಭೆಗಳ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಪಕ್ಷದ ಎಲ್ಲಾ ಹಂತಗಳಲ್ಲಿ ಇದೇ ರೀತಿಯಲ್ಲಿ ಬಹಿರಂಗ ಸಭೆಗಳನ್ನು ನಡೆಸಬೇಕು. ಇಂತಹ ಸಭೆಗಳನ್ನು ಮುಕ್ತ ಪ್ರದೇಶದಲ್ಲಿ ನಡೆಸಬೇಕು. ಪಕ್ಷದ ಎಲ್ಲಾ ನಾಯಕರು ಮತ್ತು ಕಾರ್ಯಕರ್ತರು ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅಧ್ಯಕ್ಷರು ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ಕೊರೊನಾ ಉಪ ತಳಿ ಹಾವಳಿ ಹಿನ್ನೆಲೆಯಲ್ಲಿ ಹೊಸ ವರ್ಷಾಚರಣೆಗೆ ಕೆಲ ನಿರ್ಬಂಧ

ರಾಜ್ಯ ಸರ್ಕಾರದ ನಿರ್ಧಾರ



ಬೆಂಗಳೂರು, ಡಿ.23(ಕೆಎಂಶಿ)– ಕೊರೊನಾ ಉಪತಳಿ ವ್ಯಾಪಕವಾಗಿ ರಾಜ್ಯದಲ್ಲಿ ಹರಡಬಾರದೆಂಬ ಉದ್ದೇಶದಿಂದ ಹೊಸ ವರ್ಷಾಚರಣೆಗೆ ಕೆಲವು ನಿರ್ಬಂಧಗಳನ್ನು ಹೇರಲು ರಾಜ್ಯ ಸರ್ಕಾರ ಮುಂದಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಸುಧಾಕರ್, ನಾಳೆ ಸೋಂಕು ತಡೆಯಲು ಮುಂಜಾಗ್ರತಾ ಕ್ರಮ ಕೈಗೊಳ್ಳುವ ಸಂಬಂಧ ಉನ್ನತ ಮಟ್ಟದ ಸಭೆ ಕರೆದಿದ್ದಾರೆ. ಈ ಬಗ್ಗೆ ಸುವರ್ಣ ಸೌಧದಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದ, ಕಂದಾಯ ಸಚಿವ ಆರ್. ಅಶೋಕ್ ರಾಜ್ಯಕ್ಕೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸುವ ಕುರಿತು ಸಭೆ ನಿರ್ಧಾರ ಕೈಗೊಳ್ಳಲಿದೆ ಎಂದರು.




ಕೋವಿಡ್ ತಡೆಯಲು ಆರೋಗ್ಯ, ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸುತ್ತೇನೆ. ಕೋವಿಡ್ ಹೇಗೆ ತಡೆಯಬೇಕು, ಹೊಸವರ್ಷದ ಆಚರಣೆ ಸಂದರ್ಭದಲ್ಲಿ ಯಾವೆಲ್ಲಾ ನಿಯಮಗಳನ್ನು ಕೈಗೊಳ್ಳಬೇಕು ಎಂದು ಚರ್ಚೆ ಮಾಡುತ್ತೇವೆ ಎಂದು ಹೇಳಿದರು.

ಕೋವಿಡ್ ನಿಯಮಾವಳಿ ಬಗ್ಗೆ ಕಾಂಗ್ರೆಸ್, ಜೆಡಿಎಸ್ ಆರೋಪ ವಿಚಾರವಾಗಿ ಮಾತನಾಡಿ, ಇಡೀ ಜಗತ್ತಿಗೆ ಕೋವಿಡ್ ಆವರಿಸಿದೆ. ಹೆಚ್.ಡಿ.ಕುಮಾರಸ್ವಾಮಿ, ರಾಹುಲ್ ಗಾಂಧಿಗೆ ಪ್ರತ್ಯೇಕವಾಗಿ ಕೋವಿಡ್ ಬರಲ್ಲ. ರಾಹುಲ್ ಗಾಂಧಿಗೆ ಪ್ರತ್ಯೇಕವಾಗಿ ಕೋವಿಡ್ ಬಂದರೆ, ಆಗ ಯೋಚನೆ ಮಾಡುತ್ತೇನೆ. ಈಗ ಜನರ ಪ್ರಾಣ ಉಳಿಸುವುದು ನಮ್ಮ ಆದ್ಯತೆ ಎಂದರು. ಇಲ್ಲಿಯವರೆಗೆ ರಾಷ್ಟ್ರದಲ್ಲಿ ಕೇವಲ ನಾಲ್ಕು ಪ್ರಕರಣಗಳು ವರದಿಯಾಗಿದ್ದರೂ, ಭಾರತ ಸರ್ಕಾರ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಹಿಂದೆ ಡೆಲ್ಟಾ ಮತ್ತು ಓಮಿಕ್ರಾನ್‌ನಂತಹ ರೂಪಾಂತರಗಳನ್ನು ಯಶಸ್ವಿಯಾಗಿ ಎದುರಿಸಿದ್ದೇವೆ ಎಂದರು. ಭಾರತದಲ್ಲಿ ಕಳೆದ ಕೆಲವು ದಿನಗಳಿಂದ ವರದಿಯಾಗುತ್ತಿರುವ ಕೊರೊನಾ ಪ್ರಕರಣಗಳ ಸರಾಸರಿ ಸಂಖ್ಯೆ 200 ಕ್ಕಿಂತ ಕಡಿಮೆಯಾಗಿದೆ. ಜುಲೈ ಮತ್ತು ಅಕ್ಟೋಬರ್ 2022ರ ನಡುವೆ ಬಿಎಫ್–7ನ ನಾಲ್ಕು ಪ್ರಕರಣಗಳು ವರದಿಯಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇವುಗಳಲ್ಲಿ ಮೂರು ಗುಜರಾತ್‌ನಲ್ಲಿ ಮತ್ತು ಒಂದು ಪ್ರಕರಣ ಒಡಿಶಾದಲ್ಲಿ ಕಂಡುಬಂದಿವೆ. ಈ ನಾಲ್ಕೂ ರೋಗಿಗಳು ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಬಿಎಫ್–7ನ ತೀವ್ರತೆ ತುಂಬಾ ಕಡಿಮೆ. ಆದರೆ ಹಿಂದಿನ ರೂಪಾಂತರಗಳಿಗೆ ಹೋಲಿಸಿದರೆ, ಬಿಎಫ್–7ನ ತೀವ್ರತೆ ತುಂಬಾ ಕಡಿಮೆಯಾಗಿದೆ. ಆದರೆ ಅದರ ಹೆಚ್ಚಿನ ಪ್ರಮಾಣದ ಹರಡುವಿಕೆಯಿಂದಾಗಿ, ಹೆಚ್ಚಿನ ಜನ ಈ ವೈರಸ್‌ಗೆ ಸೋಂಕಿಗೆ ಒಳಗಾಗುವ ಸಾಧ್ಯತೆಯಿದೆ ಎಂದು ವೈದ್ಯರು ಹೇಳಿರುತ್ತಾರೆ.

ವಿಧಾನಪರಿಷತ್ ಉಪ ಸಭಾಪತಿಯಾಗಿ ಬಿಜೆಪಿಯ ಎಂ.ಕೆ.ಪ್ರಾಣೇಶ್ ಆಯ್ಕೆ



ಬೆಂಗಳೂರು, ಡಿ.23(ಕೆಎಂಶಿ)–ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿ ಬಿಜೆಪಿ ಎಂ.ಕೆ.ಪ್ರಾಣೇಶ್ ಅವರು 2ನೇ ಬಾರಿಗೆ ಚುನಾಯಿತರಾದರು.

ಇಂದು ಬೆಳಿಗ್ಗೆ ಪರಿಷತ್ ಸಮಾವೇಶಗೊಂಡಾಗ ಸಭಾಪತಿ ಬಸವರಾಜ ಹೊರಟ್ಟಿ ಅವರು, ಉಪ ಸಭಾಪತಿ ಸ್ಥಾನದ ಚುನಾವಣೆ ಪ್ರಸ್ತಾವ ಕೈಗೆತ್ತಿಕೊಂಡರು.

ಸಭಾ ನಾಯಕರಾದ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸದಸ್ಯರಾದ ಎಸ್.ರುದ್ರೇಗೌಡ, ಡಾ.ತಳವಾರ ಸಾಬಣ್ಣ,ಅರುಣ್ ಡಿ.ಎಸ್. ಅವರು, ಸದಸ್ಯ ಎಂ.ಕೆ.ಪ್ರಾಣೇಶ್ ಅವರನ್ನು ಉಪ ಸಭಾಪತಿಯಾಗಿ ಚುನಾಯಿಸಬೇಕು ಎಂದು ಸೂಚಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಡಾ.ವೈ.ಎ. ನಾರಾಯಣಸ್ವಾಮಿ, ಸದಸ್ಯರಾದ ಪ್ರತಾಪ್ ಸಿಂಹನಾಯಕ, ಹೇಮಲತಾ ನಾಯಕ, ನವೀನ್ ಕೆ.ಎಸ್. ಅವರು ಉಪ ಸಭಾಪತಿ ಪ್ರಸ್ತಾವನೆಯನ್ನು ಅನುಮೋದಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅವರು ಕಾಂಗ್ರೆಸ್ ಸದಸ್ಯ ಅರವಿಂದ ಕುಮಾರ್ ಅರಳಿ ಅವರನ್ನು ಆಯ್ಕೆ ಮಾಡಬೇಕೆಂದು ಸೂಚಿಸಿದರು. ಈ ಪ್ರಸ್ತಾವವನ್ನು ಮಂಜುನಾಥ ಭಂಡಾರಿ ಅನುಮೋದಿಸಿದರು. ಜೆಡಿಎಸ್ ಉಪ ಸಭಾಪತಿ ಚುನಾವಣೆಯಲ್ಲಿ ತಟಸ್ಥ ನಿಲುವನ್ನು ತಳೆದಿತ್ತು.

ಬಳಿಕ ಸಭಾಧ್ಯಕ್ಷರು ಎಂ.ಕೆ.ಪ್ರಾಣೇಶ್ ಅವರ ಚುನಾವಣೆ ಪ್ರಸ್ತಾವವನ್ನು ಮತಕ್ಕೆ ಹಾಕಿದಾಗ 39 ಮತಗಳು ಪ್ರಾಣೇಶ್ ಅವರ ಪರವಾಗಿ ದೊರೆತರೆ, ಪ್ರಾಣೇಶ್ ಅವರ ವಿರುದ್ಧವಾಗಿ 26 ಮತಗಳು ಬಂದವು. ಆಗ ಸಭಾಪತಿ ಅವರು ಉಪ ಸಭಾಪತಿಯಾಗಿ ಪ್ರಾಣೇಶ್ ಚುನಾಯಿತರಾಗಿದ್ದಾರೆ ಎಂದು ಪ್ರಕಟಿಸಿದರು. ಬಳಿಕ, ಸಭಾನಾಯಕರು, ಆಡಳಿತದ ಪಕ್ಷದ ಮುಖ್ಯ ಸಚೇತಕ, ವಿರೋಧ ಪಕ್ಷ ನಾಯಕರು, ಜೆಡಿಎಸ್‌ನ ಭೋಜೇಗೌಡ ಅವರು ಪ್ರಾಣೇಶ್ ಅವರನ್ನು ಅಭಿನಂದಿಸಿ, ಉಪ ಸಭಾಪತಿ ಪೀಠಕ್ಕೆ ಸಂಪ್ರದಾಯದಂತೆ ಕರೆ ತಂದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಜವಾಬ್ದಾರಿ ಯುತ ವ್ಯಕ್ತಿ, ಸಜ್ಜನ, ಪ್ರಗತಿಪರ ಚಿಂತನೆ ಇರುವ ರಾಜಕಾರಣಿಯಾದ ಎಂ.ಕೆ. ಪ್ರಾಣೇಶ್ ಅವರಿಂದ ವಿಧಾನಪರಿಷತ್ ಉಪಸಭಾಪತಿ ಸ್ಥಾನಕ್ಕೆ ಬೆಲೆ ಸಿಗಲಿದೆ. ಆ ಮೂಲಕ ಕರ್ನಾಟಕದ ಜನರ ಸಮಸ್ಯೆಗಳಿಗೆ ಉತ್ತರ ಸಿಗಲಿದೆ ಎಂದು ತಿಳಿಸಿದರು.

ಅಂಗನವಾಡಿ ಕಾರ್ಯಕರ್ತರಿಗೆ ಇಎಸ್‌ಐ ಸೌಲಭ್ಯವಿಲ್ಲ

ಅವರು ಕಾರ್ಮಿಕರೆಂದು ಪರಿಗಣಿತವಾಗಿಲ್ಲ



ಬೆಂಗಳೂರು, ಡಿ.23(ಕೆಎಂಶಿ)– ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಕಾರ್ಮಿಕರೆಂದು ಪರಿಗಣಿಸದ ಕಾರಣ ಅವರಿಗೆ ಇಎಸ್‌ಐ ಸೌಲಭ್ಯ ಕಲ್ಪಿಸಲು ಸಾಧ್ಯವಿಲ್ಲ ಎಂದು ಮಹಿಳಾ ಅಭಿವೃದ್ಧಿ ಸಬಲೀಕರಣ ಸಚಿವ ಆಚಾರ್ ಹಾಲಪ್ಪ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದ್ದಾರೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಬರುವ ಗೌರವ ಸೇವೆಯಾಗಿರುವುದರಿಂದ ಅವರನ್ನು ಕಾರ್ಮಿಕರೆಂದು ಪರಿಗಣಿಸಲಾಗುತ್ತಿಲ್ಲ ಎಂದ ಅವರು, ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರುಗಳಿಗೆ ಸರ್ಕಾರವು ಹೆಚ್ಚಿನ ಪ್ರೋತ್ಸಾಹ ನೀಡುವ ಬದಲಿಗೆ ಕನಿಷ್ಟ ಪ್ರಮಾಣದ ಗೌರವ ಧನವನ್ನು ನೀಡುತ್ತಿದೆ. ಅಂಗನವಾಡಿ ಉದ್ಯೋಗಿಗಳಿಗೆ ಸರ್ಕಾರವು ಸಾಮಾಜಿಕ, ಆರ್ಥಿಕ ಮತ್ತು ಔದ್ಯಮಿಕ ಭದ್ರತೆಯನ್ನು ಒದಗಿಸುವ ಕಾಳಜಿ ತೋರದೆ ಕೇವಲ ದುಡಿಮೆಗಾಗಿ ಬಳಕೆಯ ವಸ್ತುಗಳಂತೆ ವ್ಯವಹರಿಸುತ್ತಿರುವುದು ಶೋಷಣಾತ್ಮಕ ಧೋರಣೆಯಾಗಿದೆ ಎಂದರು.

ಸಾಮಾಜಿಕ ಸುರಕ್ಷಾ ಯೋಜನೆಯಾದ ಇಎಸ್‌ಐ ಸೌಲಭ್ಯ ಹಾಗೂ ಸರ್ಕಾರಿ ನೌಕರರಿಗೆ ರೂಪಿಸಿರುವ ನೌಕರ ಸ್ನೇಹಿ ಉಚಿತ ವೈದ್ಯಕೀಯ ಯೋಜನೆಯನ್ನು ಇವರಿಗೂ ಸಹ ವಿಸ್ತರಿಸದಿರುವ ವಿಚಾರವು ಗಂಭೀರವಾಗಿದೆ. ನಿಸ್ವಾರ್ಥತೆ ಮತ್ತು ಸೇವಾ ಮನೋಭಾವದಿಂದ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಮಸ್ಯೆಯನ್ನು ಚರ್ಚಿಸಿ ಸೂಕ್ತ ಪರಿಹಾರವನ್ನು ಒದಗಿಸಬೇಕು ಎಂದು ಸದಸ್ಯ ಸಲೀಂ ಅಹ್ಮದ್ ಅವರು ನಿಯಮ 330ರಡಿ ಮಂಡಿಸಿದ ವಿಷಯಕ್ಕೆ ಸಚಿವರು ಲಿಖಿತ ಮಾಹಿತಿ ನೀಡಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ 10 ಸಾವಿರ ರೂ. ಸಹಾಯಕಿಯರಿಗೆ 5,250 ರೂ. ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ 6,250 ರೂ.ಗಳ ಗೌರವಧನವನ್ನು ಕಳೆದ ಮಾರ್ಚ್‌ವರೆಗೆ ಪಾವತಿಸಲಾಗುತ್ತಿದೆ. 2022–23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತಹ ಸೇವಾ ಹಿರಿತನದ ಆಧಾರದ ಮೇಲೆ 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ 1500 ರೂ., 10 ವರ್ಷದಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ 1,250 ರೂ. ಮತ್ತು 10 ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿದವರಿಗೆ 1,000 ರೂ. ಗೌರವಧನವನ್ನು ಕಳೆದ ಏಪ್ರಿಲ್‌ನಿಂದ ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೊರೊನಾ ತಡೆಗಟ್ಟಲು ವೈದ್ಯರು, ನರ್ಸ್‌ಗಳು ಸದಾ ಸಿದ್ಧರಿರಬೇಕು

ರಾಜ್ಯ ನರ್ಸಿಂಗ್ ಕೌನ್ಸಿಲ್ ರಿಜಿಸ್ಟ್ರಾರ್ ಪ್ರಸನ್ನಕುಮಾರ್



ಮೈಸೂರು, ಡಿ.22(ಎಸ್‌ಪಿಎನ್)– ಆಗಾಗ ಕೊರೊನಾ ವೈರಸ್ ಹರಡುವಿಕೆಯನ್ನು ತಡೆಗಟ್ಟಲು ಇಲ್ಲಿನ ವೈದ್ಯರು ಹಾಗೂ ನರ್ಸ್‌ಗಳು ಸದಾ ಸಿದ್ಧರಿರಬೇಕು ಎಂದು ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್ ರಿಜಿಸ್ಟ್ರಾರ್ ಪ್ರಸನ್ನ ಕುಮಾರ್ ಮನವಿ ಮಾಡಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಶತಮಾನೋತ್ಸವ ಭವನದಲ್ಲಿ ಜೆಎಸ್‌ಎಸ್ ಕಾಲೇಜು ಆಫ್ ನರ್ಸಿಂಗ್ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ರೋಗಿಗಳಿಗೆ ವೈದ್ಯರು, ನರ್ಸ್‌ಗಳು ತೋರುವ ಮುತುವರ್ಜಿಯಿಂದ ಬಹುಬೇಗ ಗುಣಮುಖರಾಗುತ್ತಾರೆ. ಕೊರೊನಾದಂತಹ ಸಾಂಕ್ರಾಮಿಕ ಕಾಯಿಲೆಗಳನ್ನು ಭಾರತದಲ್ಲಿ ಎದುರಿಸಲು ಬಲಿಷ್ಠವಾದ ಆರೋಗ್ಯ ವ್ಯವಸ್ಥೆ ಸೃಷ್ಟಿಸುವ ಅವಶ್ಯಕತೆ ಇದೆ. ಚೀನಾದಲ್ಲಿ ಕೊರೊನಾ ತಳಿ ಕಾಣಿಸಿಕೊಂಡಿದೆ. ಅದು ಭಾರತದಲ್ಲೂ ಕಾಣಿಸಿಕೊಳ್ಳುವ ಸಂಭವವಿದೆ ಎಂದರು.

ವೈದ್ಯಕೀಯ ಕ್ಷೇತ್ರದಲ್ಲಿ ಎಷ್ಟೇ ಹೊಸ ಆವಿಷ್ಕಾರವಾಗಿದ್ದರೂ ರೋಗಿಗಳಿಗೆ ವೈದ್ಯರು, ನರ್ಸ್‌ಗಳ ಸೇವೆ ಅಪಾರ. ಜಗತ್ತಿನ ವಿವಿಧ ರಾಷ್ಟ್ರಗಳ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳಾಗಿವೆ. ಆದರೂ ಚೀನಾ, ಅಮೇರಿಕ, ಇಂಗ್ಲೆಂಡ್ ಹಾಗೂ ಜಪಾನ್ ಸೇರಿದಂತೆ ಅನೇಕ ಮುಂದುವರೆದ ರಾಷ್ಟ್ರಗಳಲ್ಲಿ ಆಸ್ಪತ್ರೆಯ ಸಣ್ಣಪುಟ್ಟ ಕೆಲಸಗಳಿಂದ ಹಿಡಿದು ರೋಗಿಗಳ ಆರೈಕೆವರೆಗೂ ರೋಬೋಟ್ ಬಳಕೆಯಾಗುತ್ತಿದೆ. ಆದರೂ ರೋಗಿಗಳಿಗೆ ರೋಬೋಟ್ ಸಲ್ಲಿಸುವ ಆರೈಕೆ ಅಷ್ಟೊಂದು ಪರಿಣಾಮಕಾರಿ ಆಗುತ್ತಿಲ್ಲ ಎಂದು ತಜ್ಞರು ತಿಳಿಸಿದ್ದಾರೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ ವ್ಯಾಪಕವಾಗಿ ಬಳಕೆಯಾಗುತ್ತದೆ. ಶಸ್ತ್ರಚಿಕಿತ್ಸೆಗೆ ರೋಬೋಟ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ಎಷ್ಟೇ ತಂತ್ರಜ್ಞಾನ ಉಪಯೋಗಿಸಿದರೂ ವೈದ್ಯರು, ನರ್ಸ್‌ಗಳು ತೋರುವ ಪ್ರೀತಿ, ವಿಶ್ವಾಸವನ್ನು ರೋಬೋಟ್‌ಗಳಿಂದ ನಿರೀಕ್ಷೆ ಮಾಡಲು ಸಾಧ್ಯವೇ ಎಂದ ಪ್ರಶ್ನಿಸಿದರು.

ಎಲ್ಲ ಸಂದರ್ಭಗಳಲ್ಲೂ ರೋಗಿಯ ಬಳಿ ವೈದ್ಯರು ಇರಲು ಸಾಧ್ಯವಿಲ್ಲ. ಆದರೆ, ನರ್ಸ್‌ಗಳು ಎಲ್ಲ ಸಂದರ್ಭದಲ್ಲೂ ರೋಗಿಗಳ ಬಳಿ ಇದ್ದು, ಅವರ ಆರೋಗ್ಯ ಸುಧಾರಣೆಗೆ ಶ್ರಮಿಸುತ್ತಾರೆ. ಹಾಗಾಗಿ ರೋಗಿಗಳು ಗುಣಮುಖವಾಗುವಲ್ಲಿ ನರ್ಸ್‌ಗಳ ಪಾತ್ರ ಮಹತ್ವದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿ ನೀವು 4 ವರ್ಷ ಅಧ್ಯಯನ ಮುಗಿಸಿ ಪದವಿ ಪಡೆದುಕೊಳ್ಳುತ್ತಿದ್ದೀರಿ. ಇನ್ನು ಜಗತ್ತಿನ ಯಾವುದೇ ಆಸ್ಪತ್ರೆಯಲ್ಲಿ ದರೂ ನೀವು ಸೇವೆ ಸಲ್ಲಿಸುವ ಮಟ್ಟಿಗೆ ನಿಮ್ಮನ್ನು ಈ ಸಂಸ್ಥೆ ಸಜ್ಜುಗೊಳಿಸಿದೆ. ಇದರ ಹಿಂದೆ ಇಲ್ಲಿನ ಉಪನ್ಯಾಸಕರ ಪಾತ್ರ ಬಹುಮುಖ್ಯ ಎಂದು ಅಭಿಪ್ರಾಯಪಟ್ಟರು.


ಈ ಸಂದರ್ಭ ಒಟ್ಟು 92 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಮೆರಿಟೋರಿಯಸ್ ಪ್ರಶಸ್ತಿಯನ್ನು ಅಮಾಯಾ ಶಾಜಿ, ಅತ್ಯುತ್ತಮ ವಿದ್ಯಾರ್ಥಿ ಪ್ರಶಸ್ತಿಯನ್ನು ನವಾಂಗ್, ಅತ್ಯುತ್ತಮ ಕ್ಲಿನಿಕಲ್ ಸ್ಟೂಡೆಂಟ್ ನರ್ಸ್ ಪ್ರಶಸ್ತಿಯನ್ನು ಕೇಸಿಯಾ, ಅತ್ಯುತ್ತಮ ಎನ್‌ಎಸ್‌ಎಸ್ ವಾಲೆಂಟಿಯರ್ ಪ್ರಶಸ್ತಿಯನ್ನು ಮಂಜುನಾಥ್ ಹಾಗೂ ನವಾಂಗ್, ಅತ್ಯುತ್ತಮ ಎನ್‌ಎಸ್‌ಎಸ್ ಸ್ವಯಂಸೇವಕರ ಪ್ರಶಸ್ತಿಯನ್ನು ಎಂ.ಆರ್. ದರ್ಶನ್, ಬಿ.ಕೆ. ಮಂಜುನಾಥ್ ಪಡೆದುಕೊಂಡರು.

ವೇದಿಕೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಪ್ರಾಂಶುಪಾಲರಾದ ಪ್ರೊ.ಎಂ.ಕೆ. ಅಶ್ವತಿದೇವಿ ಇದ್ದರು.

ಲಕ್ಷ ಹುದ್ದೆ ಭರ್ತಿಗೆ ಶೀಘ್ರ ಕ್ರಮ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರಿಗೆ ಸಿಎಂ ಉತ್ತರ






ಬೆಳಗಾವಿ, 2023ರ ಬಜೆಟ್ ಅಧಿವೇಶನದ ವೇಳೆಗೆ ಖಾಲಿ ಇರುವ ಒಂದು ಲಕ್ಷ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ವಿಧಾನ ಪರಿಷತ್ ಕಲಾಪದಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್ ಸದಸ್ಯ ಸಿ.ಎನ್.ಮಂಜೇಗೌಡರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ರಾಜ್ಯದಲ್ಲಿ ವಿವಿಧ ಇಲಾಖೆಗಳ ವಿವಿಧ ವೃಂದದ 7.60 ಲಕ್ಷ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಈಗಾಗಲೇ 5.11 ಲಕ್ಷ ಹುದ್ದೆಗಳು ಭರ್ತಿಯಾಗಿವೆ ಇನ್ನು ಉಳಿದ 2.53 ಲಕ್ಷ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳ ಭರ್ತಿಗೆ ಕ್ರಮ ವಹಿಸಿದ್ದು, ಬಜೆಟ್ ಅಧಿವೇಶನದ ವೇಳೆಗೆ ಒಂದು ಲಕ್ಷ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುವುದು ಎಂದರು. ತುರ್ತು ಅಗತ್ಯವಿರುವ ಹುದ್ದೆಗಳನ್ನು ಗುರುತಿಸಲು ಸೂಚಿಸಲಾಗಿದ್ದು, ಸಿ ಮತ್ತು ಡಿ ದರ್ಜೆಯ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಾಗಿದೆ. ಖಾಲಿ ಇರುವ ಎ ಮತ್ತು ಬಿ ದರ್ಜೆಯ ಹುದ್ದೆಗಳಿಗೆ ಹಾಲಿ ಇರುವ ಅಧಿಕಾರಿಗಳಿಗೆ ಹೆಚ್ಚುವರಿಯಾಗಿ ಜವಾಬ್ದಾರಿ ವಹಿಸಲಾಗಿದೆ ಎಂದರು. ರಾಜ್ಯ ಸರ್ಕಾರದಲ್ಲಿ ಒಟ್ಟು 43 ವಿವಿಧ ಇಲಾಖೆಗಳಿದ್ದು, ಎ ಯಿಂದ ಡಿ ದರ್ಜೆವರೆಗಿನ ಹುದ್ದೆಗಳನ್ನು ನಾವು ಭರ್ತಿ ಮಾಡಲಿದ್ದು, ಮಂಜೂರಾದ ಹುದ್ದೆಗಳ ಪೈಕಿ ಶೇ. 34 ರಷ್ಟು ಹುದ್ದೆಗಳು ಖಾಲಿ ಇವೆ. ಆದರೂ ಪ್ರಸ್ತುತ ಕರ್ತವ್ಯ ನಿರ್ವಹಿ ಸುತ್ತಿರುವ ಸಿಬ್ಬಂದಿಗಳನ್ನು ಖಾಲಿಯಿರುವ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಭಾರದಲ್ಲಿರಿಸಿ ದೈನಂದಿನ ಕೆಲಸ–ಕಾರ್ಯಗಳನ್ನು ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ ಸಾರ್ವಜನಿಕರ ಕೆಲಸಗಳು ವಿಳಂಬವಾಗುವುದಿಲ್ಲ ಎಂದು ತಿಳಿಸಿದರು.

ಇದಕ್ಕೂ ಮುನ್ನ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರು ಮಾತನಾಡಿ, ನ್ಯಾಯಾಂಗ ಇಲಾಖೆಯಲ್ಲಿ 26,800 ಹುದ್ದೆಗಳು ಖಾಲಿ ಇವೆ. ಶಿಕ್ಷಣ ಇಲಾಖೆಯಲ್ಲಿ 20 ಸಾವಿರ ಹುದ್ದೆಗಳು ಖಾಲಿ ಇವೆ. ಜನರು ಸರ್ಕಾರಿ ಕಚೇರಿಗೆ ಪ್ರತಿ ದಿನ ಅಲೆದಾಡುತ್ತಿದ್ದಾರೆ. ಯಾವುದೇ ಕೆಲಸಗಳು ಆಗುತ್ತಿಲ್ಲ. ಪದವಿ ಪಡೆದಿರುವ ನಿರುದ್ಯೋಗ ಯುವಕರು ಕೆಲಸವಿಲ್ಲದೆ ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರದವರು ಉದ್ಯೋಗ ಮೇಳ ಮಾಡಿ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ 82.700 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಹೊರಟಿದ್ದೀರಿ. ಇದರಿಂದ ಸರ್ಕಾರದ ಮಾಹಿತಿ ಸೋರಿಕೆಯಾಗುವ ಸಂಭವವಿದ್ದು, ಗುತ್ತಿಗೆ ಆಧಾರದ ನೇಮಕಾತಿಯನ್ನು ರದ್ದು ಮಾಡಿ, ಉದ್ಯೋಗ ಮೇಳ ಮಾಡಿ ನೇರನೇಮಕಾತಿ ಮಾಡಿಕೊಂಡು ಯುವಜನತೆಗೆ ಅನುಕೂಲ ಮಾಡಿಕೊಡಬೇಕೆಂದು ತಿಳಿಸಿದರು.

ಮೂಡ್ನಾಕೂಡು ಚಿನ್ನಸ್ವಾಮಿ, ಪದ್ಮರಾಜ ದಂಡಾವತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಚಿನ್ನಸ್ವಾಮಿ



ಪದ್ಮರಾಜ

ಬೆಂಗಳೂರು, ಡಿ.23– ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಪ್ರಶಸ್ತಿಯನ್ನು ಗುರುವಾರ ಪ್ರಕಟಿಸಲಾಗಿದೆ. ಕನ್ನಡದ ಪ್ರಮುಖ ಲೇಖಕರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ಬಹುತ್ವದ ಭಾರತ ಮತ್ತು ಬೌದ್ಧ ತಾತ್ತ್ವಿಕತೆ' ಕೃತಿಯು ಈ ವರ್ಷದ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ. ಅನುವಾದ ಪ್ರಶಸ್ತಿಗೆ ಪದ್ಮರಾಜ ದಂಡಾವತಿ ಅವರು ಅನುವಾದಿಸಿದ 'ಸೀತಾ: ರಾಮಾಯಣದ ಸಚಿತ್ರ ಮರುಕಥನ' ಕೃತಿ ಆಯ್ಕೆಯಾಗಿದೆ.

'ಬಹುತ್ವದ ಭಾರತ ಮತ್ತು ಬೌದ್ಧ ತಾತ್ತ್ವಿಕತೆ' ಕೃತಿಯು ವಿವಿಧ ಪ್ರಬಂಧಗಳ ಸಂಕಲನವಾಗಿದ್ದು ಇದನ್ನು ಗದಗದ ಲಡಾಯಿ ಪ್ರಕಾಶನವು ಪ್ರಕಟಿಸಿದೆ. ಪದ್ಮರಾಜ ದಂಡಾವತಿ ಅವರು ದೇವದತ್ತ ಪಟ್ಟನಾಯಕ ಅವರ 'ಸೀತಾ' ಕೃತಿಯನ್ನು ಇಂಗ್ಲಿಷನಿಂದ ಕನ್ನಡಕ್ಕೆ ಅನುವಾದಿಸಿದ್ದು ಧಾರವಾಡದ ಮನೋಹರ ಗ್ರಂಥಮಾಲೆಯು ಈ ಕೃತಿಯನ್ನು ಪ್ರಕಟಿಸಿದೆ.

ಮುಖ್ಯ ಪ್ರಶಸ್ತಿಯು ಲಕ್ಷ ರೂ. ನಗದು ಹಾಗೂ ಅಭಿನಂದನೆ ಒಳಗೊಂಡಿದ್ದರೆ ಅನುವಾದ ಪ್ರಶಸ್ತಿ ಐವತ್ತು ಸಾವಿರ ನಗದು ಹಾಗೂ ಅಭಿನಂದನೆ ಒಳಗೊಂಡಿದೆ. ಈ ಪ್ರಶಸ್ತಿಗಳನ್ನು 2023 ಮಾರ್ಚ್ ತಿಂಗಳಲ್ಲಿ ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

ಇಂದು ರಾಮಕೃಷ್ಣ ವಿದ್ಯಾಶಾಲಾ ವಾರ್ಷಿಕೋತ್ಸವ

ಮೈಸೂರಿಗೆ ವಿವೇಕ ಬಾಂಧವ್ಯ ನಾಟಕ ಪ್ರದರ್ಶನ



ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಗಳು ಶುಕ್ರವಾರ 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕದ ತಾಲೀಮು ನಡೆಸಿದರು.

ಮೈಸೂರು, ಡಿ.23(ಎಸ್‌ಬಿಡಿ)– ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ 70ನೇ ವಾರ್ಷಿಕೋತ್ಸವದಲ್ಲಿ 'ಮೈಸೂರಿಗೆ ವಿವೇಕ ಬಾಂಧವ್ಯ' ನಾಟಕ ಪ್ರದರ್ಶಿಸಲು ವಿದ್ಯಾರ್ಥಿಗಳು ಸಜ್ಜಾಗಿದ್ದಾರೆ.

ವಿದ್ಯಾಶಾಲೆ ಆವರಣದಲ್ಲಿ ನಾಳೆ(ಡಿ.24) ಸಂಜೆ 5ಕ್ಕೆ ವಿದ್ಯಾರ್ಥಿಗಳ ಗೌರವ ವಂದನೆ ಬಳಿಕ 6.30ಕ್ಕೆ ವಾರ್ಷಿಕೋತ್ಸವದ ಉದ್ಘಾಟನೆ ನೆರವೇರಲಿದ್ದು, ಬೆಂಗಳೂರಿನ ಐಐಐಟಿ ನಿರ್ದೇಶಕ ಪ್ರೊ.ದೇಬಬ್ರತಾ ದಾಸ್ ಮುಖ್ಯ ಅತಿಥಿಯಾಗಿ ಭಾಗಿಯಾಗಲಿದ್ದಾರೆ. ವಿದ್ಯಾಶಾಲಾ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ಕರೆಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾನಂದ ಜೀ, ಪ್ರಾಂಶುಪಾಲ ಎಸ್.ಬಾಲಾಜಿ ಉಪಸ್ಥಿತರಿರಲಿದ್ದಾರೆ.

ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥವಾಗಿ ನಗರದ ನಾನಾ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಡೆಸಿದ ಸಾಮಾನ್ಯ ಜ್ಞಾನ ಲಿಖಿತ ಪರೀಕ್ಷೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ವಿದ್ಯಾಶಾಲಾ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ, ವಿನೂತನ ನೃತ್ಯ ರೂಪಕ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ 'ಮೈಸೂರಿಗೆ ವಿವೇಕ ಬಾಂಧವ್ಯ' ವಿಶೇಷ ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಲಿದ್ದಾರೆ.

ವಿಶೇಷ ರೂಪಕ 'ಮೈಸೂರಿಗೆ ವಿವೇಕ ಬಾಂಧವ್ಯ' ಶೀರ್ಷಿಕೆಯಲ್ಲೇ ಇರುವಂತೆ ಸ್ವಾಮಿ ವಿವೇಕಾನಂದರ ಮೈಸೂರು ಭೇಟಿ, ಮಹಾರಾಜರೊಂದಿಗೆ ಸಮಾಲೋಚನೆ ಸೇರಿದಂತೆ ಆ ಸಂದರ್ಭದ ಪೂರ್ಣ ಚಿತ್ರಣ ಹಾಗೂ ವಾಪಸ್ಸಾದ ನಂತರವೂ ಮೈಸೂರಿನೊಂದಿಗಿನ ಬಾಂಧವ್ಯ ಅಭಿವ್ಯಕ್ತವಾದ ಸಂಗತಿಗಳನ್ನು ಈ ರೂಪಕ ಕಣ್ಣಿಗೆ ಕಟ್ಟುತ್ತದೆ. ಸ್ವಾಮಿ ವಿವೇಕಾನಂದರು 1892ರ ನವೆಂಬರ್‌ನಲ್ಲಿ ಮೈಸೂರಿನಲ್ಲಿ ತಂಗಿದ್ದರಲ್ಲದೆ ಸದ್ವಿದ್ಯಾ ಪಾಠಶಾಲೆಯಲ್ಲಿ ಉಪನ್ಯಾಸ ನೀಡಿದ್ದರು. ಅಂದಿನ ದಿವಾನ್ ಶೇಷಾದ್ರಿ ಅಯ್ಯರ್ ಜೊತೆ ಅಂದಿನ ಮಹಾರಾಜರಾದ ಶ್ರೀ ಚಾಮರಾಜ ಒಡೆಯರ್ ಅವರನ್ನು ಭೇಟಿಯಾಗಿ ಅತ್ಯಂತ ಅವಿನಾಭಾವ ನಿಕಟ ಬಾಂಧವ್ಯ ಹೊಂದಿದರು. ಅಲ್ಲದೆ ಅಮೆರಿಕದ ಚಿಕಾಗೋ ಸರ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸುವ ತೀರ್ಮಾನ ಕೈಗೊಂಡರು. ಇಂತಹ ಹಲವು ಐತಿಹ್ಯ ಘಟನೆಗಳು ರೂಪಕದಲ್ಲಿವೆ.

ಈ ನಾಟಕದಲ್ಲಿ ರಾಮಕೃಷ್ಣ ವಿದ್ಯಾಶಾಲೆಯ 50–60 ವಿದ್ಯಾರ್ಥಿಗಳು ಅಭಿನಯಿಸಿದ್ದು, ರಚನೆ, ನಿರ್ದೇಶನ, ವಸ್ತ್ರ ವಿನ್ಯಾಸ, ರಂಗಸಜ್ಜಿಕೆ ಎಲ್ಲವನ್ನೂ ಶಾಲೆಯ ಶಿಕ್ಷಕರೇ ನಿರ್ವಹಿಸಿದ್ದಾರೆ. ತಿಂಗಳಿಂದ ನಿರಂತರ ತಾಲೀಮು ನಡೆಸಿದ್ದಾರೆ. ಒಂದು ಗಂಟೆಯ ಈ ರೂಪಕವನ್ನು ವೀಕ್ಷಿಸಿದರೆ ಸ್ವಾಮಿ ವಿವೇಕಾನಂದರ ಮೈಸೂರು ಭೇಟಿ ಹಾಗೂ ಆ ಸಂದರ್ಭದ ಐತಿಹ್ಯ ಸಂಗತಿಗಳು ಮನಮುಟ್ಟುತ್ತವೆ ಎಂದು ವಿದ್ಯಾಶಾಲೆಯ ಸ್ವಾಮಿ ಯುಕ್ತೇಶಾನಂದ ಜೀ ತಿಳಿಸಿದ್ದಾರೆ.

ಅಪರಾಧ ತಡೆಗೆ ಬೈಕ್ ರ್‍ಯಾಲಿ ಮೂಲಕ ಜಾಗೃತಿ



ಮೈಸೂರು, ಡಿ.23(ಜಿಎ)– ಇತ್ತೀಚಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಖದೀಮರು ಹೊಸ ಶೈಲಿಯಲ್ಲಿ ದುಷ್ಕೃತ್ಯ ವೆಸಗುವುದರ ಬಗ್ಗೆ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹೇಳಿದರು.

ಅಪರಾಧ ತಡೆ ಮಾಸಚರಣೆ ಹಿನ್ನೆಲೆಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಬೈಕ್ ರ್‍ಯಾಲಿಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಸಾರ್ವಜನಿಕರಿಗೆ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಲು ಇಲಾಖೆ ಮುಂದಾಗಿದ್ದು, ಅದರ ಭಾಗವಾಗಿ ಇಂದು ಬೈಕ್ ರ್‍ಯಾಲಿ ನಡೆಸಲಾಗುತ್ತಿದೆ ಎಂದರು.

ಮಹಿಳೆಯರು ಮತ್ತು ಮಕ್ಕಳು ಮೇಲಿನ ದೌರ್ಜನ್ಯದ ಬಗ್ಗೆ ಜಾಗೃತಿ ಮೂಡಿಸುವುದು, ಕಳ್ಳರ ಬಂಧಿಸಿದ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾಗಿರುವ ವಾಹನಗಳನ್ನು ಮೂಲ ವಾರಸುದಾರರಿಗೆ ನೀಡುವುದು ಸೇರಿದಂತೆ ಹಲವು ಕಾರ್ಯಕ್ರಮ ನಡೆಸಲಾಗುತ್ತದೆ ಆದರೂ ಯಾವ ರೀತಿಯಲ್ಲಾದರೂ ಜನರನ್ನು ವಂಚಿಸುವ ಖದೀಮರ ಬಗ್ಗೆ ತುಂಬಾ ಎಚ್ಚರಿಕೆ ವಹಿಸಬೇಕು. ಇದು ಕಳ್ಳರು ಮನೆಗಳಿಗೆ ನುಗ್ಗಿ ಲೂಟಿ ಮಾಡುವ ಕಾಲವಲ್ಲ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮನೆಯಲ್ಲಿ ಕುಳಿತುಕೊಂಡು ನಿಮ್ಮ ಖಾತೆಯಲ್ಲಿರುವ ಹಣ ಲಪಟಾಯಿಸುತ್ತಾರೆ. ಹಾಗಾಗಿ ಇತ್ತೀಚೆಗೆ ಅತೀ ಹೆಚ್ಚು ಸೈಬರ್ ಕ್ರೈಂ ಪ್ರಕರಣಗಳು ವರದಿಯಾಗುತ್ತಿವೆ ಎಂದು ತಿಳಿಸಿದರು.

ಈ ವೇಳೆ ಡಿಸಿಪಿ ಮುತ್ತುರಾಜ್, ಎಸಿಪಿಗಳಾದ ಶಿವಶಂಕರ್, ಶಶಿಧರ್, ಗಂಗಾಧರ್ ಉಪಸ್ಥಿತರಿದ್ದರು.

ನೂರಾರು ಸಿಬ್ಬಂದಿ ಭಾಗಿ: ಅಪರಾಧ ತಡೆ ಮಾಸಾಚರಣೆ ಪ್ರಯುಕ್ತ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸೇರಿ ಎಲ್ಲಾ ಠಾಣೆ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್‌ಗಳು ಹಾಗೂ 150ಕ್ಕೂ ಹೆಚ್ಚು ಸಿಬ್ಬಂದಿ ಭಾಗವಹಿಸಿದ್ದರು. ಪಂಜಿನ ಕವಾಯತು ಮೈದಾನದಿಂದ ಎಲ್‌ಐಸಿ ವೃತ್ತ, ಫೌಂಟೇನ್ ವೃತ್ತ, ಅಶೋಕ ರಸ್ತೆ, ಕೋಟೆ ಆಂಜನೇಯ ಸ್ವಾಮಿ ದೇವಾಲಯ, ಕೆ.ಆರ್.ವೃತ್ತ, ಅಗ್ರಹಾರ, ಆರ್.ಟಿ.ಓ ವೃತ್ತ, ಮುಡಾ ವೃತ್ತ, ರೈಲ್ವೆ ನಿಲ್ದಾಣ, ಇರ್ವಿನ್ ರಸ್ತೆ, ಆಯುರ್ವೇದ ಕಾಲೇಜು ವೃತ್ತ, ಸಯ್ಯಾಜಿರಾವ್ ರಸ್ತೆ, ಹೈವೇ ಸರ್ಕಲ್ ಮೂಲಕ ಸಂಚರಿಸಿದ ಬೈಕ್ ರ್‍ಯಾಲಿ ಪಂಜಿನ ಕವಾಯತು ಮೈದಾನದಲ್ಲೇ ಮುಕ್ತಾಯವಾಯಿತು.

ಕಂದಕಕ್ಕೆ ಉರುಳಿದ ಭಾರತೀಯ ಸೇನಾ ವಾಹನ, 16 ಯೋಧರು ಹುತಾತ್ಮ



ಸಿಕ್ಕಿಂ: ಉತ್ತರ ಸಿಕ್ಕಿಂನ ಲಾಚೆನ್ ಪಟ್ಟಣದಲ್ಲಿ ಭಾರತೀಯ ಸೇನೆಯ ವಾಹನವು ಕಂದಕಕ್ಕೆ ಉರುಳಿದ ಪರಿಣಾಮ 16 ಯೋಧರು ಹುತಾತ್ಮ ರಾಗಿದ್ದು ನಾಲ್ವರ ಯೋಧರ ಸ್ಥಿತಿ ಗಂಭೀರವಾಗಿದ್ದು ಅವರನ್ನು ಏರ್ ಲಿಫ್ಟ್ ಮಾಡಲಾಗಿದೆ.

ಚಟ್ಟೇನ್‌ನಿಂದ ಥಂಗು ಕಡೆಗೆ ತೆರಳುತ್ತಿದ್ದ ಸೇನಾ ವಾಹನ ತಿರುವು ಪಡೆಯುವಾಗ ಕಡಿದಾದ ಕಂದಕಕ್ಕೆ ಜಾರಿದೆ. ಅಪಘಾತದಲ್ಲಿ ಸೇನಾ ವಾಹನ ಸಂಪೂರ್ಣ ನುಜ್ಜುಗುಜ್ಜಾಗಿದೆ ಅಪಘಾತದಲ್ಲಿ ಗಾಯಗೊಂಡ ನಾಲ್ವರನ್ನು ಏರ್ ಲಿಫ್ಟ್ ಮಾಡಲಾಗಿದೆ. ಹುತಾತ್ಮರಾದವರಲ್ಲಿ ಮೂವರು ಜೂನಿಯರ್ ಕಮಿಷನ್ಡ್ ಅಧಿಕಾರಿಗಳು ಮತ್ತು 13 ಯೋಧರು ಸೇರಿದ್ದಾರೆ. ಯೋಧರ ಮೃತದೇಹಗಳನ್ನು ಹೊರಕ್ಕೆ ತೆಗೆಯಲಾಗಿದ್ದು ಮರಣೋತ್ತರ ಪರೀಕ್ಷೆಗಾಗಿ ಗ್ಯಾಂಗ್‌ಟಾಕ್‌ನ ಸರ್ಕಾರಿ ಎಸ್‌ಟಿಎನ್‌ಎಂ ಆಸ್ಪತ್ರೆಗೆ ಕೊಂಡೊಯ್ಯಲಾಗುತ್ತಿದ್ದು, ನಂತರ ಸೇನೆಗೆ ಹಸ್ತಾಂತರಿಸಲಾಗುತ್ತದೆ.

ಸಿಎಫ್‌ಟಿಆರ್‌ಐ ವಿಶ್ವಮಟ್ಟದಲ್ಲಿ ಪ್ರಜ್ವಲಿಸಲಿ; ಹಿರಿಯ ವಿಜ್ಞಾನಿ ಡಾ.ಪ್ರಕಾಶ್ ಆಶಯ



ಮೈಸೂರು, ಡಿ.23(ಜಿಎ)– ಮೈಸೂರಿನ ಸಿಎಫ್‌ಟಿಆರ್‌ಐನ ಆಹಾರ ತಂತ್ರಜ್ಞಾನ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಜ್ವಲಿಸಬೇಕು ಎಂದು ಸಿಎಫ್‌ಟಿಆರ್‌ಐ ನಿವೃತ್ತ ನಿರ್ದೇಶಕ ಹಾಗೂ ಹಿರಿಯ ವಿಜ್ಞಾನಿ ಡಾ.ವಿ.ಪ್ರಕಾಶ್ ಆಶಿಸಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದಲ್ಲಿ (ಸಿಎಫ್‌ಟಿಆರ್‌ಐ) ಶುಕ್ರವಾರ ಎಂ.ಎಸ್ಸಿ ಆಹಾರ ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಾಗೂ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಿನ್ನೆ ಕಾರ್ಯಕ್ರಮ ನಿಮಿತ್ತ ಹೈದರಬಾದ್‌ಗೆ ಹೋಗಿದ್ದೆ. ನನ್ನ ಮೆದುಳು ಮಾತ್ರ ಅಲ್ಲಿತ್ತು. ಆದರೆ ಯಾವಾಗ ಮೈಸೂರಿಗೆ ಹೋಗುತ್ತೇನೋ ಎಂದು ಮನಸ್ಸು ಹಂಬಲಿಸುತಿತ್ತು. ಇಲ್ಲಿಗೆ ಬಂದ ತಕ್ಷಣ ಮನಸ್ಸು ಉಲ್ಲಾಸಿತವಾಯಿತು ಎಂದರು.

ಮೈಸೂರಿನಲ್ಲಿ 1950ರ ಅ.21ರಂದು ಸಿಎಫ್‌ಟಿಆರ್‌ಐ ಸ್ಥಾಪಿಸಲಾಯಿತು. ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಅಡಿಯಲ್ಲಿ ಎ.ಆರ್. ಮೊದಲಿಯಾರ್ ಸಂಸ್ಥೆ ಸ್ಥಾಪನೆಗೆ ಮುಂದಾದ ಸಂದರ್ಭದಲ್ಲಿ ಚೆಲುವಾಂಬ ವಿಲಾಸ್ ಅರಮನೆ ಮತ್ತು ಅದರ ವಿಶಾಲ ಕ್ಯಾಂಪಸ್ ಅನ್ನು ಮಹಾರಾಜ ಜಯಚಾಮರಾಜ ಒಡೆಯರ್ ಅವರು ದಾನ ಮಾಡಿದರು. ಹಾಗಾಗಿ ಮಹಾರಾಜರನ್ನು ಸದಾ ಸ್ಮರಿಸಿಕೊಳ್ಳಬೇಕು. ಆರಂಭದಿಂದ ಈವರೆಗೂ ಆಹಾರ ತಂತ್ರಜ್ಞಾನದಲ್ಲಿ ಸಿಎಫ್‌ಟಿಆರ್‌ಐ ಮುಂಚೂಣಿಯಲ್ಲಿದೆ. ಮತ್ತಷ್ಟು ಸಂಶೋಧನೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟಕ್ಕೂ ಸಂಸ್ಥೆಯ ಕೀರ್ತಿ ಹಾಗೂ ಕಾರ್ಯವ್ಯಾಪ್ತಿ ವಿಸ್ತರಿಸಬೇಕು ಎಂದು ಆಶಿಸಿದರು.

ವಿದ್ಯಾರ್ಥಿಗಳು ಆಹಾರ ತಂತ್ರಜ್ಞಾನ ಬಗ್ಗೆ ಹೆಚ್ಚು ಅಧ್ಯಯನ ನಡೆಸಬೇಕು. ನಿಮ್ಮಿಷ್ಟದ ಆಯ್ಕೆಯಾದರೂ ಜ್ಞಾನ, ಪರಿಶ್ರಮ, ಕುಟುಂಬದ ಸಹಕಾರ ಹಾಗೂ ಆರ್ಥಿಕ ಬಲ ಅಗತ್ಯ. ಆನ್‌ಲೈನ್ ಶಿಕ್ಷಣ ತರಗತಿ ಭೌತಿಕ ಪಾಠ ಪ್ರವಚನಕ್ಕಿಂತ ಪರಿಣಾಮಕಾರಿ ಆಗದು. ಹಾಗಾಗಿ ಪದವೀಧರರಲ್ಲಿ ಶೇ.20ರಷ್ಟು ಮಂದಿ ಶಿಕ್ಷಕ ವೃತ್ತಿ ಆಯ್ಕೆ ಮಾಡಿಕೊಳ್ಳುವುದು ಅವಶ್ಯ. ಆ ಮೂಲಕ ನೀವು ಕಲಿತದ್ದನ್ನು ಮುಂದಿನ ಪೀಳಿಗೆಗೆ ತಲುಪಿಸಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇದೇ ವೇಳೆ 2020–22ನೇ ಸಾಲಿನ ಎಂ.ಎಸ್ಸಿ ಆಹಾರ ತಂತ್ರಜ್ಞಾನ ವಿಭಾಗದಲ್ಲಿ 5 ಚಿನ್ನದ ಪದಕ ಪಡೆದಿರುವ ಕೇರಳ ಮೂಲದ ಶ್ರೇಯಾ ಕಲ್ಯೆ ಸೇರಿದಂತೆ ತಲಾ ಒಂದು ಪದಕ ಪಡೆದ ಯುಷ್ಮಿತಾ ಗ್ರೋವರ್, ಭಾವ್ನಾ ಚುಗ್, ದಿಯಾ ಜ್ಯೋತಿಸ್, ಸಿನ್ನಿ ಮಿಶ್ರಾ, ಆರ್.ಲಕ್ಷ್ಮೀ ವಿಜಯನ್ ಹಾಗೂ ದಿವ್ಯಾ ಅಗರ್ವಾಲ್ ಅವರಿಗೆ ಪದಕ ಪ್ರದಾನ ಮಾಡಿ, ಅಭಿನಂದಿಸಲಾಯಿತು.

ನಂತರ ಎಂ.ಎಸ್ಸಿ ಆಹಾರ ತಂತ್ರಜ್ಞಾನ ವಿದ್ಯಾರ್ಥಿಗಳಾದ ಕಾಜಲ್ ಸಾಹು, ಸಚಿನ್ ಅಲ್ಲೂರ್, ಜಿ.ಚೇತನ್, ರಿಯಾ ಸೈನಿ, ಕೃಷ್ಣಕುಮಾರ್ ಉಪಾಧ್ಯಾಯ, ವಲ್ಲಿಯಾ ಪರ್ಲ್ ಕುನ್ನಾ, ಜೆ.ಭರತ್, ಎಸ್.ಎನ್.ವಾಸುದೇವ, ಎಸ್.ವಿ.ಚಂದನ, ಎ.ಆರ್.ಶಿವಕುಮಾರ್, ಎ.ಪ್ರದೀಪ್, ಸೋಮನ್ ರಾಹುಲ್ ಅಜಿತ್, ಎಂ.ಕಲಂದರ್, ಡಿ.ವೆಂಕಟಲಕ್ಷ್ಮೀ, ಶಾಲಿನಿ ಸಿನ್ಹಾ ಮತ್ತು ಕೆ.ರಾಮ್‌ಪ್ರಸಾದ್ ನಾಯ್ಕ್ ಅವರಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಎಚ್‌ಆರ್‌ಡಿ ವಿಭಾಗದ ಮುಖ್ಯಸ್ಥ ಡಾ.ಪಿ.ಎಸ್.ನೇಗಿ, ಸಂಯೋಜಕ ಡಾ.ಗಿರಿಧರ್ ಪರ್ವತಂ ಮತ್ತಿತರರು ಉಪಸ್ಥಿತರಿದ್ದರು.

ತಮ್ಮ ಮನೆಯಲ್ಲಿ ಬಾಡಿಗೆಗಿದ್ದ ಮಹಿಳೆ ಮೇಲೆ ದೌರ್ಜನ್ಯ ಆರೋಪ

ಬಿಜೆಪಿ ಮುಖಂಡರು, ಅವರ ಪುತ್ರಿ ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲು

ಮೈಸೂರು, ಡಿ.23–ಕಳೆದ 10 ತಿಂಗಳ ಹಿಂದೆ ನಡೆದಿದ್ದ ಎನ್ನಲಾದ ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ ಹಾಗೂ ಅವರ ಪುತ್ರಿಯ ವಿರುದ್ಧ ಮೈಸೂರಿನ ಕುವೆಂಪುನಗರ ಠಾಣೆಯಲ್ಲಿ ಶುಕ್ರವಾರ ಸಂಜೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಅದರಿಂದರಲ್ಲಿ ನಿವಾಸಿಯಾಗಿರುವ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಎನ್ನಲಾದ ಲೀಲಾ ಶೆಟ್ಟಿ ಮತ್ತು ಅವರ ಪುತ್ರಿ ಸ್ನೇಹಾ ಆರೋಪಕ್ಕೆ ಗುರಿಯಾಗಿರುವವರು. ಇವರ ತಮ್ಮ ಮನೆಯಲ್ಲಿ ಬಾಡಿಗೆಗಿದ್ದ ಪರಿಶಿಷ್ಟ ಜಾತಿಯ ಕುಟುಂಬವೊಂದರ ಮೇಲೆ 10 ತಿಂಗಳ ಹಿಂದೆ ದೌರ್ಜನ್ಯ ನಡೆದಿತ್ತು. ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಬಗ್ಗೆ ಹಾಗೂ ಪರಿಶಿಷ್ಟ ಜಾತಿ ಸಮುದಾಯದ ಬಗ್ಗೆ ಕೀಳಾಗಿ ಮಾತನಾಡಿದ್ದಲ್ಲದೇ ಕೊಲೆ ಬೆದರಿಕೆ ಹಾಕಿದ್ದರು ಎಂದು ಆರೋಪಿಸಲಾಗಿದೆ. ಇವರ ವಿರುದ್ಧ ನಾಲ್ಕೈದು ಬಾರಿ ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಕಾರ್ಪೊರೇಟರ್ ಪಲ್ಲವಿ ಬೇಗಂ, ದಲಿತ ಸಂಘರ್ಷ ಸಮಿತಿ ಕಮಲ, ದಲಿತ ಮಹಿಳಾ ಸಂಘದ ಅಧ್ಯಕ್ಷೆ, ಮಾನವ ಹಕ್ಕುಗಳ ಹೋರಾಟಗಾರ ಗೋವಿಂದರಾಜು ಸೇರಿದಂತೆ ಮಹಿಳೆಯರೂ ಸೇರಿ ಐವತ್ತಕ್ಕೂ ಹೆಚ್ಚು ಮಂದಿ ಕುವೆಂಪುನಗರ ಠಾಣೆ ಮುಂದೆ ಪ್ರತಿಭಟನೆ ನಡೆಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಕೆ.ಆರ್. ಉಪ ವಿಭಾಗದ ಎಸಿಪಿ ಗಂಗಾಧರಸ್ವಾಮಿ ಅವರು ಲೀಲಾ ಶೆಟ್ಟಿ ಮನೆಯಲ್ಲಿ ಬಾಡಿಗೆಗಿದ್ದ ಮಹಿಳೆಯಿಂದ ದೂರನ್ನು ಪಡೆದು ಪ್ರಕರಣ ದಾಖಲು ಮಾಡಿ ಮುಂದುವರೆಸಿದ್ದಾರೆ.

ಮುಂಬೈ ಕ್ರೈಂ ಪೊಲೀಸರ ಹೆಸರಲ್ಲಿ ಮೈಸೂರು ಇಂಜಿನಿಯರ್‌ಗೆ ಫೋನ್ ಮಾಡಿ 49,999 ರೂ. ವಂಚನೆ

ಮೈಸೂರು, ಡಿ. 23– ಮುಂಬೈ ಕ್ರೈಂ ಪೊಲೀಸರ ಹೆಸರಿನಲ್ಲಿ ಕರೆ ಮಾಡಿದ ಖದೀಮರು ಇಂಜಿನಿಯರ್‌ವೊಬ್ಬರಿಗೆ ಆನ್‌ಲೈನ್ ಮೂಲಕ 49,999 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಬನ್ನಿಮಂಟಪ ಎಲ್‌ಐಸಿ ಕ್ವಾರ್ಟರ್ಸ್‌ನಲ್ಲಿ ವಾಸವಿರುವ ಎಂ. ಮೌನಿಕ(28) ವಂಚನೆಗೊಳಗಾದವರಾಗಿದ್ದು, ಇವರಿಗೆ ಡಿಸೆಂಬರ್ 21ರಂದು ಕರೆ ಮಾಡಿದ ವ್ಯಕ್ತಿ ತಾನು ಮುಂಬೈ ಕ್ರೈಂ ಠಾಣೆಯಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿ, ಮೌನಿಕ ಹೆಸರಿನಲ್ಲಿ ಮುಂಬೈನಿಂದ ಥೈವಾನ್‌ಗೆ ಪಾರ್ಸಲ್ ಕಳುಹಿಸಲಾಗಿದ್ದು, ಅದರಲ್ಲಿ ಡ್ರಗ್ಸ್ ಇರುವುದಾಗಿ ಪತ್ತೆಯಾಗಿದೆ ಎಂದು ಹೇಳಿ ಬೆದರಿಸಿದ್ದಾನೆ. ನಂತರ ಪಾರ್ಸಲ್ ತಡೆಹಿಡಿದಿದ್ದಾಗಿ, 49,999 ರೂ. ಕಳುಹಿಸಿದರೆ ಫೈನಾನ್ಷಿಯಲ್ ಟೀಂನವರು ಪಾರ್ಸೆಲ್ ಬಗ್ಗೆ ವೆರಿಫಿಕೇಷನ್ ಮಾಡುತ್ತಾರೆ ಎಂದು ತಿಳಿಸಿದ್ದು, ಇದನ್ನು ನಂಬಿದ ಮೌನಿಕ ಹಣವನ್ನು ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳವು

ಮೈಸೂರು, ಡಿ. 23– ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳವಾಗಿರುವ ಘಟನೆ ಮೈಸೂರಿನ ಮಹದೇವಪುರ ಮುಖ್ಯ ರಸ್ತೆಯ 1ನೇ ಕ್ರಾಸ್‌ನಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಅಮೀನ್ ಅರ್ಷ(31) ಎಂಬುವರು ಡಿಸೆಂಬರ್ 20ರಂದು ರಾತ್ರಿ ತಮ್ಮ ಮನೆಯ ಮುಂದೆ ಸುಜುಕಿ ಬರ್ಗ್‌ಮ್ಯಾನ್ ಸ್ಟ್ರೀಟ್ ಸ್ಕೂಟರ್ (ಕೆಎ 09–ಜೆಹೆಚ್ 0671) ನಿಲ್ಲಿಸಿದ್ದು, ಮರುದಿನ ಬೆಳಿಗ್ಗೆ ನೋಡಿದಾಗ ಸ್ಕೂಟರ್ ಕಳವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಿಟೆಕ್ನಿಕ್‌ನಲ್ಲಿ ಕೆಲಸ ಕೊಡಿಸುವುದಾಗಿ 10.23 ಲಕ್ಷ ವಂಚನೆ: ಮಹಿಳೆ ವಿರುದ್ಧ ಪ್ರಕರಣ ದಾಖಲು

ಮಂಡ್ಯ, ಡಿ. 23– ಪಾಲಿಟೆಕ್ನಿಕ್ ಕಾಲೇಜಿನಲ್ಲಿ ದ್ವಿತೀಯ ದರ್ಜೆ ಕ್ಲರ್ಕ್ ಕೆಲಸ ಕೊಡಿಸುವುದಾಗಿ ನಂಬಿಸಿದ ಮಹಿಳೆ, ವ್ಯಕ್ತಿಯೋರ್ವರಿಂದ 10.23 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ. ಬೆಂಗಳೂರಿನ ಮುನಿಯಪ್ಪ ಲೇಔಟ್ ನಿವಾಸಿ ಪಿ. ಉಮಾದೇವಿ ಎಂಬುವರೇ ಆರೋಪಕ್ಕೆ ಗುರಿಯಾದವರಾಗಿದ್ದು, ಮಂಡ್ಯ ತಾಲೂಕು ಕೆರಗೋಡು ಹೋಬಳಿ ಕಲ್ಮಂಟಿದೊಡ್ಡಿ ಗ್ರಾಮದಲ್ಲಿರುವ ಶ್ರೀ ಪಂಚಲಿಂಗೇಶ್ವರ ದೇವಸ್ಥಾನಕ್ಕೆ 2 ವರ್ಷದ ಹಿಂದಿನಿಂದಲೂ ಬರುತ್ತಿದ್ದರು ಎಂದು ಹೇಳಲಾಗಿದ್ದು, ಗ್ರಾಮದ ಕೆ.ಪಿ. ಸೋಮಶೇಖರ(43) ಎಂಬುವರನ್ನು ಪರಿಚಯ ಮಾಡಿಕೊಂಡ ಈಕೆ, ತಾನು ಜಯಚಾಮರಾಜೇಂದ್ರ ಒಡೆಯರ್ ಪಾಲಿಟೆಕ್ನಿಕ್ ಕಾಲೇಜು ಪ್ರಾಂಶುಪಾಲೆ ಎಂದು ನಂಬಿಸಿದ್ದಾಳೆ.

ಈ ಕಾಲೇಜಿನಲ್ಲಿ ದ್ವಿತೀಯ ದರ್ಜೆ ಕ್ಲರ್ಕ್ ಕೆಲಸ ಖಾಲಿ ಇದ್ದು, ನಿಮ್ಮ ಕಡೆಯ ಯಾರಿಗಾದರೂ ಕೆಲಸ ಬೇಕಾದರೆ ಕೊಡಿಸುತ್ತೇನೆ ಎಂದು ತಿಳಿಸಿದ್ದಾಳೆ. ಅದನ್ನು ನಂಬಿದ ಸೋಮಶೇಖರ ಅವರು, ತಮ್ಮ ಮಗ ಜೀವನ್ ಮತ್ತು ಅಕ್ಕನ ಮಗ ಆದರ್ಶ ಎಂಬುವರಿಗೆ ಕೆಲಸ ಕೊಡಿಸುವಂತೆ ಕೇಳಿಕೊಂಡಾಗ ಇಬ್ಬರಿಂದ ಸೇರಿ 50 ಲಕ್ಷ ರೂ. ಕೊಡಲು ತೀರ್ಮಾನವಾಗಿ, 20 ಲಕ್ಷರೂ. ಮುಂಗಡವಾಗಿ ಕೊಡುವಂತೆ ಉಮಾದೇವಿ ಕೇಳಿದ್ದಾಳೆ. ಸೋಮಶೇಖರ ಹಾಗೂ ಅವರ ಬಾವ ಶಿವಣ್ಣ ಸೇರಿ ಉಮಾದೇವಿಗೆ 10,23,484 ರೂ. ನೀಡಿದ್ದು, ವರ್ಷ ಕಳೆದರೂ ಕೆಲಸವಾಗಲೀ ಅಥವಾ ಹಣವಾಗಲೀ ಹಿಂತಿರುಗಿಸದೇ ವಂಚಿಸಲಾಗಿದೆ. ಈ ಸಂಬಂಧ ಕೆರಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಚರತ್ನ ಯಾತ್ರೆಯಲ್ಲಿ ರೈತರ 8 ಸಾವಿರ ಪಿಕ್‌ಪಾಕೆಟ್

ಕಿರುಗಾವಲು, ಡಿ. 23– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಪಂಚರತ್ನ ಯಾತ್ರೆ ನೋಡಲು ತೆರಳಿದ್ದ ರೈತನಿಂದ 8 ಸಾವಿರ ರೂ. ಪಿಕ್‌ಪಾಕೆಟ್ ಮಾಡಿರುವ ಬಗ್ಗೆ ವರದಿಯಾಗಿದೆ. ಕಿರುಗಾವಲು ಗ್ರಾಮದ ರೈತ ವಿಜಯಕುಮಾರ್(65) ಹಣ ಕಳೆದುಕೊಂಡವರಾಗಿದ್ದು, ಡಿಸೆಂಬರ್ 20ರಂದು ರಾತ್ರಿ ಕಿರುಗಾವಲಿಗೆ ಪಂಚರತ್ನ ಯಾತ್ರೆ ಆಗಮಿಸಿದ್ದರಿಂದ ಅಂದು ರಾತ್ರಿ 12 ಗಂಟೆ ಸುಮಾರಿನಲ್ಲಿ ಗ್ರಾಮದ ಬಸ್ ನಿಲ್ದಾಣದ ಬಳಿ ಗುಂಪಿನ ನಡುವೆ ನಿಂತು ಯಾತ್ರೆಯನ್ನು ವೀಕ್ಷಿಸುವ ವೇಳೆ ಖದೀಮರು, ಇವರ ನಿಕ್ಕರ್ ಜೇಬಿನಲ್ಲಿದ್ದ 8 ಸಾವಿರ ರೂ.ಗಳನ್ನು ಪಿಕ್‌ಪಾಕೆಟ್ ಮಾಡಿದ್ದಾರೆ. ಈ ಸಂಬಂಧ ಕಿರುಗಾವಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತಾಂತರ ಯತ್ನ ಆರೋಪ: ಮಹಿಳೆ ಬಂಧನ

ಮೈಸೂರು, ಡಿ. 23– ಹಿಂದೂ ವ್ಯಕ್ತಿಯನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಲು ಪ್ರಯತ್ನಿಸಿದ ಆರೋಪದ ಮೇರೆಗೆ ಮಹಿಳೆಯೋರ್ವಳನ್ನು ಮೈಸೂರಿನ ಹೆಬ್ಬಾಳ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿವರ: ಮೈಸೂರಿನ ಹೆಬ್ಬಾಳು ಸಿಐಟಿಬಿ ಛತ್ರದ ಸಮೀಪದ ನಿವಾಸಿ ಶ್ರೀಧರ್(30) ಎಂಬುವರು ಅಲ್ಲಿನ ಬಸ್ ನಿಲ್ದಾಣದ ಬಳಿ ಡಿಸೆಂಬರ್ 21ರಂದು ಮಧ್ಯಾಹ್ನ ಹೋಗುತ್ತಿದ್ದಾಗ ಕಮಲಮ್ಮ ಎಂಬಾಕೆ ಅವರ ಹತ್ತಿರ ಬಂದು ಕ್ರಿಶ್ಚಿಯನ್ ಧರ್ಮದ ಬಗ್ಗೆ ಮಾತನಾಡಿ, ಹಿಂದೂ ದೇವರುಗಳನ್ನು ಅವಾಚ್ಯವಾಗಿ ನಿಂದಿಸಿ ಶ್ರೀಧರ್ ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವಂತೆ ಒತ್ತಾಯಿಸಿದ್ದಾರೆ. ಅಲ್ಲದೇ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದರೆ ಹಣ ನೀಡುವುದಾಗಿಯೂ, ಕುಟುಂಬದವರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುವುದಾಗಿಯೂ ಆಮಿಷ ಒಡ್ಡಿದ್ದಾರೆ. ಮತಾಂತರಗೊಳ್ಳಲು ನಿರಾಕರಿಸಿದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದರು ಎಂದು ಆರೋಪಿಸಲಾಗಿದೆ. ಸ್ವತಃ ಶ್ರೀಧರ್ ಅವರೇ ಕಮಲಮ್ಮ ಎಂಬಾಕೆಯನ್ನು ಠಾಣೆಗೆ ಕರೆದೊಯ್ದು ನೀಡಿದ ದೂರನ್ನು ದಾಖಲಿಸಿಕೊಂಡ ಹೆಬ್ಬಾಳ್ ಠಾಣೆ ಪೊಲೀಸರು, ಆಕೆಯನ್ನು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ.

ಇಬ್ಬರು ಖದೀಮರ ಸೆರೆ: 10 ಲಕ್ಷ ರೂ. ಮೌಲ್ಯದ 136 ಗ್ರಾಂ ಚಿನ್ನಾಭರಣ, 3 ಕಾರುಗಳು ವಶಕ್ಕೆ

ಮೈಸೂರು, ಡಿ.23(ಆರ್‌ಕೆ)–ಇಬ್ಬರು ಖದೀಮರನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಅವರಿಂದ 10 ಲಕ್ಷ ರೂ. ಮೌಲ್ಯದ 136 ಗ್ರಾಂ ಚಿನ್ನಾಭರಣ, 1 ದ್ವಿಚಕ್ರ ವಾಹನ, 3 ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ. ಹುಣಸೂರಿನ ನಸ್ರುಲ್ಲಾ ಬಾಬು ಹಾಗೂ ಜಮಾಲ್ ಬಂಧಿತರು. ಮೈಸೂರಿನ ಜಯಲಕ್ಷ್ಮೀಪುರಂ, ಕುವೆಂಪುನಗರ, ಸರಸ್ವತಿಪುರಂ ಠಾಣಾ ವ್ಯಾಪ್ತಿಯಲ್ಲಿ ಮನೆ ಕಳವು, ನಜರ್‌ಬಾದ್ ವ್ಯಾಪ್ತಿಯಲ್ಲಿ ಸುಲಿಗೆ, ಹಾಸನ ಟೌನ್, ಕೆ.ಆರ್.ಪೇಟೆ, ಬೀರೂರು ಪೊಲೀಸ್ ಠಾಣಾ ಸರಹದ್ದುಗಳಲ್ಲೂ ವಾಹನ ಕಳವು ಮಾಡಿ ಆರೋಪಿಗಳು ತಲೆಮರೆಸಿಕೊಂಡಿದ್ದರು. ನವೆಂಬರ್ 22ರಂದು ನಸ್ರುಲ್ಲಾ ಬಾಬುನನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಡಿಸೆಂಬರ್ 6ರಂದು ಮತ್ತೋರ್ವನನ್ನು ಬಂಧಿಸುವಲ್ಲಿ ಯಶಸ್ವಿಯಾದರು. ಈ ಪತ್ತೆ ಕಾರ್ಯಾಚರಣೆಯಲ್ಲಿ ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ, ಇನ್ಸ್‌ಪೆಕ್ಟರ್ ಜಿ.ಶೇಖರ್, ಎಎಸ್‌ಐ ಅಸ್ಗರ್ ಖಾನ್, ಸಿಬ್ಬಂದಿಗಳಾದ ಸಲೀಂ ಪಾಷ, ರಾಮಸ್ವಾಮಿ, ಯಾಕೂಬ್ ಷರೀಫ್, ಆನಂದ್, ನರಸಿಂಹ, ಉಮಾ ಮಹೇಶ್, ಗಣೇಶ್, ಗೌತಮ್ ಪಾಲ್ಗೊಂಡಿದ್ದರು.

ಮೂವರ ಬಂಧನ: 1.625 ಕೆಜಿ ಗಾಂಜಾ ವಶ

ಮೈಸೂರು, ಡಿ. 23– ಮೈಸೂರು ನಗರ ಸೆನ್ ಠಾಣೆ ಪೊಲೀಸರು ಮೂವರು ಗಾಂಜಾ ಮಾರಾಟಗಾರರನ್ನು ಬಂಧಿಸಿ 1.625 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮೂಲತಃ ತುಮಕೂರು ಜಿಲ್ಲೆಯವನಾಗಿದ್ದು, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಹುಸೇನ್ ಬೇಗ್ ಅಲಿಯಾಸ್ ಫಾರೂಕ್ ಬೇಗ್(45), ಬೆಂಗಳೂರಿನ ಬಿಸ್ಮಿಲ್ಲಾನಗರ ನಿವಾಸಿ ಅತೀಕ್ ಪಾಷಾ ಅಲಿಯಾಸ್ ಅತುಬಾ(35) ಮತ್ತು ಮೈಸೂರು ತಾಲೂಕು ಕಾಮನಕೆರೆಹುಂಡಿ ಗ್ರಾಮದ ಇಶಾಕ್ ಅಹಮದ್(26) ಬಂಧಿತರಾಗಿದ್ದು, ಡಿಸೆಂಬರ್ 21ರಂದು ಮಧ್ಯಾಹ್ನ ಸೆನ್ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್ ಸಿಬ್ಬಂದಿ ಗಸ್ತಿನಲ್ಲಿರುವಾಗ ಚಾಮುಂಡಿಬೆಟ್ಟ ವೃತ್ತದ ತಪ್ಪಲಿನಲ್ಲಿರುವ ಲಾರಿ ಟರ್ಮಿನಲ್ ರಸ್ತೆಯಲ್ಲಿ ಈ ಮೂವರು ಪೊಲೀಸರನ್ನು ಕಂಡು ಓಡಿದಾಗ ಅವರನ್ನು ಹಿಡಿದು ತಪಾಸಣೆ ನಡೆಸಿದ ಪೊಲೀಸರು, ಅವರಿಂದ 1.625 ಕೆಜಿ ಗಾಂಜಾ ಹಾಗೂ 3 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೋಟು ಅಮಾನ್ಯೀಕರಣ: ಜ.2ಕ್ಕೆ ಸುಪ್ರೀಂಕೋರ್ಟ್ ತೀರ್ಪು ಪ್ರಕಟ

ನವದೆಹಲಿ, ಡಿ.23– 2016ರಲ್ಲಿ 1 ಸಾವಿರ ಹಾಗೂ 500 ರೂಪಾಯಿ ಮುಖಬೆಲೆಯ ನೋಟುಗಳನ್ನು ಅಮಾನ್ಯೀಕರಣ ಮಾಡಿದ್ದ ಕೇಂದ್ರ ಸರ್ಕಾರ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾದ ಹಲವು ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್ ನ ಸಾಂವಿಧಾನಿಕ ಪೀಠ, ಜ.2 ರಂದು ತೀರ್ಪು ಪ್ರಕಟಿಸಲಿದೆ. ಸಂವಿಧಾನ ಪೀಠದ ನೇತೃತ್ವ ವಹಿಸಿರುವ ನ್ಯಾಯಮೂರ್ತಿ ಎಸ್.ಎ.ನಜೀರ್ ಅವರು ಜ.4 ರಂದು ನಿವೃತ್ತರಾಗಲಿದ್ದಾರೆ. ಹೀಗಾಗಿ ನಿಗದಿತ ದಿನದಂತೆ ಸುಪ್ರೀಂಕೋರ್ಟ್ ತೀರ್ಪು ಪ್ರಕಟಿಸುವ ಸಾಧ್ಯತೆಯಿದೆ. ಡಿಸೆಂಬರ್ 7 ರಂದು ಸುಪ್ರೀಂ ಕೋರ್ಟ್, 2016 ರ ನೋಟ್ ಬ್ಯಾನ್ ನಿರ್ಧಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಕೇಂದ್ರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ಗೆ ನಿರ್ದೇಶನ ನೀಡಿತ್ತು ಮತ್ತು ತೀರ್ಪನ್ನು ಕಾಯ್ದಿರಿಸಿತ್ತು.

ಐದನೇ ಪುಟದಿಂದ

ಜಿಲ್ಲಾಡಳಿತದೊಂದಿಗೆ ಸಹಕರಿಸಿ

ಬಗ್ಗೆ ಚರ್ಚೆ ನಡೆಸಿ ಹಲವು ಸೂಚನೆಗಳನ್ನು ನೀಡಲಾಗಿದೆ. ಮುಖ್ಯವಾಗಿ ಪರೀಕ್ಷೆ, ಸಂಪರ್ಕಿತರ ಪತ್ತೆ ಹಾಗೂ ಚಿಕಿತ್ಸೆ(ಟೆಸ್ಟಿಂಗ್, ಟ್ರೇಸಿಂಗ್, ಟ್ರೀಟ್‌ಮೆಂಟ್)ಗೆ ಸಂಬಂಧಿಸಿದಂತೆ ನಿರ್ದೇಶನ ನೀಡಲಾಗಿದೆ. ಜೊತೆಗೆ ಮುಂಜಾಗ್ರತೆಯಿಂದ ಬಿ.ಎಫ್–7 ಪ್ರಕರಣದ ಬಗ್ಗೆಯೂ ನಿಗಾ ವಹಿಸುವಂತೆ ತಿಳಿಸಲಾಗಿದೆ ಎಂದರು.

ಮಾಸ್ಕ್ ಧರಿಸಲು ಸಲಹೆ: ಸದ್ಯಕ್ಕೆ ಮೈಸೂರು ಜಿಲ್ಲೆಯಲ್ಲಿ ಆತಂಕದ ಪರಿಸ್ಥಿತಿ ಇಲ್ಲ. ಆದರೆ ಹಾಗಾಗದಂತೆ ಪ್ರತಿಯೊಬ್ಬರೂ ಸ್ವಯಂ ಪ್ರೇರಿತವಾಗಿ ಸರ್ಕಾರದ ಸಲಹೆಗಳನ್ನು ಪಾಲಿಸುವುದು ಅವಶ್ಯವಾಗಿದೆ. ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ ಹಾಗೂ ಅಲ್ಲಿಗೆ ಬರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂದು ಸರ್ಕಾರದ ಸೂಚನೆಯಲ್ಲಿದೆ. ಹಾಗೆಯೇ ಮಾಲ್, ಚಿತ್ರಮಂದಿರ, ಬಸ್, ರೈಲು, ಇನ್ನಿತರ ಒಳಾಂಗಣದಲ್ಲಿರುವಾಗ ಮಾಸ್ಕ್ ಧರಿಸಲು ಪ್ರೋತ್ಸಾಹಿಸುವಂತೆ ಸೂಚಿಸಲಾಗಿದೆ. ಮೈಸೂರಿಗೆ ವಿವಿಧ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಪ್ರವಾಸಿಗರು ಬರುವುದರಿಂದ ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ, ನಂಜುಂಡೇಶ್ವರ ದೇವಸ್ಥಾನ ಇನ್ನಿತರ ಪ್ರವಾಸಿ ತಾಣಗಳಲ್ಲಿ ನಗರಪಾಲಿಕೆ ಹಾಗೂ ಆಯಾ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳು ತಂಡವನ್ನು ನಿಯೋಜಿಸಿ ಪ್ರವಾಸಿಗರಿಗೆ ಮಾಸ್ಕ್ ಧರಿಸುವಂತೆ ಜಾಗೃತಿ ಮೂಡಿಸಲು ತಿಳಿಸಲಾಗಿದೆ. ಸದ್ಯಕ್ಕೆ ಮಾಸ್ಕ್ ಧರಿಸುವಂತೆ ಸಲಹೆ ನೀಡಲಾಗುವುದೇ ಹೊರತು ದಂಡ ವಿಧಿಸುವಂತಹ ಸ್ಥಿತಿ ಇಲ್ಲ ಎಂದು ತಿಳಿಸಿದರು.

ವ್ಯಾಕ್ಸಿನೇಷನ್‌ಗೆ ಆದ್ಯತೆ: ಜಿಲ್ಲೆಯಲ್ಲಿ 12 ವರ್ಷಕ್ಕಿಂತ ಮೇಲ್ಪಟ್ಟ 26,78,184 ಮಂದಿ ಕೋವಿಡ್ ಮೊದಲ ಲಸಿಕೆ ಹಾಗೂ ಹೊರಗಿನವರೂ ಸೇರಿ 27.72 ಲಕ್ಷ ಮಂದಿ ಎರಡನೇ ಲಸಿಕೆ ಪಡೆದಿದ್ದಾರೆ. ಇವರಲ್ಲಿ ಪ್ರಿಕಾಷನರಿ ಡೋಸ್‌ಗೆ ಅರ್ಹರಾದ 24,00,542 ಜನರಲ್ಲಿ 6.77 ಲಕ್ಷ ಮಂದಿ ಮಾತ್ರ ಲಸಿಕೆ ಪಡೆದಿದ್ದಾರೆ. ಹಾಗಾಗಿ ವೈದ್ಯಕೀಯ ಕ್ಷೇತ್ರ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಸೇರಿದಂತೆ ಮುಂಚೂಣಿ ಕಾರ್ಯಕರ್ತರಿಗೆ ಆದ್ಯತೆ ಮೇರೆಗೆ ವ್ಯಾಕ್ಸಿನ್ ನೀಡುವಂತೆ ತಿಳಿಸಲಾಗಿದೆ. ಸದ್ಯ ನಿತ್ಯ 300–600 ವ್ಯಾಕ್ಸಿನೇಷನ್ ಆಗುತ್ತಿದ್ದು, ಇನ್ನೂ 59 ಸಾವಿರ ವ್ಯಾಕ್ಸಿನ್ ಇದೆ. ನಮ್ಮಲ್ಲಿ ಕೋವ್ಯಾಕ್ಸಿನ್ ಹೆಚ್ಚಿನ ಪ್ರಮಾಣದಲ್ಲಿದ್ದು, ಕೋವಿಶೀಲ್ಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಅಗತ್ಯ ಸಿದ್ಧತೆ: ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆ ಹಾಗೂ ಕೆ.ಆರ್.ಆಸ್ಪತ್ರೆಯಲ್ಲಿ ತಲಾ 50 ಐಸೋಲೇಷನ್ ಬೆಡ್‌ಗಳ ಘಟಕ ಹಾಗೂ ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ತಲಾ 5 ಐಸೋಲೇಷನ್ ಬೆಡ್‌ಗಳನ್ನು ಕಾಯ್ದಿರಿಸಬೇಕು. ಹೆಚ್.ಡಿ.ಕೋಟೆ ಆಸ್ಪತ್ರೆಯಲ್ಲಿ 4 ಹಾಗೂ ಉಳಿದ ತಾಲೂಕು ಆಸ್ಪತ್ರೆಗಳಲ್ಲಿ ತಲಾ 5 ವೆಂಟಿಲೇಟರ್‌ಗಳು, ಆಕ್ಸಿಜನ್ ಉತ್ಪಾದನಾ ಘಟಕಗಳಿವೆ. ಈ ಬಗ್ಗೆ ಮತ್ತೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವಿಮಾನ ನಿಲ್ದಾಣದಲ್ಲಿ ಪ್ರಯಾಣ ಇತಿಹಾಸದ ಬಗ್ಗೆ ಅವಲೋಕಿಸಿ ಟೆಸ್ಟಿಂಗ್ ನಡೆಸಲು ಜಿಲ್ಲಾ ಆರೋಗ್ಯ ಇಲಾಖೆ ವತಿಯಿಂದ ಲ್ಯಾಬ್ ಟೆಕ್ನಿಷಿಯನ್ ನಿಯೋಜಿಸಲಾಗುವುದು ಎಂದರು.

ಜಾಗೃತರಾಗಿರಿ: ಜಿಲ್ಲೆಯಲ್ಲಿರುವ ನಾಲ್ವರು ಸೋಂಕಿತರೂ ಗುಣಮುಖರಾಗುತ್ತಿದ್ದಾರೆ. ಇವರಲ್ಲಿ ಮೂವರು 50 ವರ್ಷದ ಒಳಗಿನವರು. ಸದ್ಯಕ್ಕೆ ಆತಂಕಪಡುವ ಪರಿಸ್ಥಿತಿ ಇಲ್ಲ. ಆದರೆ ಸ್ವಯಂ ಪ್ರೇರಿತರಾಗಿ ಮಾಸ್ಕ್ ಧರಿಸುವುದು, ಲಸಿಕೆ ಹಾಕಿಸಿಕೊಳ್ಳುವುದು ಸೇರಿದಂತೆ ಸರ್ಕಾರದ ಸಲಹೆಗಳನ್ನು ಪರಿಪಾಲಿಸಬೇಕು. ಅದರಲ್ಲೂ ಇತರೆ ಆರೋಗ್ಯ ಸಮಸ್ಯೆ ಇದ್ದವರು, ಬೂಸ್ಟರ್ ಡೋಸ್ ಪಡೆಯದವರು ಹೊರ ಹೋಗುವಾಗ ಮಾಸ್ಕ್ ಧರಿಸಬೇಕು. ಪರಿಸ್ಥಿತಿ ಕೈಮೀರದಂತೆ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಇಂದು ಸಭೆ ನಡೆಸಿ, ಕ್ರಮ ವಹಿಸಲಾಗಿದೆ. ಇದಕ್ಕೆ ಜನರೂ ಸಹಕರಿಸಬೇಕೆಂದು ಹೇಳಿದರು.

ಜಿಲ್ಲಾ ಪಂಚಾಯ್ತಿ ಸಿಇಓ ಬಿ.ಆರ್.ಪೂರ್ಣಿಮಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್, ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಡೀನ್ ಡಾ.ದಾಕ್ಷಾಯಣಿ ಸೇರಿದಂತೆ ಆರೋಗ್ಯ ಇಲಾಖೆ ಹಲವು ಅಧಿಕಾರಿಗಳು ಹಾಜರಿದ್ದರು.

ನಿತ್ಯ 400 ಟೆಸ್ಟಿಂಗ್ ಟಾರ್ಗೆಟ್

ಸದ್ಯ ಜಿಲ್ಲೆಯಲ್ಲಿ ನಿತ್ಯ 100–150 ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದ್ದು, ಇನ್ನು 400 ಟೆಸ್ಟಿಂಗ್ ಮಾಡಲು ಸರ್ಕಾರ ಗುರಿ ನೀಡಿದೆ. ಅದರಂತೆ ನಾಳೆಯಿಂದಲೇ ನಿತ್ಯ 400 ಟೆಸ್ಟಿಂಗ್ ನಡೆಸಲು ಪ್ರಯತ್ನಿಸಲಾಗುವುದು. ಮುಖ್ಯವಾಗಿ ಐಎಲ್‌ಎ ಸೂಚನೆ ಇದ್ದವರು, ಬಹು ಆರೋಗ್ಯ ಸಮಸ್ಯೆವುಳ್ಳವರು, ವಯಸ್ಸಾದವರಿಗೆ ಹೆಚ್ಚು ಪರೀಕ್ಷೆ ನಡೆಸುವುದು ಹಾಗೂ ಸಾರಿ ಪ್ರಕರಣ ಕಂಡು ಬಂದರೆ ಕಡ್ಡಾಯವಾಗಿ ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಕೋವಿಡ್ ಪರೀಕ್ಷೆ ಮಾಡಿಸುವುದು. ಪಾಸಿಟಿವ್ ಬಂದರೆ ಅವರ ಸಂಪರ್ಕಿತರನ್ನು ಪತ್ತೆ ಮಾಡಿ ಅವರಲ್ಲಿ ಆರೋಗ್ಯ ಸಮಸ್ಯೆ ಇದ್ದವರನ್ನು ಪರೀಕ್ಷೆಗೆ ಒಳಪಡಿಸುವಂತೆ ತಿಳಿಸಲಾಗಿದೆ.–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ, ಮೈಸೂರು

ಬಲಿ ಪಡೆದ ಚಿರತೆ ಸೆರೆ

ತಕ್ಷಣ ಕಾರ್ಯಪ್ರವೃತ್ತರಾಗಿದ್ದರು. ಬೋನುಗಳನ್ನಿಟ್ಟು, ಬೆಟ್ಟದ ಭಾಗದಲ್ಲಿ 36ಕ್ಕೂ ಹೆಚ್ಚಿನ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದರು. ಆದರೆ ಚಿರತೆ ಅರಣ್ಯ ಇಲಾಖೆಯವರ ಕಣ್ಣಿಗೆ ಬೀಳದೆ ಡಿ.1ರಂದು ಮತ್ತೆ ತಾಲೂಕಿನ ಎಸ್.ಕೆಬ್ಬೆಹುಂಡಿ ಗ್ರಾಮದ ವಿದ್ಯಾರ್ಥಿನಿ ಮೇಘನಾಳನ್ನು ಬಲಿ ಪಡೆದಿತ್ತು. ಮೇಘನಾ ತಮ್ಮ ಮನೆಯ ಹಿತ್ತಲಿನಲ್ಲಿ ಪಾತ್ರೆ ತೊಳೆಯುವ ಸಂದರ್ಭ ದಾಳಿ ನಡೆಸಿತ್ತು. ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಮೇಘನಾ ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಳು. ಚಿರತೆ ಸೆರೆ ಹಿಡಿಯುವಂತೆ ಒತ್ತಾಯಿಸಿ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಶಾಸಕರ ನೇತೃತ್ವದಲ್ಲಿ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಲಾಗಿತ್ತು. ಅಲ್ಲದೇ ಎಂ.ಎಲ್.ಹುಂಡಿ ಮಠದ ಶ್ರೀ ಗೌರಿಶಂಕರ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ದಲಿತ ಸಂಘಟನೆ, ರೈತ ಸಂಘಟನೆ ಹಾಗೂ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು.

ಬಳಿಕ ಅಲರ್ಟ್ ಆದ ಅರಣ್ಯ ಇಲಾಖೆ ವಿಶೇಷ ಪಡೆಯೊಂದಿಗೆ, ಡ್ರೋಣ್ ಕ್ಯಾಮೆರಾ ಬಳಸಿ ವೈಜ್ಞಾನಿಕ ತಂತ್ರಜ್ಞಾನ ಬಳಸಿ ಕಾರ್ಯಾಚರಣೆ ನಡೆಸಿದ್ದರೂ, ಸೆರೆ ಸಿಕ್ಕದ ನರಹಂತಕ ಚಿರತೆ, ಆನಂತರವೂ ಇಬ್ಬರ ಮೇಲೆ ದಾಳಿ ನಡೆಸಿತ್ತು. ಆದರೆ ಕಳೆದ 20 ದಿನಗಳಿಂದ ಬೆಟ್ಟದಲ್ಲಿ ಅಳವಡಿಸಿದ್ದ ಥರ್ಮಲ್ ಡ್ರೋಣ್ ಕ್ಯಾಮರಾದಲ್ಲಿ ಚಿರತೆ ಓಡಾಟ ಗಮನಿಸಿದ್ದ ಇಲಾಖೆಯ ಅಧಿಕಾರಿಗಳು ವಿಶೇಷ ಯೋಜನೆಯೊಂದನ್ನು ರೂಪಿಸಿ, ಚಿರತೆ ಬಲೆಗೆ ಬೀಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಟ್ಟಿಗೆ ಮಾದರಿಯ ಬೋನು ಅಳವಡಿಕೆ!: ಚಿರತೆ ಓಡಾಡುವ ಸ್ಥಳದಲ್ಲಿ ಅನೇಕ ಬೋನುಗಳನ್ನು ಇಟ್ಟರೂ ಸೆರೆ ಸಿಕ್ಕದ ಚಿರತೆಯ ಜಾಣ ನಡೆಯಿಂದ ಹತಾಶರಾಗಿದ್ದ ಅರಣ್ಯ ಸಿಬ್ಬಂದಿ, ಕೊನೆಗೆ ಮಲ್ಲಪ್ಪನ ಬೆಟ್ಟದಲ್ಲಿ ಚಿರತೆ ಸಂಚರಿಸುವ ಭಾಗದಲ್ಲಿ ಕೊಟ್ಟಿಗೆ ಮಾದರಿಯ ಬೋನನ್ನು ಅಳವಡಿಸಿದ್ದರು. ಬೋನಿನಲ್ಲಿ ತಿಪ್ಪೆಯ ಮಾದರಿ, ಮೇಕೆ, ಎಮ್ಮೆಯನ್ನು ಕಟ್ಟಿ, ಹೊಸ ರಣತಂತ್ರ ರೂಪಿಸಿದ್ದರು. ಕೊನೆಗೂ ಇಂದು ಮುಂಜಾನೆ 4 ಗಂಟೆಗೆ ವಿಶೇಷ ಬೋನಿಗೆ ಚಿರತೆ ಬೀಳುವ ಮೂಲಕ ಅರಣ್ಯ ಇಲಾಖೆಯವರ ಕಾರ್ಯಾಚರಣೆ ಯಶಸ್ವಿಯಾಗಿದೆ.


ಶಾಸಕ ಅಶ್ವಿನ್ ಕುಮಾರ್ ಭೇಟಿ: ಚಿರತೆ ಸೆರೆ ಹಿಡಿಯುವಂತೆ ನಿನ್ನೆಯಷ್ಟೆ ಬೆಳಗಾವಿ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದ ಶಾಸಕ ಎಂ.ಅಶ್ವಿನ್ ಕುಮಾರ್ ಚಿರತೆ ಸೆರೆಸಿಕ್ಕ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ನರ ಹಂತಕ ಚಿರತೆ ಸೆರೆ ಸಿಕ್ಕ ಸುದ್ದಿಯಿಂದ ಸಂತಸಗೊಂಡ ಅವರು ಚಿರತೆ ಸೆರೆ ಹಿಡಿಯಲು ಬಳಸಿದ ಕಾರ್ಯತಂತ್ರದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಬನ್ನೇರು ಘಟ್ಟಕ್ಕೆ ರವಾನೆ: ಕಳೆದ ರಾತ್ರಿ ಸೆರೆ ಸಿಕ್ಕ ಚಿರತೆಯನ್ನು ಬನ್ನೇರುಘಟ್ಟ ವನ್ಯಧಾಮಕ್ಕೆ ಬಿಗಿ ಭದ್ರತೆಯೊಂದಿಗೆ ಸಾಗಿಸಲಾಯಿತು. ಚಿರತೆ ಸೆರೆಹಿಡಿಯಲು ಕಳೆದ ಎರಡು ತಿಂಗಳಿಂದಲೂ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿಗೆ ಗ್ರಾಮದ ಮುಖಂಡ ಅಡುಗೆ ಮಲ್ಲಿಕಾರ್ಜುನ ಸಹಕರಿಸಿದ್ದರು.

ಗ್ರಾಮಸ್ಥರು ನಿರಾತಂಕ: ಚಿರತೆ ಬೋನಿನಲ್ಲಿ ಸೆರೆಯಾಗಿರುವ ವಿಷಯ ಕಾಡ್ಗಿಚ್ಚಿನಂತೆ ಹಬ್ಬುತ್ತಿದ್ದಂತೆ ಗ್ರಾಮಸ್ಥರು ತಂಡೋಪತಂಡವಾಗಿ ಬೆಟ್ಟದ ಕಡೆ ಧಾವಿಸಿ ಬಂದು ನರಹಂತಕ ಚಿರತೆ ನೋಡಲು ಮುಂದಾದರಾದರೂ, ಅರಣ್ಯ ಇಲಾಖೆ ಸಿಬ್ಬಂದಿ ಅವಕಾಶ ನೀಡಲಿಲ್ಲ. ಸೆರೆ ಸಿಕ್ಕಿರುವ ಚಿರತೆ ಜನರ ಕಂಡರೆ ರೊಚ್ಚಿಗೆದ್ದು, ಬೋನಿಗೆ ಅಪ್ಪಳಿಸಿ ಗಾಯಗೊಳ್ಳಬಹುದಾದ ಸಾಧ್ಯತೆ ಇದ್ದುದ್ದರಿಂದ ಯಾರಿಗೂ ಅವಕಾಶ ನೀಡಲಿಲ್ಲ.

ಕಾರ್ಯಾಚರಣೆ ವೇಳೆ ಅರಣ್ಯ ಇಲಾಖೆಯ ಸಿಎಫ್ ಡಾ. ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಕೆ.ಕಮಲಾ ಕರಿಕಾಳನ್, ಡಾ. ವಿ.ಕರಿಕಾಳನ್, ಎಸಿಎಫ್ ಲಕ್ಷ್ಮಿ ಕಾಂತ್, ಆರ್‌ಎಫ್‌ಓ ನದೀಮ್, ಸಾಮಾಜಿಕ ವಲಯ ಅರಣ್ಯಾಧಿಕಾರಿ ರಾಜೇಶ್, ಅರಣ್ಯಾಧಿಕಾರಿಗಳಾದ ಮಂಜುನಾಥ್, ಉಮೇಶ್, ಮಂಜುನಾಥ್, ಸಿಪಿಐ ಲೋಲಾಕ್ಷಿ ಇದ್ದರು.

> “ಬಲೆಗೆ ಬಿದ್ದಿರುವ ಚಿರತೆ ಅಕ್ಟೋಬರ್ 31 ರಂದು ಎಂ.ಎಲ್.ಹುಂಡಿ ಗ್ರಾಮದ ವಿದ್ಯಾರ್ಥಿ ಮಂಜುನಾಥ್ ಹಾಗೂ ಎಸ್.ಕೆಬ್ಬೆಹುಂಡಿಯ ಮೇಘನಾರನ್ನು ಬಲಿ ಪಡೆದ ನರಹಂತಕ ಚಿರತೆಯೇ ಇದು. ಒಂದು ತಿಂಗಳಿಂದಲೂ ಇಲಾಖೆ ಅಳವಡಿಸಿದ್ದ ಕ್ಯಾಮೆರಾದಲ್ಲಿ ಈ ಚಿರತೆಯ ಓಡಾಟ ಸೆರೆಯಾಗಿತ್ತು. ಇದನ್ನು ಹೊರತುಪಡಿಸಿ ಬೇರೆ ಚಿರತೆ ಕಂಡುಬಂದಿಲ್ಲ. ಹಾಗಾಗಿ ಇದೇ ಇಬ್ಬರು ವಿದ್ಯಾರ್ಥಿಗಳನ್ನು ಬಲಿ ಪಡೆದ ಚಿರತೆ. – ಕಮಲಾ ಕರಿಕಾಳನ್, ಡಿಸಿಎಫ್



ಅಂದದ ಮೈಸೂರು ಅರಮನೆ ಅಂಗಳದಲ್ಲಿ ಇಂದಿನಿಂದ ಕಣ್ಮನ ಸೆಳೆಯಲಿದೆ ಫಲಪುಷ್ಪ ಪ್ರದರ್ಶನ

- ಹೊಸ ವರ್ಷದ ಅಂಗವಾಗಿ ಡಿ.24 ರಿಂದ ಜ.2ರವರೆಗೆ ಪುಷ್ಪ ವೈಭವ
- 4 ಲಕ್ಷಕ್ಕೂ ಅಧಿಕ ಹೂವುಗಳಿಂದ ಸಿಂಗಾರಗೊಂಡಿದೆ ಅರಮನೆ ಆವರಣ
- ಭಾರತೀಯ ಸೇನೆಯ ಹೆಮ್ಮೆಯ ಸುಪುತ್ರರ ಕಿರುಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ

ಮೈಸೂರು,ಡಿ.23(ಎಂಟಿವೈ)– ಹೊಸ ವರ್ಷಾಚರಣೆ ಸಂಭ್ರಮಕ್ಕೆ ಮೈಸೂರು ಅರಮನೆ ಆವರಣ ಸಿಂಗಾರಗೊಂಡಿದೆ. ಪ್ರವಾಸಿಗರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣದೊಂದಿಗೆ ಕಣ್ಮನ ಸೆಳೆಯುವ ಫಲಪುಷ್ಪ ಪ್ರದರ್ಶನದ ನವೋಲ್ಲಾಸದ ಸೊಬಗು ಉಣಬಡಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ನಾಳೆ(ಡಿ.24)ಯಿಂದ 10 ದಿನಗಳ ಕಾಲ ಸಸ್ಯಕಾಶಿಯ ವೈಭೋಗ ಮೈದಳೆಯಲಿದೆ.

ಕೊರೊನಾ ಹಿನ್ನಲೆಯಲ್ಲಿ ಎರಡು ವರ್ಷದ ನಂತರ ಮೈಸೂರು ಸೇರಿದಂತೆ ವಿವಿಧೆಡೆ ಹೊಸ ವರ್ಷವನ್ನು ಸಂಭ್ರಮದಿಂದ ಆಚರಿಸಲು ಜನತೆ ಉತ್ಸುಕರಾಗಿದ್ದು, ಅದಕ್ಕಾಗಿ ಸಾಂಸ್ಕೃತಿಕ ನಗರಿ ಮೈಸೂರಲ್ಲೂ ಸಂಭ್ರಮಾಚರಣೆಗೆ ವೇದಿಕೆ ಸಿದ್ಧಗೊಂಡಿದೆ. ಪ್ರವಾಸಿಗರನ್ನು ಮೈಸೂರಿನತ್ತ ಸೆಳೆಯುವುದರೊಂದಿಗೆ ಹೊಸ ವರ್ಷ ಸಂಭ್ರಮವನ್ನು ಇಮ್ಮಡಿಗೊಳಿಸಲು ಅರಮನೆ ಮಂಡಳಿ 10 ದಿನಗಳ ಫಲಪುಷ್ಪ ಪ್ರದರ್ಶನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುವುದರೊಂದಿಗೆ ಭಾರತೀಯ ಸೇನೆಯಲ್ಲಿ ಸಾಧನೆಗೈಯ್ದ ಮಹನೀಯರ ಕಿರುಚಿತ್ರ, ಸಾಂಪ್ರದಾಯಿಕ ಗೊಂಬೆ ಪ್ರದರ್ಶನವನ್ನೂ ಆಯೋಜಿಸಿದೆ. ನಾಳೆ (ಡಿ. 24) ಸಂಜೆ 5ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎಸ್.ಎ. ರಾಮದಾಸ್ ವಹಿಸಿದರೆ, ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದ ಪ್ರತಾಪ ಸಿಂಹ ಹಾಗೂ ಜನಪ್ರತಿನಿಧಿಗಳು, ನಿಗಮ ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ.



ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಸುಮಾರು 25 ಸಾವಿರ ವಿಭಿನ್ನ ರೀತಿಯ ಅಲಂಕಾರಿಕ ಹೂವಿನ ಕುಂಡಗಳು ವಿವಿಧೆಡೆ ಜೋಡಣೆ ಮಾಡಲಾಗಿದೆ. ಮಾರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಕೋಲಿಯಸ್, ಸಿಲೋಷಿಯ ಇನ್ನಿತರ 32 ಜಾತಿಯ ಹೂವುಗಳು ಇರಲಿವೆ. ಗುಲಾಬಿ, ಕ್ರೈಸಾಂಥಿಮಂ, ಪಿಂಗ್ ಪಾಂಗ್, ಊಟಿ ಕಟ್ ಫ್ಲವರ್ ಇನ್ನಿತರ ಸೇರಿ ಅಂದಾಜು 4 ಲಕ್ಷ ಹೂಗಳಿಂದ ವೈವಿಧ್ಯಮಯ ಅಲಂಕಾರ ಮಾಡಲಾಗುತ್ತಿದೆ.

ಆಕರ್ಷಕ ಆಕೃತಿಗಳು: ಈ ಸಾಲಿನ ಕಾಶಿವಿಶ್ವನಾಥ ದೇವಸ್ಥಾನದ ಮಾದರಿ ಜನರಿಗೆ ದರ್ಶನ ನೀಡಲು ಸಿದ್ಧವಾಗುತ್ತಿದೆ. 55 ಅಡಿ ಉದ್ದ, 12 ಅಗಲ, 28 ಅಡಿ ಎತ್ತರ ಅಳತೆಯಲ್ಲಿ ರೂಪಿತವಾಗುತ್ತಿದೆ. ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ, ನಮೀಬಿಯಾದಿಂದ ತರಲಾಗಿರುವ ಚೀತಾಗಳು, ಯೋಗ ಫಾರ್ ಲೈಫ್ ಹೂವಿನ ಮಾದರಿಗಳು ಆಕರ್ಷಿಸಲಿವೆ.

ರಾಜವಂಶಸ್ಥ ಜಯಚಾಮರಾಜ ಒಡೆಯರ್ ಅವರು ಸರ್ ಎಂ.ವಿಶ್ವೇಶ್ವರಯ್ಯ ಜತೆಗೆ ಕುಳಿತು ಸಂಭಾಷಣೆ ನಡೆಸುತ್ತಿರುವ ಮಾದರಿ ಚಿತ್ರ, ಶಂಕರಾಚಾರ್ಯರ ಚಿತ್ರವೂ ಪ್ರದರ್ಶನಗೊಳ್ಳಲಿದೆ ರಂಗನತಿಟ್ಟು ಪಕ್ಷಿಧಾಮದ ಮಾದರಿ ಚಿತ್ರದ ಮೂಲಕ ಮಕ್ಕಳನ್ನು ಸೆಳೆಯಲಾಗುತ್ತಿದೆ. ಖ್ಯಾತ ಹಾಕಿಪಟು ಧ್ಯಾನಚಂದ್, ಖ್ಯಾತ ಚಿತ್ರಕಲಾವಿದ ರಾಜ ರವಿವರ್ಮ ಮಾದರಿ ಸಹ ಅರಮನೆ ಅಂಗಳಕ್ಕೆ ಆಗಮಿಸಲಿವೆ. ಪ್ರಸಕ್ತ ಸಾಲಿನ ದಸರಾದಲ್ಲಿ ಭಾಗವಹಿಸಿದ್ದ ಗಜಪಡೆ ಲಕ್ಷ್ಮೀ ಮತ್ತು ಮರಿ ದತ್ತಾತ್ರೇಯನ ಮಾದರಿ, ಅಮರ್ ಜವಾನ್ ಯುದ್ಧ ಸ್ಮಾರಕದ ಮಾದರಿ, ಪದ್ಮಶ್ರೀ ಪುರಸ್ಕೃತ ಭಗೀರಥಿ ಅಮ್ಮ, ಮಹಲಿಂಗಾನಾಯ್ಕ, ಕರಾವಳಿಯಲ್ಲಿ ನಡೆಯುವ ಕಂಬಳದ ಆಕೃತಿ, ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಮಾದರಿ ಅರಮನೆ ಆವರಣದಲ್ಲಿ ತಲೆ ಎತ್ತಲಿವೆ. ಹೂವಿನಿಂದ ಅಲಂಕೃತವಾದ ಹೃದಯ ಸಂಕೇತ ಸೆಲ್ಫಿ ಮಾಡೆಲ್ ನಿರ್ಮಿಸಲಾಗುತ್ತಿದೆ.

ವಿವಿಧ ಆಕೃತಿಗಳ ತಾಜಾತನ ಕಾಪಾಡಲು ಒಮ್ಮೆ ಹೂವು, ತರಕಾರಿಗಳನ್ನು ಬದಲಾಯಿಸಲಾಗುತ್ತದೆ. ಅರಮನೆ ವರಹಾ ಉದ್ಯಾನದಲ್ಲಿರುವ ವರ್ಟಿಕಲ್ ಗಾರ್ಡನ್ ಅಲಂಕರಿಸಲು ಗಿಡಗಳನ್ನು ಖರೀದಿಸಿ ಜೋಡಿಸಲು ತಯಾರಿ ಮಾಡಿಕೊಳ್ಳಲಾಗಿದೆ.

ದೀಪದ ಮೆರುಗು: ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸುವ ಸಮಯದಲ್ಲಿ ಅರಮನೆಯ ಸೊಬಗನ್ನು ಮತ್ತಷ್ಟು ಹೆಚ್ಚಿಸಲಾಗುತ್ತದೆ. ಅದಕ್ಕಾಗಿ ಅರಮನೆಯ ವಿದ್ಯುತ್ ದೀಪಾಲಂಕಾರವು 10 ದಿನಗಳ ಕಾಲ ನಿತ್ಯ ಸಂಜೆ 7ರಿಂದ ರಾತ್ರಿ 9ರವರೆಗೆ ಇರಲಿದೆ.

ಸಾಂಸ್ಕೃತಿಕ ವೈಭವ: ಸಾಂಸ್ಕೃತಿಕ ಸೊಬಗು ಸಹ ಅನಾವರಣಗೊಳ್ಳಲಿದೆ. ಅರಮನೆ ಆವರಣದಲ್ಲಿ ಡಿ.24ರಿಂದ ಮೂರು ದಿನಗಳ ಕಾಲ ಸಂಜೆ 7ರಿಂದ ರಾತ್ರಿ 9ರವರೆಗೆ ನೃತ್ಯ, ಸಂಗೀತ, ಜಾನಪದ, ಶಾಸ್ತ್ರೀಯ ಸಂಗೀತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜನರನ್ನು ರಂಜಿಸಲಿದೆ.

ಆಕಾಶದಲ್ಲಿ ಬಣ್ಣಗಳ ಚಿತ್ತಾರ: ಹೊಸ ವರ್ಷಾಚರಣೆ ಅಂಗವಾಗಿ ಡಿ.31ರಂದು ಪೊಲೀಸ್ ಇಲಾಖೆಯ ಕರ್ನಾಟಕ, ಆಂಗ್ಲ ಪೊಲೀಸ್ ಬ್ಯಾಂಡ್ ಸಂಗೀತ ಕಾರ್ಯಕ್ರಮವನ್ನು ಅಂದು ರಾತ್ರಿ 11ರಿಂದ 12ಗಂಟೆವರೆಗೆ ಏರ್ಪಡಿಸಲಾಗಿದೆ. ಬಳಿಕ ಬಣ್ಣಗಳ ಚಿತ್ತಾರಗಳಿಂದ ಕೂಡಿದ ಶಬ್ದರಹಿತ ಪಟಾಕಿ ಸಿಡಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಚರಿತ್ರೆ ಬಿಂಬಿಸುವ ಬೊಂಬೆಗಳು : ಬೊಂಬೆಗಳ ಪ್ರದರ್ಶನ ಸಹ ಸಾರ್ವಜನಿಕರ ಗಮನ ಸೆಳೆಯಲಿದೆ. ದಸರಾ ಮಹೋತ್ಸವ ಮತ್ತು ವಿಶೇಷ ಸಂದರ್ಭಗಳಲ್ಲಿ ಮನೆಗಳಲ್ಲಿ ಅತ್ಯುತ್ತಮವಾಗಿ ಬೊಂಬೆಗಳನ್ನು ಪ್ರದರ್ಶಿಸುವ ಆಯ್ದ ಐದು ಜನರನ್ನು ಇಲ್ಲಿಗೆ ಆಹ್ವಾನಿಸಲಾಗಿದೆ. ಅರಮನೆಯ ಆವರಣದ 5 ಬ್ಲಾಕ್‌ಗಳಲ್ಲಿ ಭವ್ಯ ಬೊಂಬೆ ಪ್ರದರ್ಶನ ಏರ್ಪಡಿಸಲಾಗುತ್ತದೆ. ವಿಷ್ಣು ಅವತಾರ, ಸತ್ಯಂ ಶಿವಂ ಸುಂದರಂ, ಗುರು ಪರಂಪರೆ, ತಿರುಪತಿ ವೈಭವ, ಶ್ರೀರಾಮಚರಿತೆ ಬಿಂಬಿಸುವ ಬೊಂಬೆಗಳು ಪ್ರದರ್ಶನಗೊಳ್ಳಲಿವೆ. ಛಾಯಾಚಿತ್ರ ಮತ್ತು ವಿಡಿಯೋ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ದಸರಾ ಅಂದು–ಇಂದು ಚಿತ್ರಣವನ್ನು ಕಟ್ಟಿಕೊಡಲಾಗುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಸಂದ ಹಿನ್ನೆಲೆಯಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಬರುವ ಪ್ರವಾಸಿಗರಿಗೆ ಭಾರತೀಯ ಸೇನೆಯಲ್ಲಿ ಮಹತ್ತರ ಸೇವೆ ಸಲ್ಲಿಸಿ ಶೌರ್ಯ ಪ್ರಶಸ್ತಿ ಸೇರಿದಂತೆ ಅತ್ಯುನ್ನತ ಪದವಿ ಅಲಂಕರಿಸಿರುವ ನಿವೃತ್ತ ಸೇನಾ ನಾಯಕರ ಸಾಧನೆ ಕುರಿತಂತೆ ಕಿರುಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನರಲ್ ತಿಮ್ಮಯ್ಯ, ಮಾರ್ಷಲ್ ಆಫ್ ದಿ ಇಂಡಿಯನ್ ಏರ್ ಫೋರ್ಸ್ ಅರ್ಜನ್ ಸಿಂಗ್, ಶೌರ್ಯ ಚಕ್ರ ಪ್ರಶಸ್ತಿ ಪಡೆದ ಸುಬೇದಾರ್ ಲೂಯಿಸ್ ಪೆರೇರಾ, ನಾಯಕ್ ಬಸವರಾಜ್, ಹವಲ್ದಾರ್ ಮಹೇಶ್ ಅವರ ಶೌರ್ಯ, ಸಾಧನೆ ಕುರಿತಂತೆ ಕಿರುಚಿತ್ರ ಭಿತ್ತರಿಸಲಾಗುತ್ತದೆ. 10 ದಿನಗಳ ಕಾಲ ಪ್ರದರ್ಶನಗೊಳ್ಳುವ ಕಿರುಚಿತ್ರ ವೀಕ್ಷಿಸಲು 50 ಆಸನ ವ್ಯವಸ್ಥೆ ಕೂಡ ಮಾಡಲಾಗಿದೆ ಎಂದು ಮಾಜಿ ಸೈನಿಕರು, ಬಿಡಿಎ ಕಾರ್ಯದರ್ಶಿ ಸಿ.ಎಲ್.ಆನಂದ್ ತಿಳಿಸಿದ್ದಾರೆ.

ಮೈಸೂರು ರೈಲ್ವೆ ವಿಭಾಗದಿಂದ ಹಲವು ರೈಲುಗಳಿಗೆ ಹೆಚ್ಚುವರಿ ಬೋಗಿಗಳ ಸೇರ್ಪಡೆ



ಮೈಸೂರು, ಡಿ.23(ಆರ್‌ಕೆಬಿ) ಮೈಸೂರು ನೈರುತ್ಯ ರೈಲ್ವೆ ವಿಭಾಗದ ವತಿಯಿಂದ ರೈಲುಗಳಿಗೆ ಖಾಯಂ ಆಧಾರದ ಮೇಲೆ ಹೆಚ್ಚುವರಿ ಬೋಗಿಗಳನ್ನು ಸೇರ್ಪಡೆಗೊಳಿಸಲು ನೈರುತ್ಯ ರೈಲ್ವೆ ವಲಯ ನಿರ್ಧರಿಸಿದೆ.

ಡಿ.25 ರಿಂದ ಎಸ್‌ಎಸ್‌ಎಸ್ ಹುಬ್ಬಳ್ಳಿ – ತಿರುಪತಿ (ರೈಲು ಸಂಖ್ಯೆ 07658) ದೈನಂದಿನ ವಿಶೇಷ ಪ್ಯಾಸೆಂಜರ್ ರೈಲಿಗೆ ಐದು ಸಾಮಾನ್ಯ ಎರಡನೇ ದರ್ಜೆಯ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ. ಡಿ.24 ರಿಂದ ತಿರುಪತಿ – ಎಸ್‌ಎಸ್‌ಎಸ್ ಹುಬ್ಬಳ್ಳಿ (ರೈಲು ಸಂಖ್ಯೆ 07657) ದೈನಂದಿನ ವಿಶೇಷ ಪ್ಯಾಸೆಂಜರ್ ರೈಲಿಗೆ ಐದು ಸಾಮಾನ್ಯ ಎರಡನೇ ದರ್ಜೆಯ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ.


ಡಿ.29 ರಿಂದ ಎಸ್‌ಎಸ್‌ಎಸ್ ಹುಬ್ಬಳ್ಳಿ – ಹೈದರಾಬಾದ್ ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 17319) ರೈಲಿಗೆ ಒಂದು ಸ್ಲೀಪರ್ ಕ್ಲಾಸ್ ಬೋಗಿ, ಡಿ.30 ರಿಂದ ಹೈದರಾಬಾದ್ – ಎಸ್‌ಎಸ್‌ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 17320) ರೈಲಿಗೆ ಒಂದು ಸ್ಲೀಪರ್ ಕ್ಲಾಸ್ ಬೋಗಿ ಹೆಚ್ಚಿಸಲಾಗುವುದು.

ಡಿ.31 ರಿಂದ ಎಸ್‌ಎಸ್‌ಎಸ್ ಹುಬ್ಬಳ್ಳಿ – ದಾದರ್ ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 17317) ರೈಲಿಗೆ ಒಂದು ಸ್ಲೀಪರ್ ಕ್ಲಾಸ್ ಬೋಗಿ, ಜ.1 ರಿಂದ ದಾದರ್ – ಎಸ್‌ಎಸ್‌ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 17318) ರೈಲಿಗೆ ಒಂದು ಸ್ಲೀಪರ್ ಕ್ಲಾಸ್ ಬೋಗಿ ಹೆಚ್ಚಿಸಲಾಗುವುದು.

ಡಿ.28 ರಿಂದ ಕೆಎಸ್‌ಆರ್ ಬೆಂಗಳೂರು – ಎಮ್‌ಜಿಆರ್ ಚೆನ್ನೈ ಸೆಂಟ್ರಲ್ ಶತಾಬ್ಧಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 12028) ರೈಲಿಗೆ ಒಂದು ಹವಾನಿಯಂತ್ರಿತ ಎಕ್ಸಿಕ್ಯುಟಿವ್ ಚೇರ್ ಕಾರ್ ಮತ್ತು ಒಂದು ಹವಾ ನಿಯಂತ್ರಿತ ಚೇರ್ ಕಾರ್ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ. ಡಿ.28 ರಿಂದ ಎಂಜಿಆರ್ ಚೆನ್ನೈ ಸೆಂಟ್ರಲ್–ಕೆಎಸ್‌ಆರ್ ಬೆಂಗಳೂರು ಶತಾಬ್ಧಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 12027) ರೈಲಿಗೆ ಒಂದು ಹವಾ ನಿಯಂತ್ರಿತ ಎಕ್ಸಿಕ್ಯುಟಿವ್ ಚೇರ್ ಕಾರ್ ಮತ್ತು ಒಂದು ಹವಾ ನಿಯಂತ್ರಿತ ಚೇರ್ ಕಾರ್ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ.

ಡಿ.25 ರಿಂದ ಯಶವಂತಪುರ – ಕೊಚುವೇಲಿ ಗರೀಬ್ ರಥ ಎಕ್ಸ್‌ಪ್ರೆಸ್ ರೈಲಿಗೆ ಎರಡು ಎಸಿ 3 ಟೈರ್ (ಗರೀಬ್ ರಥ) ಸ್ಲೀಪರ್ ಬೋಗಿಗಳು ಹಾಗೂ ಡಿ.26 ರಿಂದ ಕೊಚುವೇಲಿ – ಯಶವಂತಪುರ ಗರೀಬ್ ರಥ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 12258) ರೈಲಿಗೆ ಎರಡು ಎಸಿ 3 ಟೈರ್ ಸ್ಲೀಪರ್ (ಗರೀಬ್ ರಥ) ಬೋಗಿಗಳನ್ನು ಹೆಚ್ಚಿಸಲಾಗುತ್ತದೆ.

ಡಿ.28 ರಿಂದ ಕೆಎಸ್‌ಆರ್ ಬೆಂಗಳೂರು – ಕಣ್ಣೂರು ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16511) ರೈಲಿಗೆ ಒಂದು 2ನೇ ಹವಾ ನಿಯಂತ್ರಿತ ದರ್ಜೆ, ಒಂದು 3ನೇ ಹವಾ ನಿಯಂತ್ರಿತ ದರ್ಜೆ ಮತ್ತು ಒಂದು ಸ್ಲೀಪರ್ ದರ್ಜೆ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ ಡಿ.29 ರಿಂದ ಕಣ್ಣೂರು – ಕೆಎಸ್‌ಆರ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16512) ರೈಲಿಗೆ ಒಂದು 2ನೇ ಹವಾ ನಿಯಂತ್ರಿತ ದರ್ಜೆ, ಒಂದು 3ನೇ ಹವಾ ನಿಯಂತ್ರಿತ ದರ್ಜೆ ಮತ್ತು ಒಂದು ಸ್ಲೀಪರ್ ದರ್ಜೆ ಬೋಗಿಗಳನ್ನು ಹೆಚ್ಚಿಸಲಾಗುತ್ತದೆ ಎಂದು ರೈಲ್ವೆ ವಿಭಾಗೀಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.



ನೂತನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಮೈಸೂರು ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು ಅಭಿನಂದಿಸಿದರು. ಅಧ್ಯಕ್ಷ ಕೆ.ದೇವರಾಜ್, ರಾಜ್ಯ ಕಾರ್ಯಕಾರಿ ಸದಸ್ಯ ವಿ.ಮಂಜುನಾಥ್, ನಗರಪಾಲಿಕೆ ಸದಸ್ಯ ಕೆ.ಜಿ.ರಮೇಶ್, ಜೈರಾಮ್, ಕಿಶೋರ್, ರಘು ಪ್ರಾಧಿಕಾರದ ಸದಸ್ಯ ಕೆ.ಮಾದೇಶ್ ಇನ್ನಿತರರಿದ್ದರು.

ಕಳ್ಳನ ಬಂಧನ: 4 ದ್ವಿಚಕ್ರ ವಾಹನ ವಶ

ಮೈಸೂರು, ಡಿ.23(ಆರ್‌ಕೆ)– ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ವಿವಿ ಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.




ಮೈಸೂರಿನ ರಾಕೇಶ್ ಬಂಧಿತ ಆರೋಪಿಯಾಗಿದ್ದು, ಆತನಿಂದ 95,000 ರೂ. ಮೌಲ್ಯದ 4 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಆತನನ್ನು ಡಿ.17 ರಂದು ಯಾದವಗಿರಿಯ ರೈಲ್ವೆಟ್ರ್ಯಾಕ್ ಬಳಿ ವಾಹನ ಸಮೇತ ಬಂಧಿಸಿ ವಿಚಾರಣೆಗೊಳಪಡಿಸಿದಾಗ ವಿವಿ ಪುರಂ ಠಾಣೆ, ಹೆಬ್ಬಾಳು, ದೇವರಾಜ, ಮೇಟಗಳ್ಳಿ ಠಾಣೆಗಳಲ್ಲಿ ವಾಹನ ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ತಿಳಿಯಿತು.

ಎನ್.ಆರ್. ಉಪವಿಭಾಗದ ಎಸಿಪಿ ಎಂ. ಶಿವಶಂಕರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ವಿವಿ ಪುರಂ ಠಾಣೆ ಇನ್‌ಸ್ಪೆಕ್ಟರ್ ಮೋಹನ್‌ಕುಮಾರ್, ಎಎಸ್‌ಪಿ ನಾಗರಾಜ ನಾಯ್ಕ ಸಿಬ್ಬಂದಿಗಳಾದ ಪ್ರಸನ್ನ ರವಿಗೌಡ, ಪರಶುರಾಮ ರಾಥೋಡ್, ಮಹೇಶ್, ಈರಣ್ಣ, ಉಮೇಶ್, ಚೆಲುವರಾಜ್, ಭಾಷಾ ಸಾಬ್ ಹಾಗೂ ಇತರರು ಪಾಲ್ಗೊಂಡಿದ್ದರು.

ದಿ.ಅಬ್ದುಲ್ ನಜೀರ್‌ಸಾಬ್ ಜನ್ಮ ದಿನದ ಅಂಗವಾಗಿ

ನಾಳೆ ಕರ್ನಾಟಕ ಸಬಲೀಕರಣ ದಿನವಾಗಿ ಆಚರಣೆ

ಮೈಸೂರು, ಡಿ.23(ಆರ್‌ಕೆಬಿ)– ರಾಜ್ಯದ ಪಂಚಾಯತ್‌ರಾಜ್ ವ್ಯವಸ್ಥೆಯ ಪಿತಾಮಹ, ಗ್ರಾಮೀಣಾಭಿವೃದ್ಧಿಯ ಹರಿಕಾರ ದಿ.ಅಬ್ದುಲ್ ನಜೀರ್ ಸಾಬ್ ಅವರ ಜನ್ಮದಿನವಾದ ಡಿ.25ರಂದು ನಮ್ಮ ಒಕ್ಕೂಟದ ವತಿಯಿಂದ ಕರ್ನಾಟಕ ಪಂಚಾಯತ್ ಸಬಲೀಕರಣ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ಸದಸ್ಯರ ಮಹಾ ಒಕ್ಕೂಟದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಎನ್.ನಾಗರಾಜು ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಬ್ದುಲ್ ನಜೀರ್‌ಸಾಬ್ ಅವರ ಕರ್ಮ ಭೂಮಿಯಾದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಈ ಕಾರ್ಯಕ್ರಮವನ್ನು ಒಕ್ಕೂಟದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಘಟಕಗಳು ಜಂಟಿಯಾಗಿ ಆಯೋಜಿರುವುದಾಗಿ ತಿಳಿಸಿದರು.

ಡಿ.25ರಂದು ಬೆಳಗ್ಗೆ 10 ಗಂಟೆಗೆ ಅವರ ಸಮಾಧಿಗೆ ಪುಷ್ಪ ನಮನದ ನಂತರ ಗುಂಡ್ಲುಪೇಟೆ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ರಾಜ್ಯಾದ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಚಲಪತಿ, ರಾಜ್ಯ ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಮೈಸೂರು–ಚಾಮರಾಜನಗರ ಜಿಲ್ಲೆಯ ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಗುಂಡ್ಲುಪೇಟೆ ಶಾಸಕ ಎಸ್.ನಿರಂಜನಕುಮಾರ್ ಇನ್ನಿತರರು ಭಾಗವಹಿಸುವರು ಎಂದರು.


ಪಂಚಾಯತ್ ರಾಜ್ ವ್ಯವಸ್ಥೆಯ ಅಸ್ಮಿತೆಯಾಗಿರುವ ಅಬ್ದುಲ್ ನಜೀರ್‌ಸಾಬ್ ಅವರ ಜನ್ಮದಿನ ಕಾರ್ಯಕ್ರಮಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಚುನಾಯಿತ ಸದಸ್ಯರು ಭಾಗವಹಿಸುವಂತೆ ಮನವಿ ಮಾಡಿದರು.

ಅಬ್ದುಲ್ ನಜೀರ್‌ಸಾಬ್ ಅವರ ಕೊಡುಗೆಯನ್ನು ಸ್ಮರಿಸಿ ಸರ್ಕಾರ ಅವರ ಜನ್ಮದಿನವನ್ನು ಕರ್ನಾಟಕ ಪಂಚಾಯತ್ ಸಬಲೀಕರಣ ದಿನವನ್ನಾಗಿ ಸರ್ಕಾರದ ವತಿಯಿಂದ ಆಚರಿಸುವಂತೆ ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ, ರಂಗಸ್ವಾಮಿ, ನಟರಾಜು, ರಾಜ್ ಹುಣಸೂರು ಉಪಸ್ಥಿತರಿದ್ದರು.

‘ಅಂಬೇಡ್ಕರ್ ಹೇಳಿದ್ದೇನು– ಆದರೆ ನಾವು ಮಾಡಿದ್ದೇನು?’

ಮೈಸೂರಲ್ಲಿ ಇಂದು ವಿಚಾರ ಸಂಕಿರಣ

ಮೈಸೂರು, ಡಿ.23(ಆರ್‌ಕೆಬಿ)– ವಿಶ್ವಮಾನ್ಯ ಡಾ.ಬಿ.ಆರ್.ಅಂಬೇಡ್ಕರ್ ಸಮಾಜ ಪರಿವರ್ತನಾ ವೇದಿಕೆಯು ಮೈಸೂರು ವಿವಿ ಸಂಶೋಧಕರ ಸಂಘ, ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟದ ಸಹಯೋಗದಲ್ಲಿ ಡಿ.24ರಂದು ಬೆಳಗ್ಗೆ 10.30 ಗಂಟೆಗೆ ‘ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಮತ್ತು ದಲಿತೋದ್ಧಾರ ಕೇಂದ್ರಿತ– ‘ಅಂಬೇಡ್ಕರ್ ಅವರು ಹೇಳಿದ್ದೇನು– ಆದರೆ ನಾವು ಮಾಡಿದ್ದೇನು?’ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ವೇದಿಕೆ ಮುಖ್ಯಸ್ಥ ಎಂ.ನಂಜಯ್ಯ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿ ಬಿಎಂಶ್ರೀ ಸಭಾಂಗಣದಲ್ಲಿ ನಡೆಯುವ ವಿಚಾರ ಸಂಕಿರಣವನ್ನು ಮೈಸೂರು ವಿವಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮಿ ಎಸ್.ಕರಿಕಲ್ ಉದ್ಘಾಟಿಸುವರು. ಎಂ.ನಂಜಯ್ಯ ಅಧ್ಯಕ್ಷತೆ ವಹಿಸುವರು ಎಂದರು.

ಉರಿಲಿಂಗಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಚಿಂತಕ ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು, ಯುವ ಸಂಘಟಕ ಮಲ್ಲುಂಡಿ ಮಹದೇವಸ್ವಾಮಿ ವಿಷಯ ಕುರಿತು ಮಾತನಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಮುಖಂಡರಾದ ಎನ್.ಕ್ಷೇತ್ರಪಾಲ್, ಬಿ.ಬಸವರಾಜು, ಎಸ್.ವಿ.ಶಂಕರ್, ಕೆ.ರಾಮಚಂದ್ರಯ್ಯ, ನಟರಾಜು, ಚಿನ್ನಸ್ವಾಮಿ ಉಪಸ್ಥಿತರಿದ್ದರು.

ಮಾದಿಗರ ಒಳಮೀಸಲಾತಿ ಬೇಡಿಕೆಗೆ ನಿರ್ಲಕ್ಷ್ಯ ಧೋರಣೆ ಖಂಡಿಸಿ ಬೆಂಗಳೂರಲ್ಲಿ ನಡೆಯುತ್ತಿರುವ ಪ್ರತಿಭಟನೆ ಬೆಂಬಲಿಸಿ

ಮೂರು ದಿನ ಪ್ರಗತಿಪರ ಮಾದಿಗರ ಸಂಘಟನೆಗಳ ಒಕ್ಕೂಟದಿಂದ ಧರಣಿ

ಮೈಸೂರು, ಡಿ.23(ಆರ್‌ಕೆಬಿ)– ಮಾದಿಗರ ಒಳಮೀಸಲಾತಿಗಾಗಿ ಆಗ್ರಹಿಸಿ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಕನಿಷ್ಠ ಸೌಜನ್ಯಕ್ಕಾದರೂ ಅವರನ್ನು ಭೇಟಿ ಮಾಡಿ ಭರವಸೆ ನೀಡುವ ಬದಲು, ಹೋರಾಟಗಾರರ ಮೇಲೆ ಲಾಠಿ ಪ್ರಹಾರ ಮಾಡಿಸಿ, ಪೊಲೀಸರಲ್ಲಿ ದೂರು ದಾಖಲಿಸುವ ಕೆಲಸ ಮಾಡುತ್ತಿದೆ ಎಂದು ಬಹುಜನ ಸಮಾಜ ಪಾರ್ಟಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅರಕಲವಾಡಿ ನಾಗೇಂದ್ರ ಇಂದಿಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಿಗರ ಒಳಮೀಸಲಾತಿಗಾಗಿ ಮೂರು ದಶಕದಿಂದ ಮಾದಿಗ ಸಮುದಾಯದ ಒಳ ಜಾತಿಗಳಿಗೆ ಮೀಸಲಾತಿ ಸಿಕ್ಕಿಲ್ಲ. ಹಿಂದೆ ಚುನಾವಣೆ ವೇಳೆ ನಾವು ಗೆದ್ದರೆ ಒಳ ಮೀಸಲಾತಿ ನೀಡುತ್ತೇವೆಂದು ಆಶ್ವಾಸನೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ, ಬಳಿಕ ಇಡೀ ಮಾದಿಗ ಸಮಾಜವನ್ನು ವಂಚಿಸುತ್ತಿದೆ. ನಮ್ಮನ್ನು ಮೂರ್ಖರನ್ನಾಗಿಸುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಒಳ ಮೀಸಲಾತಿಗೆ ಯಾವುದೇ ತಕರಾರಿಲ್ಲ. ಸುಪ್ರಿಂಕೋರ್ಟ್ ಕೂಡ ಹೇಳಿದೆ. ಯಾವುದೇ ಅಡ್ಡಿ ಆತಂಕಗಳಿಲ್ಲದಿದ್ದರೂ ಬಿಜೆಪಿ ಸರ್ಕಾರ ಮಾದಿಗ ಸಮುದಾಯವನ್ನು ಸಂಪೂರ್ಣ ಕಡೆಗಣಿಸಿದೆ. ದಲಿತರಲ್ಲಿ ಬಹು ಸಂಖ್ಯಾತರಾದ ಮಾದಿಗ ಸಮುದಾಯವನ್ನು ಸುಳ್ಳು ಭರವಸೆ ಮೂಲಕ ವಂಚಿಸಿದೆ ಎಂದು ದೂರಿದರು.

ಒಳ ಮೀಸಲಾತಿ ಹೋರಾಟಗಾರರು 10 ದಿನಗಳಿಂದ ಪಾದಯಾತ್ರೆ ನಡೆಸಿ ಈಗ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟ ಧರಣಿ ಕುಳಿತಿದ್ದಾರೆ. ಆದರೆ, ಬಿಜೆಪಿ ಸರ್ಕಾರ ಕನಿಷ್ಟ ಸೌಜನ್ಯಕ್ಕಾದರೂ ಭೇಟಿ ಮಾಡಿಲ್ಲ. ಅದರ ಬದಲು ಧರಣಿ ನಡೆಸುತ್ತಿರುವವರ ಮೇಲೆ ಲಾಠಿ ಪ್ರಹಾರ, ಪೊಲೀಸರಿಗೆ ದೂರು ನೀಡುವ ಪ್ರಯತ್ನಕ್ಕೆ ಕೈಹಾಕಿದೆ. ಇದು ಸಹಜವಾಗಿ ಮಾದಿಗ ಸಮುದಾಯವನ್ನು ಕೆರಳುವಂತೆ ಮಾಡಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿ ಕಾರಿದರು.

ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಹೋರಾಟವನ್ನು ಬೆಂಬಲಿಸಿ, ದಲಿತ ಪ್ರಗತಿಪರ ಮಾದಿಗರ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ಡಿ.26ರಿಂದ ಮೂರು ದಿನಗಳ ಕಾಲ ಮೈಸೂರಿನ ಪುರಭವನದ ಆವರಣದಲ್ಲಿ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಉಪ ಮೇಯರ್ ಸಿ.ಶ್ರೀಧರ್, ನಗರಪಾಲಿಕೆ ಮಾಜಿ ಸದಸ್ಯರಾದ ಸ್ವಾಮಿ, ಮುಖಂಡರಾದ ಶಿವಮೂರ್ತಿ, ವೆಂಕಟೇಶ್, ಬಸಪ್ಪ ಇನ್ನಿತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

FOR SALE
* 45x60 Old house for sale in Vidhyaranya Puram.
* 20x40 NF site for sale in Vinayaka Enclave Near JP Nagar Ring road.
* 28x41 site for sale near Dattagalli.

Broker excuse

9880344263

ತಕ್ಷಣ ಬೇಕಾಗಿದ್ದಾರೆ
ಶ್ರೀ ರೇಣುಕಾ ಪ್ಯೂಯರ್ ಸ್ಟೇಷನ್, # 10/ಎ, ಮಾನಂದವಾಡಿ ರೋಡ್, ಎನ್.ಹೆಚ್.ಪಾಳ್ಯ, ಮೈಸೂರು – 570008 ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:

ಹರೀಶ್: 9739392972
ಚಂದ್ರಶೇಖರ್: 8861999933

SITE FOR SALE
Jnana Bharathi Layout 2nd Stage, Dadada Halli, Just 5 km from J.P Nagar Ring Road, East Facing, MUDA Khata 30x40, Price 22 Lacs

9342123373

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET, ಕಾಲೇಜ್ ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/–, ಕೂಡಲೇ ಸಂಪರ್ಕಿಸಿ. ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್:

8722844236

40x60 N/F ಸೈಟು @ Rs. 18 ಲಕ್ಷ
DTCP Approved Layout ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ಹುಣಸೂರು ಮೈನ್ ರೋಡ್‌ನಿಂದ 1 kms. ಇಲವಾಲ ಬಸ್ಸು ನಿಲ್ದಾಣ ದಿಂದ 6 kms

9538583377

ಬೇಕಾಗಿದ್ದಾರೆ
ಕಲೆಕ್ಷನ್ ಏಜೆನ್ಸಿಗೆ ಫೀಲ್ಡ್ ಎಕ್ಸಿಕ್ಯೂಟಿವ್ ಮೈಸೂರು ಲೋಕಲ್ ಹಾಗೂ ಕೊಳ್ಳೇಗಾಲ ಮತ್ತು ಟೆಲಿಕಾಲರ್ಸ್, ಹುಡುಗಿಯರು ಬೇಕಾಗಿದ್ದಾರೆ, ವಿಳಾಸಕ್ಕೆ ಸಂಪರ್ಕಿಸಿ: # 862/ಜಿ, ಲಕ್ಷ್ಮಣ ಗರಡಿ ಬಿಲ್ಡಿಂಗ್, ಲಕ್ಷ್ಮಣ ಗರಡಿ ರಸ್ತೆ, ದೇವರಾಜ ಕಾಲೇಜ್ ಎದುರು, ದೇವರಾಜ ಮೊಹಲ್ಲಾ, ಮೈಸೂರು,

9986413236, 8861357697

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

9606871188

WANTED
* Tele Caller -2
* Marketing Executive - 5
* Cashier - M/F

Computer Knowledge must and should

9606466459
8904943643

ರಾಜ್ ಮಾರ್ಕೆಟಿಂಗ್ ಮೈಸೂರು
ನಮ್ಮಲ್ಲಿ ಎಲ್ಲಾ ತರಹದ ಕಿಟಕಿಗಳಿಗೆ ಸೊಳ್ಳೆ ಪರದೆಗಳು ದೊರೆಯುತ್ತವೆ. ವೆಲ್ಕ್ರೋಸೊಳ್ಳೆ ಪರದೆಗಳು, ಅಲ್ಯೂಮಿನಿಯಂ ಫ್ರೇಮ್ ಸ್ಟೇನ್ಲೆಸ್ ಸ್ಟೀಲ್ ಸೊಳ್ಳೆ ಪರದೆಗಳು, ಪ್ಲೀಟ್ಡ್ / ಸ್ಲೈಡಿಂಗ್ ಸೊಳ್ಳೆ ಪರದೆಗಳು ಕಿಟಕಿಗಳಿಗೆ ದೊರೆಯುತ್ತವೆ. #38/2, 2ನೇ ಅಡ್ಡ ರಸ್ತೆ, ನಿಮಿಷಾಂಬ ಲೇಔಟ್, ಕುವೆಂಪುನಗರ, ಮೈಸೂರು – 570023

9483037385

WALK IN INTERVIEW
Sri Basaveshwara Higher Primary School, Hura Road, Hullahalli. LKG to 9th Standard.
1) PUC, NST, 2) Any Degree with D.Ed & B.Ed, 3) PT Teacher, 4) Office Clark.
Immediate Appointment

7411585776

WANTED
Female Experienced Office Assistant, Fluency in English, Salary : 10,000 to 15,000, Smart Hair Fixing, Anikethana Road, Kuvempunagar. Contact:

8792945515

SITE FOR SALE
30x40 Sites,
Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.

8660105902

ಬೇಕಾಗಿದ್ದಾರೆ
ಮೈಸೂರಿನ ಹೋಟೆಲ್ ಕೆಲಸಕ್ಕಾಗಿ ಅನುಭವವುಳ್ಳ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸೌತ್ ಇಂಡಿಯನ್, ನಾರ್ಥ್ ಇಂಡಿಯನ್, ಚಾಟ್ಸ್, ಚೈನೀಸ್ ಪರಿಣತಿ ಉಳ್ಳವರಾಗಿರಬೇಕು ಅಥವಾ ವರ್ಕಿಂಗ್ ಪಾರ್ಟ್ನರ್‌ಗಳು ಬೇಕಾಗಿದ್ದಾರೆ ಮತ್ತು ಕಬ್ಬಿನ ಹಾಲು ಪಾಪ್ಕಾರ್ನ್ ಮಷೀನ್ ಬೇಕಾಗಿದೆ. ಸಂಪರ್ಕಿಸಿ:

7019560462

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ : 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:

9480404036

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಪುರುಷರು – 8 ಗಂಟೆ ಶಿಫ್ಟ್ (ಇ.ಎಸ್.ಐ ಹಾಗೂ ಪಿ.ಎಫ್ ಕೊಡಲಾಗುತ್ತದೆ) ಬೆಳವಾಡಿ ಹಾಗೂ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಹತ್ತಿರ. ಸಂಪರ್ಕಿಸಿ.

9606808975

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ ಬೇಕಾಗಿಲ್ಲ. ವಯೋಮಿತಿ 18 ರಿಂದ 55 ವರ್ಷದ ಒಳಗೆ ಇರುತ್ತದೆ. ಊಟ, ವಸತಿ ಸೌಲಭ್ಯವಿರುತ್ತದೆ, (ಪಾರ್ಟ್ ಟೈಮ್ ಜಾಬ್ ಇರುತ್ತದೆ) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

7795465519 / 8217498208
9164975503

ತಕ್ಷಣ ಬೇಕಾಗಿದ್ದಾರೆ
ಹ್ಯೂಟ್ ಮತ್ತು ಇನ್ಫೋಸಿಸ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & PUC, ಸಂಬಳ: S/Sup: 24,000/– 26 days (8hrs), S/Garud: 19,500/– 26 days (8hrs), ವಯೋಮಿತಿ: 50 ವರ್ಷದ ಒಳಗೆ. ESI ಮತ್ತು PF ಊಟ, ತಿಂಡಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:

9620667819
9880727819

ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿವೆ.
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.

8050345574

ಜೀವನ ಸಂಗಾತಿ ಬೇಕಾಗಿದ್ದಾರೆ
ಜಾತಿ, ವಯಸ್ಸಿನ ಅಭ್ಯಂತರವಿಲ್ಲದ ಮಹಿಳಾ ಜೀವನ ಸಂಗಾತಿ ಬೇಕಾಗಿದ್ದಾರೆ. Photo, ವಿವರ Whatsapp ಮಾಡಿ ಅಥವಾ ನೇರವಾಗಿ ಸಂಪರ್ಕಿಸಿ:

8971081766

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,600/– (8 hours duty), ವಯೋಮಿತಿ 50 ವರ್ಷದೊಳಗೆ, ESI ಮತ್ತು PF ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:

9538567819
9620777819

ನಾಟಿ ಔಷಧಿ
ಮಂಡಿ ನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿನಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ.

8951451333

ಎಲ್ಲಾ ಜಾತಿಯ ವಧು–ವರರ ಮಾಹಿತಿ ಕೇಂದ್ರ
Degree, MA, M.Sc, M.Com, MBA, Engineer, Doctor's
ವಿವಾಹ ನೋಂದಣಿಗಾಗಿ ಸಂಪರ್ಕಿಸಿ: (2nd Marriage also)

9164743059

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
ಡಾ.ಗುರೂಜಿ ಮೈಸೂರು

9448229184
7899625268

30x40 W/F ಸೈಟು @ Rs. 38 ಲಕ್ಷ
MUDA Approved Layout ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ. ತಕ್ಷಣ ಮನೆ ಕಟ್ಟಬಹುದು. ವಿಜಯನಗರ 4ನೇ ಹಂತ ನಂತರ

9538583377

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12,000/–

8892258814

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ : 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.

8453408502
9108100117

SITE FOR SALE
1060 Sq.Ft, West Face, Silicon City, Near infosys MUDA aaproved, Rs. 36 Lakhs. 'Nego.'

7795784766
8884867867

Wanted Immediately
Quality Executives (Qualification B.Sc. in Food Science) Male, age below 30 years. Experience: 0 to 1 years. Address: The Akshayapatra Foundation, Mysore, No. 31, 18th Cross, Jayanagar, Mysore.

Mob: 9964451366

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ: 12,000 – 23,000 ರವರೆಗೆ (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ)

9743135666
9739292222

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ ಯುವತಿಯರಿಗೆ ಗೃಹಿಣಿಯರಿಗೆ ವಿದ್ಯಾರ್ಥಿಗಳಿಗೆ ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000 ದಿಂದ 20,000 ರವರೆಗೆ ಗಳಿಸಿ. ಮಾಹಿತಿಗಾಗಿ ಸಂಪರ್ಕಿಸಿ:

9972237729
9739597810

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರಥಮ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:

7406375196, 9880548596

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಸೈಟು ಬೇಕಾಗಿದೆ
ಕೆ.ಬಿ.ಎಲ್. ಸಿಲಿಕಾನ್ ಸಿಟಿ, ಮೈಸೂರು ಹೆಬ್ಬಾಳ್‌ನಲ್ಲಿ
30x40 or 30x50 ಸೈಟು ಬೇಕಾಗಿದೆ.
ಮಧ್ಯವರ್ತಿಗಳು ಸಂಪರ್ಕ ಮಾಡಲೇಬೇಡಿ

Mob: 9986553325

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

WANTED
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ನಗರ ಹಾಗೂ ಲಲಿತಾದ್ರಿನಗರದಲ್ಲಿ ಸೈಟುಗಳು ಬೇಕಾಗಿದೆ.
20x30, 30x40

9900125239

ಕೆಲಸಕ್ಕೆ ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರು ಹಾಗೂ ಜಾತಿ ಬೇದವಿಲ್ಲ. ಸಂಬಳ : 8,000–10,000 ರೂ.

9845639079

S.B GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5300
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.

9964522225

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಲಲಿತಾದ್ರಿಪುರ, ಆಲನಹಳ್ಳಿ, ಚಿಕ್ಕಳ್ಳಿ, ಉತ್ತನಹಳ್ಳಿ, ರಾಜ್‌ಕುಮಾರ್ ರಸ್ತೆ ಸುತ್ತ ಮುತ್ತ ಇರುವ ಪ್ರದೇಶಗಳಿಗೆ ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್.

8197821408, 9035269781, 0821-4852002

ಬೇಕಾಗಿದೆ
3 BHK ಅಪಾರ್ಟ್‌ಮೆಂಟ್ ಖರೀದಿಗೆ ಬೇಕಾಗಿದೆ.
3 BHK ಶ್ರೀರಾಂಪುರದಲ್ಲಿ 5 ವರ್ಷ ಹಳೆ ಮನೆ ಖರೀದಿಗೆ ಬೇಕಾಗಿದೆ.

Mob: 9900535779

BROKERS EXCUSE

ಮನೆ ಮಾರಾಟಕ್ಕಿದೆ
30x40, 3 BHK ಡೂಪ್ಲೆಕ್ಸ್, ಉತ್ತರ ದಿಕ್ಕು, ದಟ್ಟಗಳ್ಳಿ 3ನೇ ಹಂತ.

Mob: 9741076619

LOST
I, Dr. R. Chithra, D/o Rangappa, Door No. 2265, 4th Main, Vinayakanagar, Mysore, have lost Hanchya Sathagalli 'A' Zone Site No. 1187 document of khata has been lost in Vinayakanagar in Mysuru. Finders please call:

Mob: 7829442915

SITES FOR SALE
* 30x30 - South Face
* 30x40 - East Face
* 40x60 - North Face
* 40x60 - West Face

Near Ring Road, Opposite University Layout.
* 30x40 Bannur Road.
* 40x60 Near Varuna

9900372792

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಕಂಪನಿಯಲ್ಲಿ ಕೆಲಸ ಮಾಡಲು ಅನುಭವವಿರುವ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ.
1) ಡ್ರೈವರ್‌ಗಳು : (ಬ್ಯಾಡ್ಜ್) ಸಂಬಳ: ರೂ.15,000/– (TATA ACE / Ashok Layland)
2) ಹೆಲ್ಪರ್‌ಗಳು: ಸಂಬಳ: ರೂ. 12,000/– (ವಯಸ್ಸು 18 ರಿಂದ 30 ವರ್ಷ)

9845026220

ಕಳೆದಿದೆ
ಹುಣಸೂರು ತಾಲ್ಲೂಕು ಕರಿಮುದ್ದನಹಳ್ಳಿ ಗ್ರಾಮ ಪಂಚಾಯಿತಿಯ ಬಸವನಹಳ್ಳಿ (ಕುಟ್ಟಿವಾಡಿ) ಗ್ರಾಮದ ಆರ್. ಕೃಷ್ಣ ರವರ ಪತ್ನಿ ಸ್ಫೂರ್ತಿ ರವರಿಗೆ ಸೇರಿದ ಪಂಚಾಯಿತಿ ವ್ಯಾಪ್ತಿಯ ನಿವೇಶನದ ಹಕ್ಕು ಪತ್ರ ಇಲವಾಲ ಸಿದ್ದೇಗೌಡರ ಮಗ ಕೃಷ್ಣೇಗೌಡ ಹೆಸರಿನಲ್ಲಿದ್ದು ನಿವೇಶನ (ಸಂಖ್ಯೆ 139)ದ ಅಸಲಿ ಹಕ್ಕು ಪತ್ರ ಕಳೆದು ಹೋಗಿದೆ. ಸಿಕ್ಕವರು ಬಿಳಿಕೆರೆ ಪೊಲೀಸ್ ಠಾಣೆಗೆ ತಂದು ತಲುಪಿಸಲು ಕೋರಿದೆ.

Mob: 9740405207

WANTED
BSG PROPERTIES
Telecallers : 6 Nos.
SSLC / PUC / Degree
Fixed salary: 10,000 rupees + incentives.

9008639936, 8867997388

Layout Marketing
We are one of pioneer in marketing, having experienced of selling more than 1K plots in Mysore & Bangalore. Feel free 2 call

9606697999

us if ur in need.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive

8884171888

WANTED ACCOUNTANT
Near Devegowda Circle for Office Work, Minimum Qualification B.Com (Girls prefered) Contact:

8618572064

SITES FOR SALE
MUDA Approved 20x30, 20x40, 30x40 Bank Loan available Ready for Registration Owner:

9945489666

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:

9148733213

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬ್ಬೆ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳೆಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ITI (Fitter, Turner, Welder, Machinist, Any Trade) (AAL)

7019380847
7090309148

WANTED
Mysore Diagnostic Centre Pvt. Ltd. # 1869, S S Complex, 1st Floor, S R Road, Mysore - 570021.
1) Administrative officer - M/F
2) Marketing Executive - M
3) Receptionist - M/F
4) Typist - M/F, 5) Sample Boy - M

Mail: mdcmysore@gmail.com

9243781901 / 9243781906
9845272844

QP ಬೇಕಾಗಿದ್ದಾರೆ
ಮೆಡಿಕಲ್ ಶಾಪ್‌ಗೆ ಕ್ಯೂಪಿ ಸರ್ಟಿಫಿಕೇಟ್ ಬೇಕಾಗಿದೆ. QP Certificate ಹೊಂದಿರುವವರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:

9986311444
9986322444

FOR SALE
3 BHK Flat for Sale in a new apartment, 1200 Sft, Ground floor, North facing - At Posh location of Vontikoppal, Mysore - With one Car parking / Lift amenities. Contact:

9480308402
9004470423

ಹೋಲ್‌ಸೇಲ್ ದರದಲ್ಲಿ


ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–, ರೂ.300/– ಕ್ಲೀನಿಂಗ್ 1 ಕೋಳಿಗೆ ರೂ. 20/– ಗೌಡ್ರು ನಾಟಿಕೋಳಿ ಅಂಗಡಿ ನಂ.198/1, ಪಿ & ಟಿ ಕ್ವಾಟ್ರಸ್ ಮೈನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ ಎನ್.ಆರ್.ಮೊಹಲ್ಲಾ, ಮೈಸೂರು – 570007

9448048576
9632378020

WANTED
1) Office Executives (M/F)
2) Telecaller (F) with Computer Knowledge.
Salary : 10k to 25k.
Contact:

7795301535
9060109063

Plastic Recycling Machines for Sale
15 hp Shredder and dehydrator for Sale. Contact:

7619619430
9448377166

ಬೇಕಾಗಿದ್ದಾರೆ
Ladies PG ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ. (ಸಂಬಳ: 8,000 ರಿಂದ 8,500)

9972567537

ಮನೆ ಬಾಡಿಗೆಗೆ / ಭೋಗ್ಯಕ್ಕಿದೆ
1BHK / 2BHK New House for Rent / Lease for Vegitarian (Solar & 24 hrs Water) R.P.Road, 3rd Cross, Nanjangud

9886723461

ಜಮೀನು ಮಾರಾಟಕ್ಕಿದೆ
ಒಂದು ಎಕರೆ (ಊರ ಪಕ್ಕದಲ್ಲೇ ಇದೆ) ಮುಳ್ಳೂರು ಗ್ರಾಮ, ಹೆಚ್.ಡಿ. ಕೋಟೆ – ಸರಗೂರು ತಾಲ್ಲೂಕಿನಲ್ಲಿ.

Mob: 9663577578

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.

7795560970

ವಧು ಬೇಕಾಗಿದೆ
34 ವರ್ಷದ ವರನಿಗೆ ವಧು, ವಿಧವೆ, ವಿಚ್ಛೇದಿತೆ ಬೇಕಾಗಿದ್ದಾರೆ.

9972994558

ಬಾಡಿಗೆಗೆ
ಪಾರ್ಕಿಂಗ್ ವ್ಯವಸ್ಥೆ ಇರುವ 2ನೇ ಅಂತಸ್ತಿನಲ್ಲಿ 1 ಅಡುಗೆ ಮನೆ, 1 ರೂಮ್, 1 ಬಾತ್‌ರೂಮ್, ಸೋಲಾರ್ ವಾಟರ್ ಸೌಲಭ್ಯವಿರುವ ಗಂಡ ಹೆಂಡತಿ ಮಗು ಇರಬಹುದಾದ ಮನೆ ತ್ರಿವೇಣಿ ಸರ್ಕಲ್, ಶಕ್ತಿನಗರ ಪಾರ್ಕ್ ಹತ್ತಿರ.

9845334209
6362489652

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಕಂಪನಿ / ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary + ಓಟಿ. 17,800 - 48,000/-

9035022214
9035022290

S.K.CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ Engineer Plan ವಾಸ್ತು ಪ್ರಕಾರ 3D Elevation ಸಹಿತ ಉತ್ತಮ ಗುಣಮಟ್ಟದಲ್ಲಿ Loan ಮಾಡಿಸಿ Construction ಮಾಡಿಕೊಡುತ್ತೇವೆ.

9620528490

ಬಾಡಿಗೆಗೆ ಇದೆ
ಆಫೀಸ್ ಕೆಲಸಕ್ಕೆ 17x40 ಅಳತೆಯ ಜಾಗ ಬಾಡಿಗೆಗೆ ಇದೆ. 12ನೇ ಮುಖ್ಯ ರಸ್ತೆ, ಸರಸ್ವತಿಪುರಂ.

9964141631
9742444435

ಸುವರ್ಣ ಅವಕಾಶ
ಬೆಂಗಳೂರಿನ ಡಿಜಿಟಲ್ ಮಾರ್ಕೆಟಿಂಗ್ ಕಂಪನಿಯಿಂದ ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಸ್ಮಾರ್ಟ್‌ಫೋನ್‌ನಿಂದ ಸ್ಟ್ರೀಮಿಂಗ್ ಆ್ಯಪ್ ಪ್ರಮೋಟ್ ಮಾಡುವ ಮೂಲಕ ದಿನಕ್ಕೆ 3000 ರೂಪಾಯಿಗಿಂತ ಅಧಿಕ ಆದಾಯ ಗಳಿಸುವ ಸುವರ್ಣ ಅವಕಾಶ. 18 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ:

Mob: 8317420378

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.

9740733021 / 9535028750

ಬೇಕಾಗಿದ್ದಾರೆ
ವಾಣಿ ವಿಲಾಸ ಮೊಹಲ್ಲಾ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ. ನಂ.1789, ಹಂಪಿ ವೃತ್ತ, 2ನೇ ಹಂತ, ಹೆಬ್ಬಾಳ್ (ವಿಜಯನಗರ), ಮೈಸೂರು – 570017.
ಮೇಲ್ಕಂಡ ಸಂಘದಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು ಆಸಕ್ತಿಯುಳ್ಳವರು ತಮ್ಮ ಸ್ವ ವಿವರಗಳೊಂದಿಗೆ ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯೊಳಗೆ ಅರ್ಜಿಯನ್ನು ಖುದ್ದಾಗಿ ಸಲ್ಲಿಸಬಹುದಾಗಿರುತ್ತದೆ. (10 ದಿನಗಳೊಳಗೆ).
1) ತಾತ್ಕಾಲಿಕ : ಕಾರ್ಯದರ್ಶಿ – 01
2) ತಾತ್ಕಾಲಿಕ : ಸಹಾಯಕರು / ಅಂಟೆಂಡರ್–01
ಸಹಿ/– ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ, ಹೆಚ್.ಸಿ.ಚೇತನ್‌ಕುಮಾರ್

ಅಧ್ಯಕ್ಷರು : 9900159020

ಒಕ್ಕಲಿಗ ವಧು ವರರಿಗಾಗಿ ಇಂದೇ ಸಂಪರ್ಕಿಸಿ
ರಜಾದಿನ: ಮಂಗಳವಾರ, ಬೆಳಿಗ್ಗೆ : 10 ರಿಂದ 1 ಹಾಗೂ 4 ರಿಂದ 6.30, ಭಾನುವಾರ 10 ರಿಂದ 1 ರವರೆಗೆ ಮಾತ್ರ, ಒಕ್ಕಲಿಗ ಸಂಘ (ರಿ), ಮೈಸೂರು ಪೂರ್ವ ವಲಯ, ನಂ. 481, ವಿನಯ ಮಾರ್ಗ, ಗಣಪತಿ ದೇವಸ್ಥಾನದ ಎದುರು, ಮೊದಲನೇ ಮಹಡಿ, ಸಿದ್ಧಾರ್ಥನಗರ, ಮೈಸೂರು – 11

9845585008 / 9986585954

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ರೈತ ದಿನಾಚರಣೆ ಆಚರಿಸುವುದು ಪುಣ್ಯದ ಕೆಲಸ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಮತ

ಹೆಚ್.ಡಿ.ಕೋಟೆ, ಡಿ.23– ರೈತ ದಿನಾಚರಣೆ ಆಚರಿಸುವುದು ಪುಣ್ಯದ ಕೆಲಸ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಪ್ರಾಯಪಟ್ಟರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ರಾಜ್ಯ ರೈತ ಕಲ್ಯಾಣ ಸಂಘಟನೆ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ರೈತ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಬಂದ ವೇಳೆ ದೇಶದಲ್ಲಿ ಬಡತನ, ಕ್ಷಾಮ, ಹಸಿವು ಇತ್ತು. ಆಹಾರ ಪದಾರ್ಥಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೆವು. ಆದರೆ ಈಗ ನಮ್ಮ ದೇಶ 317 ಮಿಲಿಯನ್ ಟನ್ ಆಹಾರ ಉತ್ಪಾದನೆ ಮಾಡಿ 2ನೇ ಸ್ಥಾನದಲ್ಲಿರುವುದಕ್ಕೆ ನಮ್ಮ ರೈತರು ಕಾರಣ ಎಂದರು.

ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರಿಗೆ ಗೌರವ ನೀಡುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.



ಬಿಡಗಲು ವಿರಕ್ತ ಮಠದ ಮಹಾದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. 'ಮಣ್ಣನ್ನು ರಕ್ಷಿಸಿ' ಎಂಬ ಶೀರ್ಷಿಕೆ ಭಿತ್ತಿಪತ್ರ ಬಿಡುಗಡೆಗೊಳಿಸಲಾಯಿತು.

ತಾಲೂಕು ಆಡಳಿತಸೌಧದ ಸಮೀಪ ಎತ್ತಿನಗಾಡಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಗೆ ಚಂದನ್ ಗೌಡ ಹಿಬ್ಬಾಲ ಗ್ರಾಮದಿಂದ ಬಂದಿದ್ದ ಬಸವನಿಗೆ ಪೂಜೆ ಮಾಡುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಜಿಲ್ಲಾ ಮಹಿಳಾ ಅಧ್ಯಕ್ಷೆ ಪುಟ್ಟಮ್ಮ, ಶಾಸಕ ಅನಿಲ್ ಚಿಕ್ಕಮಾದು ಪತ್ನಿ ಸೌಮ್ಯ, ತಾಯಿ ನಾಗಮ್ಮ, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಸತೀಶ್‌ಗೌಡ, ಸಿರಾಜ್ ಅಭಿಮಾನಿ ಬಳಗದ ಪ್ರಸನ್ನಗೌಡ, ಜಸೀಲಾ ಶೈಲ, ರತ್ನಮ್ಮ, ತಾಲೂಕು ಅಧ್ಯಕ್ಷ ಉಮೇಶ್, ಯುವ ಅಧ್ಯಕ್ಷ ರವಿಕುಮಾರ್, ತಾಲೂಕು ರೈತ ಕಲ್ಯಾಣ ಸಂಘದ ಪದಾಧಿಕಾರಿಗಳ ಬಸವರಾಜ್, ದಿಲೀಪ್, ದಾಸೇಗೌಡ, ಮಂಚಯ್ಯ, ಸಿದ್ದಲಿಂಗೇಗೌಡ, ಶಿವಣ್ಣೇಗೌಡ, ಹರೀಶ್ ಶಫಿ ಪ್ರಕಾಶ್, ಗೋವಿಂದೇಗೌಡ, ವೆಂಕಟೇಶ್, ಗುರುಸ್ವಾಮಿ, ನಾಗೇಶ್, ರಂಜಿತ್, ಶಂಕರ್, ಯೋಗೇಶ್, ಮಹೇಶ್, ರತ್ನಮ್ಮ ಇನ್ನಿತರರಿದ್ದರು.

ಅಂಕನಹಳ್ಳಿ ಗ್ರಾಪಂಗೆ ಸವಿತಾ ಅಧ್ಯಕ್ಷೆ



ತಿ.ನರಸೀಪುರ, ಡಿ.23– ತಾಲೂಕಿನ ಅಂಕನಹಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ಎಂ.ಸಿ.ಸವಿತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಸವಿತಾ ದೊರೆಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು. ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣಾ ವಿಶೇಷ ಸಭೆಯಲ್ಲಿ ಎಂ.ಸಿ.ಸವಿತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ನಟೇಶ್ ಪ್ರಕಟಿಸಿದರು.

ಸದಸ್ಯರಾದ ಪುಟ್ಟಸ್ವಾಮಿ, ನಿಂಗಯ್ಯ, ಜ್ಯೋತಿ, ಹೊಂಬಮ್ಮ, ಸಂಗೀತಾ, ಸವಿತಾ, ಎನ್.ರೇಣುಕಾ, ಚನ್ನಮ್ಮ, ಡಿ.ಎಂ.ಸೋಮಶೇಖರ್, ಎಂ.ಸಿ.ಸವಿತಾ, ಮಹೇಶ್, ಶಿವಮ್ಮ, ನಾಗರತ್ನಮ್ಮ, ಡಿ.ಆರ್.ಪುಷ್ಪ ಹಾಗೂ ಎನ್.ಶಿವಮಾದಯ್ಯ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ನಾಗರಾಜು, ಟಿ.ಸಿ.ಜಯಲಕ್ಷ್ಮಿ, ಸಿ.ಆರ್.ಶಂಕರ್ ಕುಮಾರ್ ಹಾಗೂ ಶಿವಮ್ಮ ಗೈರು ಹಾಜರಾದರು.

ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಗ್ರಾಪಂ ಮುಂಭಾಗ ಜಮಾಯಿಸಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನೂತನ ಅಧ್ಯಕ್ಷೆ ಎಂ.ಸಿ.ಸವಿತಾ ಮಾತನಾಡಿ ಎಲ್ಲಾ ಸದಸ್ಯರ ಸಲಹೆ ಸೂಚನೆ ಪಡೆದು ಗ್ರಾಪಂ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಯುವ ಮುಖಂಡ ಸುನೀಲ್ ಬೋಸ್ ಹಾಗೂ ತಾಪಂ ಮಾಜಿ ಅಧ್ಯಕ್ಷೆ ಗಾಯತ್ರಿ ಮಾರ್ಗದರ್ಶನದಲ್ಲಿ ಗ್ರಾಮದಲ್ಲಿ ಬಾಕಿ ಉಳಿದಿರುವ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಲು ಸರ್ಕಾರದಿಂದ ಅಗತ್ಯ ಅನುದಾನ ತಂದು ಗ್ರಾಪಂ ಸಮಗ್ರ ಅಭಿವೃದ್ಧಿಗೆ ಪ್ರಯತ್ನಿಸಲಾಗುವುದು ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಟಿ.ಎಚ್.ಮಂಜುನಾಥ್, ಮುಖಂಡ ಸ್ವಾಮಿಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಡಿ.ಎಸ್.ಮಲ್ಲೇಶ್, ಎಪಿಎಂಸಿ ಮಾಜಿ ಸದಸ್ಯ ಕೆ.ಸಿ.ಮಹದೇವು, ಪಿಎಸಿಸಿ ಮಾಜಿ ಅಧ್ಯಕ್ಷ ಹೆಚ್.ಮಹದೇವು, ಡಿ.ಬಿ.ಶಿವಕುಮಾರ್, ಸದಸ್ಯ ರಮೇಶ್, ಗುತ್ತಿಗೆದಾರರಾದ ರಾಮಕೃಷ್ಣ, ರಮೇಶ್, ಡಿ.ಸಿ.ಜಯರಾಂ, ಡಿ.ಸಿ.ಗೋಪಾಲಕೃಷ್ಣ, ಮಾಜಿ ಗ್ರಾಪಂ ಅಧ್ಯಕ್ಷ ಕೆ.ಸಿದ್ದಯ್ಯ, ದೊಡ್ಡಸ್ವಾಮಿ, ಮುದ್ದೇಗೌಡ, ಕಾಂಗ್ರೆಸ್ ಮುಖಂಡರಾದ ಮಹದೇವು, ಜುಂಜಯ್ಯ, ಎಂ.ಕೆ.ಹಳ್ಳಿ ಮಹೇಶ್, ಮಾಜಿ ಗ್ರಾಪಂ ಉಪಾಧ್ಯಕ್ಷೆ ಶಿವಮ್ಮ, ಮಾಜಿ ಸದಸ್ಯ ಕಳ್ಳೀಪುರ ಕೃಷ್ಣೇಗೌಡ ಮತ್ತಿತರರಿದ್ದರು.

ರೈತರಿಂದ ಮಾತ್ರ ಸಹಕಾರ ಸಂಸ್ಥೆ ಬೆಳವಣಿಗೆ ಸಾಧ್ಯ: ಜಿಡಿಹೆಚ್



ಹುಣಸೂರು, ಡಿ.23– ರೈತರ ಬೆನ್ನೆಲುಬಾಗಿರುವ ಸಹಕಾರ ಸಂಸ್ಥೆ ಬೆಳವಣಿಗೆ ರೈತರಿಂದ ಮಾತ್ರ ಸಾಧ್ಯ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ಕರೆ ನೀಡಿದರು.

ತಾಲೂಕಿನ ಹುಂಡಿಮಾಳ ಪಿಎಸಿಎಸ್ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಸಹಕಾರ ಸಂಘದ ಸದಸ್ಯರಾಗುವ ಮೂಲಕ ಸಹಕಾರ ಸಂಸ್ಥೆ ಸೇವೆ ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತೆ ಮನವಿ ಮಾಡಿದರು. ಹುಣಸೂರು ತಾಲೂಕಿನ ರೈತರಿಗೆ ಎಲ್ಲಾ ರೀತಿಯ ಸಾಲ ಸೌಲಭ್ಯ ನೀಡಲಾಗಿದೆ. ಅದರಲ್ಲೂ ಕುಡಿನೀರು ಮುದ್ದನಹಳ್ಳಿ ಸಹಕಾರ ಸಂಘಕ್ಕೆ ಹೆಚ್ಚಿನ ಸಾಲ ಸೌಲಭ್ಯ ನೀಡುವ ಮೂಲಕ ರೈತರ ಬದುಕಿಗೆ ಎಂಸಿಡಿಸಿಸಿ ಬ್ಯಾಂಕ್ ಆಶಾಕಿರಣವಾಗಿದೆ ಎಂದರು.

ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ: ಕುಡಿನೀರು ಮುದ್ದನಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ಗುರುವಾರ ನಡೆಯಿತು. ಚುನಾವಣೆಯಲ್ಲಿ ಜಿ.ಡಿ.ಹರೀಶ್‌ಗೌಡರ ಬೆಂಬಲಿಗ ರೇವಣ್ಣ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಶ್ರೀನಿವಾಸ್ ಆಯ್ಕೆಯಾದರು.

ಈ ವೇಳೆ ಜೆಡಿಎಸ್ ಮುಖಂಡರಾದ ರಂಜಿತಾ ಚಿಕ್ಕಮಾದು, ಬಸವಲಿಂಗಯ್ಯ, ಮಾಜಿ ಅಧ್ಯಕ್ಷರಾದ ಕಿರಣ್‌ಗೌಡ ವಿರಾಜು, ಕಾರ್ತಿಕ್, ಚೆನ್ನಬಸವಯ್ಯ, ರಾಮಕೃಷ್ಣ, ರಾಮಕೃಷ್ಣಗೌಡ,ರಾಮನಾಯಕ, ಭಾಗ್ಯಮ್ಮ, ಕವಿತಾ, ಅಯ್ಯಪ್ಪ ಸ್ಥಳೀಯ ಸಹಕಾರಿಗಳು, ಜೆಡಿಎಸ್ ಕಾರ್ಯಕರ್ತರು, ಹರೀಶ್‌ಗೌಡರ ಅಭಿಮಾನಿಗಳು, ಸಂಘದ ಸಿಇಓ ವೇಲುಮಣಿ ಮತ್ತಿತರರಿದ್ದರು.

ನೂತನ ಡಿವೈಎಸ್ಪಿ ಎಂ.ಕೆ.ಮಹೇಶ್ ಅಧಿಕಾರ ಸ್ವೀಕಾರ

ಹುಣಸೂರು, ಡಿ.23– ಹುಣಸೂರು ಉಪ ವಿಭಾಗದ ಡಿವೈಎಸ್‌ಪಿಯಾಗಿ ಎಂ.ಕೆ.ಮಹೇಶ್ ನಿರ್ಗಮಿತ ಡಿವೈಎಸ್‌ಪಿ ರವಿಪ್ರಸಾದ್ ಅವರಿಂದ ಅಧಿಕಾರ ಸ್ವೀಕರಿಸಿದರು. ಬೆಂಗಳೂರಿನ ಸಿಐಡಿ ಕಚೇರಿ ಡಿವೈಎಸ್ಪಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಮಹೇಶ್ ಅವರನ್ನು ಹುಣಸೂರು ಡಿವೈಎಸ್ಪಿಯಾಗಿ, ಇಲ್ಲಿದ್ದ ಡಿವೈಎಸ್ಪಿ ರವಿಪ್ರಸಾದ್ ಅವರನ್ನು ಬೆಂಗಳೂರಿನ ಡಿಜಿ ಕಚೇರಿಗೆ ವರ್ಗಾವಣೆ ಮಾಡಲಾಗಿದೆ.



ಹುಲಿ ಪ್ರತ್ಯಕ್ಷ: ಅರಣ್ಯ ಇಲಾಖೆಯಿಂದ ಕೂಂಬಿಂಗ್



ಹನಗೋಡು, ಡಿ.23– ಹನಗೋಡು ಸಮೀಪದ ನೇರಳಕುಪ್ಪೆ ಗ್ರಾಪಂನ ಕೆ.ಜಿ.ಹೆಬ್ಬನಕುಪ್ಪೆ ತೋಟವೊಂದರಲ್ಲಿ ಹುಲಿ ಕಾಣಿಸಿಕೊಂಡಿದ್ದು, ಸಾಕಾನೆ ಸಹಾಯದೊಂದಿಗೆ ಹುಲಿ ಪತ್ತೆಗೆ ಅರಣ್ಯ ಇಲಾಖೆ ಸಿಬ್ಬಂದಿ ಶುಕ್ರವಾರ ಕೂಂಬಿಂಗ್ ನಡೆಸಿದರು.

ನಾಗರಹೊಳೆ ರಾಷ್ಟ್ರೀಯ ಉದ್ಯಾನದಂಚಿನ ಕೆ.ಜಿ.ಹೆಬ್ಬನಕುಪ್ಪೆ ಸಪೋಟ ತೋಟದಲ್ಲಿ ಉದಯ್ ಅವರಿಗೆ ಸೇರಿದ ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುವಿನ ಮೇಲೆ ಬುಧವಾರ ಮುಂಜಾನೆ ಹುಲಿ ದಾಳಿ ನಡೆಸಿ ಗಾಯಗೊಳಿಸಿದ ಹಿನ್ನೆಲೆಯಲ್ಲಿ ತೋಟದ ಮಾಲೀಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಹುಣಸೂರು ವಲಯದ ಆರ್‌ಎಫ್‌ಓ ರತನ್‌ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಹುಲಿ ಪತ್ತೆಗೆ ಸಾಕಾನೆ ಗಣೇಶನ ನೆರವಿನಿಂದ ಕಚುವಿನಹಳ್ಳಿ ಶ್ರೇಣಿಯ ಡಿಆರ್‌ಎಫ್‌ಓ ವೀರಭದ್ರಯ್ಯ ನೇತೃತ್ವದ ತಂಡ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿ ಸಪೋಟ, ಮಾವಿನತೋಟ ಹಾಗೂ ಅಂಕನಕಟ್ಟೆ ಕೆರೆ ಭಾಗದಲ್ಲಿ ಹುಲಿ ಸೆರೆ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಹುಲಿ ಹೆಜ್ಜೆ ಪತ್ತೆ; ಸಮೀಪದ ಕಾಳಬೋಚನಹಳ್ಳಿ ಗ್ರಾಮದ ಉದ್ಯಮಿ ಕೆ.ಪಿ.ದಿನೇಶ್ ಕುಮಾರ್ ಅವರ ತೋಟ ಹಾಗೂ ಮುಸುಕಿನ ಜೋಳದ ಹೊಲದಲ್ಲಿ ಶುಕ್ರವಾರ ಬೆಳಗ್ಗೆ ಹುಲಿ ಹೆಜ್ಜೆ ಪತ್ತೆಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ. ಕೂಡಲೇ ಹುಲಿ ಸೆರೆ ಹಿಡಿಯುವ ಮೂಲಕ ನೆಮ್ಮದಿ ಬದುಕಿಗೆ ಅವಕಾಶ ಕಲ್ಪಿಸಬೇಕೆಂದು ಉದ್ಯಾನದಂಚಿನ ಗ್ರಾಮಸ್ಥರು ಒತ್ತಾಯಿಸಿದ್ದಾರೆ.


ಚರ್ಮಗಂಟು ರೋಗ ಹಿನ್ನೆಲೆ

ಜಾನುವಾರು ಜಾತ್ರೆಗೆ ಅನುಮತಿ ನೀಡದ ಜಿಲ್ಲಾಡಳಿತ

ಚುಂಚನಕಟ್ಟೆ, ಡಿ.23– ಚರ್ಮಗಂಟು ರೋಗದ ಹಿನ್ನಲೆಯಲ್ಲಿ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ದನಗಳ ಜಾತ್ರೆಯನ್ನು ಜಿಲ್ಲಾಡಳಿತ ಈ ಬಾರಿ ರದ್ದು ಮಾಡಿರುವುದು, ರೈತರನ್ನು ನಿರಾಸೆಗೊಳಿಸಿದೆ.

ಸಾಲಿಗ್ರಾಮ ತಾಲೂಕಿನಲ್ಲಿ ಭತ್ತದ ಸುಗ್ಗಿ ನಂತರ ನಡೆಯುವ ಚುಂಚನಕಟ್ಟೆ ಜಾತ್ರೆ ಕಳೆದ ಬಾರಿ ಕೋವಿಡ್ ನಡುವೆ ತಾಲೂಕು ಆಡಳಿತ ಯಾವುದೇ ಸೌಲಭ್ಯ ನೀಡದಿದ್ದರೂ ಸ್ವಯಂಪ್ರೇರಿತವಾಗಿ ರೈತರಿಂದಲೇ ತಕ್ಕಮಟ್ಟಿಗೆ ನಡೆದಿತ್ತು 3 ವರ್ಷಗಳಿಂದಲೂ ಕೋವಿಡ್‌ನಿಂದ ಜಿಲ್ಲಾಡಳಿತ ಜಾತ್ರೆ ರದ್ದು ಮಾಡಿತ್ತು ಆದರೆ ಈ ಬಾರಿ ಅದ್ದೂರಿ ಜಾನುವಾರು ಜಾತ್ರೆಗೆ ರೈತರು ಸಿದ್ಧತೆ ಮಾಡಿಕೊಂಡಿದ್ದರು. ಚರ್ಮಗಂಟು ರೋಗ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಶು ಸಂಗೋಪನಾ ಇಲಾಖೆ ಮುಂಜಾಗ್ರತಾ ಕ್ರಮವಾಗಿ ದನಗಳ ಜಾತ್ರೆಗೆ ಅನುಮತಿ ನೀಡಬೇಡಿ ಎಂದು ಜಿಲ್ಲಾಡಳಿತಕ್ಕೆ ಸಲಹೆ ನೀಡಿತ್ತು. ಹೀಗಾಗಿ ಜಾತ್ರೆಗೆ ಅನುಮತಿ ನೀಡಿಲ್ಲ.

ಜಾತ್ರೆಗಾಗಿ ರೈತರು ತಯಾರಿ ಮಾಡಿಕೊಳ್ಳುತ್ತಾರೆ. ಅದಕ್ಕಾಗಿ ವಿಶೇಷ ತಿಂಡಿಗಳನ್ನು ಸಿದ್ಧ ಮಾಡಿ ದನಕರುಗಳನ್ನು ಹುರಿಗೊಳಿಸಲಾಗುತ್ತದೆ. ಸಣ್ಣ ವಯಸ್ಸಿನ ಕರುಗಳನ್ನು ತಂದು ಜಾತ್ರೆಯಲ್ಲಿ ಮೆರೆಸುವ ಸಲುವಾಗಿಯೇ ಹಾಲು, ತುಪ್ಪ, ಬೆಣ್ಣೆ, ಹುರುಳಿ, ಮೊಳಕೆ ಕಾಳುಗಳು, ರವೆಬೂಸ ದಂತಹ ವಿಶೇಷ ಆಹಾರ ನೀಡಿ ತಯಾರಿ ಮಾಡಿಕೊಳ್ಳಲಾಗುತ್ತದೆ. ಆದರೆ ಜಾತ್ರೆಗೆ ಅನುಮತಿ ನೀಡದ ಕಾರಣ ಈ ಬಾರಿ ಜಾತ್ರೆಯನ್ನು ಕೇವಲ ರಥೋತ್ಸವಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ.



ತಾಲೂಕು ವ್ಯಾಪ್ತಿಯಲ್ಲಿ ಚರ್ಮಗಂಟು ರೋಗ ಉಲ್ಬಣವಾಗುತ್ತಿದ್ದು, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜಾನುವಾರು ಜಾತ್ರೆಯನ್ನು ರದ್ದು ಮಾಡಲಾಗಿದೆ. ನಿಯಮ ಉಲ್ಲಂಘಿಸಿ ಜಾತ್ರೆ ಮೈದಾನಕ್ಕೆ ಜಾನುವಾರು ಕರೆತಂದಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತದೆ.
– ಮೋಹನ್ ಕುಮಾರ್, ಸಾಲಿಗ್ರಾಮ ತಹಶೀಲ್ದಾರ್.

ಸುಗ್ಗಿ ನಂತರ ಬರುವ ಈ ಜಾತ್ರೆಯಲ್ಲಿ ವರ್ಷವಿಡೀ ಸಾಕಿದ ದನಕರುಗಳನ್ನು ತಂದು ನಾವು ಸಂಭ್ರಮಿಸುವುದು ಹಿಂದಿನಿಂದಲೂ ನಡೆಸಿಕೊಂಡು ಬಂದ ಪದ್ಧತಿ. ದನಕರುಗಳಿಗೂ ಈಗಾಗಲೇ ಚುಚ್ಚುಮದ್ದು ಹಾಕಿಸಿದ್ದು ಜಾತ್ರೆಗೆ ಅವಕಾಶ ಮಾಡಿಕೊಡಬೇಕು.
– ಹೋರಿ ಮಹದೇವು, ದಮ್ಮನಹಳ್ಳಿ ಗ್ರಾಮ

ಚುಂಚನಕಟ್ಟೆ ಜಾನುವಾರು ಜಾತ್ರೆ ರಾಜ್ಯಕ್ಕೆ ಹೆಸರುವಾಸಿ. ಜಾತ್ರೆಗೆ ನಿರ್ಬಂಧ ವಿಧಿಸಿರುವುದು ಬೇಸರ ತಂದಿದೆ. ಜಿಲ್ಲಾಡಳಿತ ಈ ಬಗ್ಗೆ ಇನ್ನೊಮ್ಮೆ ಸೂಕ್ತ ಮಾರ್ಗಸೂಚಿಗಳೊಂದಿಗೆ ಅವಕಾಶ ನೀಡಬೇಕು.
– ಧರ್ಮಕುಮಾರ್, ರೈತ ಮುಖಂಡ.



ಹುಣಸೂರಿನ ಶ್ರೀಧನ್ವಂತರಿ ಸೇವಾ ಪ್ರತಿಷ್ಠಾನ ಗ್ರಾಮೀಣ ವೈದ್ಯಕೀಯ ಸೇವಾ ಸಂಸ್ಥೆ ಹಾಗೂ ಲಕ್ಷ್ಮಿ ಕ್ಲಿನಿಕ್ ಮತ್ತು ಪಾಲಿ ಕ್ಲಿನಿಕ್ ವತಿಯಿಂದ ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಈ ವೇಳೆ ಡಾ.ಎಸ್.ರಾಜು, ಎಸ್.ಆರ್.ತುಳಸಿಮಾತ ಹಾಗೂ ಪ್ರತಿಷ್ಠಾನದ ಸದಸ್ಯರು ಹಾಜರಿದ್ದರು.

ಕೆ.ಬಸವನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಪಿರಿಯಾಪಟ್ಟಣ, ಡಿ.23– ಮಾಜಿ ಶಾಸಕರ ಬೇಜವಾಬ್ದಾರಿಯಿಂದ ತಾಲೂಕು ಹಿಂದುಳಿದಿದ್ದು, ಅಭಿವೃದ್ಧಿ ಕಾರ್ಯ ಕೈಗೊಳ್ಳುವ ವಿಚಾರದಲ್ಲಿ ನನ್ನ ಮೇಲೆ ಒತ್ತಡ ಹೆಚ್ಚಾಗಿದೆ ಎಂದು ಶಾಸಕ ಕೆ.ಮಹದೇವ್ ಎಂದರು.

ತಾಲೂಕಿನ ಕೆ.ಬಸವನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ಗ್ರಾಮಕ್ಕೆ 70 ಲಕ್ಷ ರೂ. ಅನುದಾನ ನೀಡಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ನೀಡಲಾಗುವುದು. ವಿರೋಧ ಪಕ್ಷದವರು ಶಾಸಕರು ಒಕ್ಕಲಿಗರನ್ನು ದೂರ ಮಾಡಿ ಕುರುಬ ಸಮಾಜದ ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ. ರಾಜಕಾರಣಿಯಾದವರು ಯಾವುದೇ ಸಮಾಜ ಕಡೆಗಣಿಸದೆ ಎಲ್ಲಾ ಸಮಾಜದವರನ್ನು ಒಗ್ಗೂಡಿಸಿದಾಗ ಮಾತ್ರ ತಾಲೂಕಿನ ಅಭಿವೃದ್ಧಿ ಸಾಧ್ಯ. ನಾನು ಯಾವುದೇ ಸಮಾಜವನ್ನು ಕಡೆಗಣಿಸಿಲ್ಲ. ಯಾರನ್ನು ದ್ವೇಷ ಮಾಡಿಲ್ಲ. ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನೆಗೆ ಒತ್ತು ನೀಡುವಂತೆ ಮನವಿ ಮಾಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಗ್ರಾಮದ ಮುಖಂಡರು ಹಾಗೂ ಅಧಿಕಾರಿ ವರ್ಗ ಉಪಸಿತರಿದ್ದರು.

ಮಕ್ಕಳ ವಿದ್ಯಾಭ್ಯಾಸದಲ್ಲಿ ಪೋಷಕರ ಭಾಗವಹಿಸುವಿಕೆ ಮುಖ್ಯ

ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಅಭಿಮತ

ತಿ.ನರಸೀಪುರ, ಡಿ.23– ಭವಿಷ್ಯದ ದೃಷ್ಟಿಯಿಂದ ಮಕ್ಕಳ ವಿದ್ಯಾಭ್ಯಾಸದಲ್ಲಿ ಪೋಷಕರ ಭಾಗವಹಿಸುವಿಕೆ ಮುಖ್ಯ ಎಂದು ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ಅಭಿಪ್ರಾಯಪಟ್ಟರು.

ಪಟ್ಟಣದ ಸೇಂಟ್ ಮೇರಿಸ್ ಆಂಗ್ಲ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಪೋಷಕರು ಮಕ್ಕಳ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಳ್ಳುವುದನ್ನು ತಮ್ಮ ಕರ್ತವ್ಯ ಎಂದುಕೊಳ್ಳಬೇಕು. ಇದರಿಂದ ಮಕ್ಕಳ ಸಾಮರ್ಥ್ಯ, ಪ್ರತಿಭೆ ಬಗ್ಗೆ ಸ್ಪಷ್ಟತೆ ದೊರಕುವ ಜೊತೆಗೆ ಪೋಷಕರ ಜ್ಞಾನವೂ ವೃದ್ಧಿಗೊಳ್ಳುತ್ತದೆ ಎಂದರು.

ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಿಕ್ಷಣದಲ್ಲಿ ಪಾಲ್ಗೊಳ್ಳುವಿಕೆಯ ವ್ಯವಧಾನವನ್ನು ಪೋಷಕರು ರೂಢಿಸಿಕೊಳ್ಳಬೇಕು. ಹಾಗಾದಲ್ಲಿ ಮಾತ್ರ ತಮ್ಮ ಮಕ್ಕಳಿಗೆ ಉತ್ತಮ ಗುರಿ ಮತ್ತು ಪಥ ನಿಗದಿ ಮಾಡಲು ಸಾಧ್ಯ ಸದ್ಯ 2019ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಲ್ಲಿದ್ದು, ಶಿಕ್ಷಣ ಕ್ಷೇತ್ರ ವ್ಯಾಪಾರೀಕರಣ ಆಗಿಬಿಟ್ಟಿದೆ. ಗಮನ ಕೇಂದ್ರೀಕರಿಸಲು ಭವಿಷ್ಯದ ದೃಷ್ಟಿಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆ ಮುಖ್ಯವಾಗುತ್ತದೆ. ಶಿಕ್ಷಣ ನೀತಿ ವಿದ್ಯಾರ್ಥಿಗಳಿಗೆ ಪೂರಕ ಅಥವಾ ಮಾರಕವೇ ಎಂಬುದರ ಬಗ್ಗೆ ಸರ್ಕಾರಕ್ಕೆ ಸಲಹೆ, ಸೂಚನೆಯನ್ನು ಪೋಷಕರು ನೀಡಬೇಕಿದೆ. ಇದು ಪೋಷಕರ ಜವಾಬ್ದಾರಿಯೂ ಕೂಡ ಎಂದರು.



ತಹಸೀಲ್ದಾರ್ ಸಿ.ಜಿ.ಗೀತಾ ಮಾತನಾಡಿ, ಮಕ್ಕಳಲ್ಲಿ ಸುಪ್ತ ಪ್ರತಿಭೆ ಅಡಗಿದ್ದು, ಅದನ್ನು ಹೊರತೆಗೆಯಬೇಕಾದ ಕಾಯಕವನ್ನು ಪೋಷಕರು ಮತ್ತು ಶಿಕ್ಷಕರು ಮಾಡಬೇಕಿದೆ. ಮಕ್ಕಳಲ್ಲಿ ಸಾಂಸ್ಕೃತಿಕ, ಕ್ರೀಡೆ, ಸ್ಪರ್ಧಾತ್ಮಕ ಮನೋಭಾವ ರೂಢಿಸಿಕೊಳ್ಳುವ ಜೊತೆಗೆ ಮಕ್ಕಳನ್ನು ಬಹುಮುಖ ಪ್ರತಿಭೆಗಳಾಗಿ ರೂಪಿಸುವ ಹೊಣೆ ಶಿಕ್ಷಕ ಮತ್ತು ಪೋಷಕ ವರ್ಗದ ಮೇಲಿದೆ ಎಂದರು.

ಶಾಲೆ ಸಂಸ್ಥಾಪಕ ಅಧ್ಯಕ್ಷ ಪಾಲ್ ಬೆನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಚಟುವಟಿಕೆ ನಡೆಯಿತು.

ಕಾರ್ಯಕ್ರಮದಲ್ಲಿ ಬಿಇಓ ಮರಿಸ್ವಾಮಿ, ಪುರಸಭೆ ಸದಸ್ಯೆ ರೂಪ, ಸೇಂಟ್ ಮೇರಿಸ್ ಶಿಕ್ಷಣ ಸಂಸ್ಥೆ ನಿರ್ದೇಶಕ ರೆನ್ನಿ ವರ್ಗೀಸ್, ಶಾಲಾ ಪ್ರಾಂಶುಪಾಲ ಕ್ಷೇವಿಯರ್ ಅಂತೋಣಿ, ಉಪ ಪ್ರಾಂಶುಪಾಲ ಆರ್.ಗೋವಿಂದ್, ಶಾಲಾ ನಿರ್ವಹಣಾಧಿಕಾರಿ ಜಫಿನ್ ಜೋಸೆಫ್, ಶಿಕ್ಷಕರಾದ ಕರುಣೇಶ್, ಮಹೇಶ್, ಶಾಂತಮಣಿ, ಥೆರೆಸಾ ಮೇರಿ, ಪುಷ್ಪಲತಾ, ನಿರ್ಮಲ, ಉಷಾ, ಸುನೀತಾ, ಶಿಲ್ಪ, ವಿಜ್ಞೇಶ್ , ಯಶೋಧ, ಸ್ನೇಹಪ್ರಭಾ, ನಂದಿನಿ, ಜೀತನ್ ಥೆರೇಸಾ, ಲಿಖಿತ ಇತರರಿದ್ದರು.

ಅಧಿವೇಶನದಲ್ಲಿ ಅನುಪಯುಕ್ತ ವಾಹನ ವಿಲೇವಾರಿ ಚರ್ಚೆ



ನಂಜನಗೂಡು, ಡಿ.23– ರಾಜ್ಯದ ವಿವಿಧ ಸರ್ಕಾರಿ ಕಚೇರಿ ಆವರಣದಲ್ಲಿ ಬಳಕೆಗೆ ಬಾರದ ಅನುಪಯುಕ್ತ ಸರ್ಕಾರಿ ವಾಹನಗಳು ತುಕ್ಕು ಹಿಡಿದು ನಿಂತಿದ್ದು, ಇದರಿಂದ ವಾಹನಗಳ ಪಾರ್ಕಿಂಗ್ ಸಮಸ್ಯೆ ಉಂಟಾಗಿದೆ. ಹೀಗಾಗಿ ಸರ್ಕಾರಿ ಕಚೇರಿ ಆವರಣದಲ್ಲಿ ನಿಂತಿರುವ ಅನುಪಯುಕ್ತ ವಾಹನಗಳ ಸಮಸ್ಯೆ ಪರಿಹರಿಸಲು ಸರ್ಕಾರ ಮುಂದಾಗಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಒತ್ತಾಯಿಸಿದರು.


ಶುಕ್ರವಾರ ವಿಧಾನಸಭೆಯಲ್ಲಿ ಗಮನ ಸೆಳೆಯುವ ಸೂಚನೆ ವೇಳೆ ವಿಷಯ ಪ್ರಸ್ತಾಪಿಸಿ ಮಾತನಾಡಿದ ಅವರು, ಬೆಂಗಳೂರಿನಂತಹ ಮಹಾನಗರದ ಸರ್ಕಾರಿ ಕಚೇರಿಗಳ ಆವರಣದಲ್ಲೂ ಇಂತಹ ಅನುಪಯುಕ್ತ ವಾಹನಗಳು ಸಾಲುಗಟ್ಟಿ ನಿಂತಿವೆ. ಇದರಿಂದ ಪಾರ್ಕಿಂಗ್ ಸಮಸ್ಯೆ ಕಾಡುತ್ತಿದೆ. ಕೆಲಸ ಕಾರ್ಯಗಳಿಗೆ ಬರುವ ಜನರು ವಾಹನಗಳನ್ನು ಕಚೇರಿ ಹೊರಗೆ ನಿಲ್ಲಿಸುತ್ತಿದ್ದಾರೆ. ಅಲ್ಲಿ ನಿಲ್ಲುವ ವಾಹನಗಳಿಗೆ ಸಂಚಾರ ಪೊಲೀಸರು ನೋಪಾರ್ಕಿಂಗ್ ಹೆಸರಿನಲ್ಲಿ ದಂಡ ವಿಧಿಸುತ್ತಿದ್ದಾರೆ. ಇಂತಹ ಕಿರಿಕಿರಿ ತಪ್ಪಿಸಲು ತುಕ್ಕು ಹಿಡಿದಿರುವ ವಾಹನಗಳನ್ನು ತ್ವರಿತವಾಗಿ ತೆರವುಗೊಳಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಧ್ವನಿಗೂಡಿಸಿದ ಶಾಸಕಿ ಸೌಮ್ಯರೆಡ್ಡಿ ಬೆಂಗಳೂರಿನಲ್ಲಿ ಅನುಪಯುಕ್ತ ವಾಹನಗಳು ಪಾಳು ಬಿದ್ದಿವೆ. ಇದರಿಂದಲೂ ಪಾರ್ಕಿಂಗ್ ಸಮಸ್ಯೆ ಹೆಚ್ಚಾಗುತ್ತಿದೆ ಎಂದರು.

ಶಾಸಕ ಯು.ಟಿ.ಖಾದರ್ ಸಹಾ ಅನುಪಯುಕ್ತ ವಾಹನಗಳ ವಿಲೇವಾರಿಗೆ ತ್ವರಿತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಶಾಸಕ ಹರ್ಷವರ್ಧನ್ ಸೂಕ್ಷ್ಮ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಹಲವಾರು ಬಾರಿ ಆರ್‌ಟಿಓ ಸೇರಿದಂತೆ ಹಲವು ಇಲಾಖೆ ಅಧಿಕಾರಿಗಳಿಗೆ ಹೇಳಿರುವೆ, ಆದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಕುರಿತು ಶೀಘ್ರ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸಲಹೆ ನೀಡಿದರು.

ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಉತ್ತರ ನೀಡಿ, ಇಂತಹ ವಾಹನಗಳನ್ನು ಹರಾಜು ಮಾಡಲು ಅವಕಾಶವಿದೆ. ಆದರೆ, 15 ವರ್ಷಗಳ ಬಳಿಕ ವಾಹನ ಬಳಕೆಗೆ ಯೋಗ್ಯವಿಲ್ಲ ಎಂದು ತೀರ್ಮಾನಿಸಿ ಗುಜರಿಗೆ ಕೊಡಬೇಕು. ಇನ್ನೂ ಪೊಲೀಸ್ ಠಾಣೆಗಳ ಆವರಣದಲ್ಲಿ ನಿಲ್ಲುವ ವಾಹನಗಳಿಗೆ ಸಂಬಂಧಿಸದಂತೆ ನ್ಯಾಯಾಲಯಗಳಲ್ಲಿ ಪ್ರಕರಣಗಳಿರುವುದರಿಂದ ವಿಲೇವಾರಿ ಸಾಧ್ಯವಿಲ್ಲ. ಉಳಿದಂತೆ ಸರ್ಕಾರದ ಅನುಪಯುಕ್ತ ವಾಹನಗಳನ್ನು ವಿಲೇ ಮಾಡಲು ಹರಾಜು ಪ್ರಕ್ರಿಯೆ ಸರಳಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸೋಮಸುಂದರ್ ನಿಧನ



ನಂಜನಗೂಡು, ಡಿ.23– ಭಾರತೀಯ ಜೀವ ವಿಮಾ ಪ್ರತಿನಿಧಿ ಎಸ್.ಸೋಮಸುಂದರ್ (62) ಗುರುವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಸಹೋದರ, ಓರ್ವ ಸಹೋದರಿ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ನಗರದ ಬ್ರಾಹ್ಮಣ ಸ್ಮಶಾನದಲ್ಲಿ ನಡೆಯಿತು. ಭಾರತೀಯ ಜೀವ ವಿಮಾ ನಿಗಮದ ವ್ಯವಸ್ಥಾಪಕ ಗುರುರಾಜ್, ಉಪ ವ್ಯವಸ್ಥಾಪಕ ನರಸಿಂಹ, ನಿವೃತ್ತ ಅಭಿವೃದ್ಧಿ ಅಧಿಕಾರಿ ಟಿ.ಎನ್.ರವಿ ಶಂಕರ್, ಪ್ರತಿನಿಧಿ ಒಕ್ಕೂಟದ ಅಧ್ಯಕ್ಷ, ಸದಸ್ಯರು ಸೇರಿದಂತೆ ಶಾಖಾ ಸಿಬ್ಬಂದಿ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.


ಪಂಚರತ್ನ ರಥಯಾತ್ರೆಗೆ ಸುಸ್ವಾಗತ
ರೈತ ಬಂಧು, ಯುವಕರ ಕಣ್ಮಣಿ, ಅಲ್ಪಸಂಖ್ಯಾತರು,
ಹಿಂದುಳಿದವರು, ದೀನದಲಿತರು, ಬಡವರ ಪಾಲಿನ ಆಶಾಕಿರಣ
ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಅವರಿಗೆ ಹಾರ್ದಿಕ ಸುಸ್ವಾಗತ
ಪಂಚರತ್ನ ಯೋಜನೆಗಳು
1. ಶಿಕ್ಷಣವೇ ಅಧಿಕ ಶಕ್ತಿ
2. ಆರೋಗ್ಯವೇ ಸಂಪತ್ತು
3. ರೈತ ಚೈತನ್ಯ
4. ಯುವ ನವಮಾರ್ಗ ಹಾಗೂ ಮಹಿಳಾ ಸಬಲೀಕರಣ
5. ವಸತಿಯ ಆಸರೆ
ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಪಂಚರತ್ನ ರಥಯಾತ್ರೆಯು ಇಂದು ಬೆಳಗ್ಗೆ 8.30ಕ್ಕೆ ಕೆಆರ್‌ಎಸ್‌ನಿಂದ ಪ್ರಾರಂಭವಾಗಿ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಸಂಚರಿಸಿ, ಪಾಂಡವಪುರ ಪಟ್ಟಣ ಪ್ರವೇಶಿಸಲಿದೆ.
ಬಳಿಕ ಬೃಹತ್ ಸಭೆ ನಡೆಯಲಿದ್ದು, ನಂತರ ಮತ್ತೆ ಮೆರವಣಿಗೆ ಪ್ರಾರಂಭವಾಗಿ ಶಿವಳ್ಳಿ ತಲುಪಿ ಅಲ್ಲಿಯೂ ಬೃಹತ್ ಸಭೆ ನಡೆಸಿ ವಾಸ್ತವ್ಯ ಹೂಡಲಿದೆ.
ಈ ಕಾರ್ಯಕ್ರಮಕ್ಕೆ ಜೆಡಿಎಸ್ ಕಾರ್ಯಕರ್ತರು, ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಂಚರತ್ನ ಯಾತ್ರೆ ಯಶಸ್ವಿಗೊಳಿಸಬೇಕಾಗಿ ಕೋರುತ್ತಾ...
ಸರ್ವರಿಗೂ ಸ್ವಾಗತ ಬಯಸುವವರು